ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ
### ಎಂ.ಎ. (ಪ್ರಥಮ)

# ಚೀನಾ – ಜಪಾನ್ ಇತಿಹಾಸ ಹಕ್ಕೊತ್ತಾಯ ಮಿತ್ರ ಆಳ್ವಿಕೆ ಬಾಕ್ಸರ್ ದಂಗೆ ಸನ್‌ಯಾತ್ ಸೇನ್ ಮೆಯ್ಜಿ ಪುನರ್ ಸ್ಥಾಪನೆ ಮಂಚೂಕೊ

ಕೋರ್ಸ್ – 5

ಬ್ಲಾಕ್ – 6

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ -5

# ಬ್ಲಾಕ್ 6

ಘಟಕ - 153 — 1-10
ಕೊರಿಯಾದಲ್ಲಿ ಜಪಾನಿನ ಹಿತಾಸಕ್ತಿಗಳು

ಘಟಕ - 154 — 11-20
ಜಪಾನ್ ಮತ್ತು ಮೊದಲನೆ ಮಹಾಯುದ್ಧ

ಘಟಕ - 155 — 21-28
ಯುದ್ಧಗಲ ನಡುವಿನ ಕಾಲದಲ್ಲಿ ಜಪಾನಿನ ಆಂತರಿಕ ಬೆಳವಣಿಗೆಗಳು

ಘಟಕ - 156 — 29-40
ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಜಪಾನಿನ ವಿದೇಶಾಂಗ ನೀತಿ.

ಘಟಕ - 157 — 41-52
ಚೀನಾ - ಜಪಾನ್ ಸಂಬಂಧಗಳು, 1931ರ ವರೆಗೆ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್.ಎನ್. ವಿಕ್ರಮ್‌ರಾಜ್ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎ. ಸೋಮಶೇಖರ್**
**ಪ್ರವಾಚಕರು**
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

***ವಿಷಯ ಸಂಯೋಜಕರು***

## ಪಠ್ಯಕ್ರಮ ನಿರೂಪಕರು

ಮೂಲ : ಪ್ರೊ.ಎಸ್.ಮೀರ್ ಸಮೀವುಲ್ಲಾ — **ಘಟಕಗಳು 153 ರಿಂದ 157**
ಇತಿಹಾಸ ಪ್ರಾಧ್ಯಾಪಕರು
ಬೋಗಾದಿ, ಮೈಸೂರು

ಅನುವಾದ : ಪ್ರೊ.ಕೆ.ಬಿ. ಚಂದ್ರ — **ಘಟಕಗಳು 153 ರಿಂದ 157**
ಇತಿಹಾಸ ಪ್ರಾಧ್ಯಾಪಕರು (ನಿವೃತ್ತ)
ಹಾಸನ

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಕೋರ್ಸ್ 5

## ಬ್ಲಾಕ್ 6

## ಚೀನಾ ಮತ್ತು ಜಪಾನಿನ ಇತಿಹಾಸ ಕ್ರಿ.ಶ. 1839 ರಿಂದ

### ಪೀಠಿಕೆ

ಈ 6ನೇ ಬ್ಲಾಕ್‌ನಲ್ಲಿ ನೀವು 1894-95ರಿಂದ ಜಪಾನಿನ ಇತಿಹಾಸದ ಅನೇಕ ಸಂಗತಿಗಳನ್ನು ಮತ್ತು ಕೊರಿಯಾ, ಮಂಚೂರಿಯಾ ಹಾಗೂ ಚೀನಾಗಳೊಂದಿಗೆ ಅದರ ಸಂಬಂಧಗಳ ಬಗ್ಗೆ ತಿಳಿದುಕೊಳ್ಳುವಿರಿ. ಐದು ಘಟಕಗಳನ್ನೊಳಗೊಂಡ ಈ ಬ್ಲಾಕ್‌ನಲ್ಲಿ ನೀವು ಜಪಾನಿನ ಪ್ರಾದೇಶಿಕ ವಿಸ್ತರಣೆ ಮತ್ತು ಮೊದಲನೆ ಮಹಾಯುದ್ಧದಲ್ಲಿ ಅದರ ಪ್ರಧಾನ ಪಾತ್ರ, 1919ರ ಪ್ಯಾರಿಸ್ ಶಾಂತಿ ಒಪ್ಪಂದ ಮತ್ತು 1922ರ ವಾಷಿಂಗ್‌ಟನ್ ಸಮ್ಮೇಳನಗಳಲ್ಲಿ ಅದರ ಪಾಲುಗಾರಿಕೆ ಮತ್ತು ರಾಷ್ಟ್ರಗಳ ಒಕ್ಕೂಟ ಸಂಘದಲ್ಲಿ ಅದರ ಸಕ್ರಿಯ ಪಾತ್ರಗಳ ಬಗ್ಗೆ ಅಧ್ಯಯನ ಮಾಡುವಿರಿ. 'ಬೃಹತ್ ಏಷ್ಯಾದ' ನಾಯಕನಾಗುವ ಅದರ ಕನಸು ಹೇಗೆ ನನಸಾಯಿತು ಎಂಬುದನ್ನು ತಿಳಿಯುವಿರಿ.

153ನೇ ಘಟಕವು ಕೊರಿಯಾದಲ್ಲಿ ಜಪಾನಿನ ಹಿತ್ತಾಸಕ್ತಿಗಳಿಗೆ ಸಂಬಂಧಿಸಿದೆ. ರಷ್ಯಾ ಸೇರಿದಂತೆ ಯಾವುದೇ ವಿದೇಶಿ ಶಕ್ತಿಯ ಹಿಡಿತದಿಂದ ಕೊರಿಯಾವನ್ನು ಸುರಕ್ಷಿತವಾಗಿಡಲು ಜಪಾನ್ ಯಾವಾಗಲೂ ಆಸಕ್ತಿ ಹೊಂದಿದ್ದಿತು. "ಶತ್ರು ಗಳ ಕೈಯಲ್ಲಿನ ಕೊರಿಯಾ-ಜಪಾನಿನ ಹೃದಯಕ್ಕೆ ಗುರಿಮಾಡಿದ ಚೂರಿಯಂತೆ" ಎಂದು ಅದು ವರ್ಣಿಸಿದ್ದಿತು.

154ನೇ ಘಟಕದಲ್ಲಿ ನೀವು ಮೊದಲನೆ ಮಹಾಯುದ್ಧದಲ್ಲಿ ಜಪಾನಿನ ಪಾತ್ರದ ಬಗ್ಗೆ ತಿಳಿಯುವಿರಿ. ಮೊದಲನೆ ಮಹಾಯುದ್ಧದ ಆರಂಭವು, ತನ್ನ ಸಾಮ್ರಾಜ್ಯಶಾಹಿ ಬಯಕೆಯನ್ನುಈಡೇರಿಸಿಕೊಳ್ಳಲು ಜಪಾನಿಗೆ ಉತ್ತಮ ಅವಕಾಶವನ್ನು ಒದಗಿಸಿತು. ಯೂರೋಪಿನ ರಾಷ್ಟ್ರಗಳು ಯುದ್ಧದಲ್ಲಿ ಮುಳುಗಿ ಹೋಗಿದ್ದುದರಿಂದ ಉಂಟಾಗಿದ್ದ ಸಂದರ್ಭವನ್ನು ಅದು ಒಟ್ಟಾರೆ ದೂರಪ್ರಾಚ್ಯದಲ್ಲಿ ಮತ್ತು ಮುಖ್ಯವಾಗಿ ಚೀನಾದಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಲು ಮತ್ತು ಭದ್ರಪಡಿಸಿಕೊಳ್ಳಲು ಸಂಪೂರ್ಣವಾಗಿ ಬಳಸಿಕೊಂಡಿತು.

155 ಮತ್ತು 156ನೇ ಘಟಕಗಳು ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಜಪಾನಿನ ಆಂತರಿಕ ಪ್ರಗತಿ ಮತ್ತು ವಿದೇಶಾಂಗ ನೀತಿಗಳಿಗೆ ಸಂಬಂಧಿಸಿವೆ. ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಜಪಾನ್ ಆಕ್ರಮಣಕಾರಿ ನೀತಿಗೆ ಬದ್ಧವಾಗಿದ್ದಿತು. ಅದರ ವಿದೇಶಾಂಗ ನೀತಿಯನ್ನು ಸೈನಿಕ ವಿಸ್ತರಣೆಗಿಂತಲೂ ಆರ್ಥಿಕ ವಿಸ್ತರಣೆಯೊಂದಿಗೆ ಗುರುತಿಸಲಾಗಿತ್ತು.

ಕಡೆಯದಾದ 157ನೇ ಘಟಕದಲ್ಲಿ 1931ರವರೆಗಿನ ಚೀನಾ-ಜಪಾನ್ ಸಂಬಂಧಗಳ ಪ್ರಮುಖ ವಿಷಯಗಳನ್ನು ಚರ್ಚಿಸಲಾಗಿದೆ. ಕೊರಿಯಾದ ಪ್ರಶ್ನೆಯು ಚೀನಾ ಮತ್ತು ಜಪಾನಿನ ನಡುವೆ ವಿವಾದಕ್ಕೆ ಕಾರಣವಾಗಿದ್ದು, ಅಂತಿಮವಾಗಿ ನಡೆದ ಯುದ್ಧವು ಷಿಮನೋಸಕಿ ಒಪ್ಪಂದದಿಂದ ಕೊನೆಗೊಂಡಿತು. ಈ ಒಪ್ಪಂದವು ಜಪಾನಿನ ಘನತೆಯನ್ನು ಮುಗಿಲೆತ್ತರಕ್ಕೇರಿಸಿದರೆ, ಚೀನಾದ ಸ್ಥಾನವನ್ನು ಕೆಳಗಿಳಿಸಿತು. ಈ ಒಪ್ಪಂದವು 1905ರ ರಷ್ಯ-ಜಪಾನ್ ಯುದ್ಧಕ್ಕೆ ಮೂಲವಾಯಿತೆಂದು ಪರಿಗಣಿಸಲಾಗಿದ್ದು, ಈ ಯುದ್ಧದಲ್ಲಿ ಪುಟ್ಟ ದೇಶವಾದ ಜಪಾನ್ ಬಲಿಷ್ಠ ರಷ್ಯಾವನ್ನು ಸೋಲಿಸಿತು. ಅಲ್ಲದೆ 1905ರ ಯುದ್ಧದ ನಂತರ ಚೀನಾ-ಜಪಾನಿನ ಸಂಬಂಧಗಳು ಕ್ರಮೇಣ ಹದಗೆಟ್ಟುದುದನ್ನು ನಾವು ಕಾಣಬಹುದು. ಜಪಾನ್ ವಿಸ್ತರಣೆ ಮತ್ತು ಸಾಮ್ರಾಜ್ಯಶಾಹಿ ನೀತಿಯನ್ನು ಅನುಸರಿಸಿತು. ಸೆಪ್ಟಂಬರ್ 18, 1931ರಂದು, ಮಂಚೂರಿಯಾದಲ್ಲಿ ಜಪಾನಿಗೆ ಸೇರಿದ್ದ ರೈಲು ಮಾರ್ಗದಲ್ಲಿ ಒಂದು ಬಾಂಬ್ ಆಸ್ಫೋಟಿಸಿತು. ಈ ನೆಪದಲ್ಲಿ ಜಪಾನ್ ಮಂಚೂರಿಯಾದ ಮೇಲೆ ಆಕ್ರಮಣ ಮಾಡಿ ಅದನ್ನು ಒಂದು ವರ್ಷದಲ್ಲಿ ಸಂಪೂರ್ಣವಾಗಿ ವಶಪಡಿಸಿಕೊಂಡಿತು.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ 153
# ಕೊರಿಯಾದಲ್ಲಿ ಜಪಾನಿನ ಹಿತಾಸಕ್ತಿಗಳು

ರಚನೆ


153.0 ಉದ್ದೇಶಗಳು

153.1 ಪೀಠಿಕೆ

153.2 ಕೊರಿಯಾದಲ್ಲಿ ಜಪನಿನ ಧೋರಣೆ

153.3 ಕೊರಿಯಾದಲ್ಲಿ ಜಪಾನಿನ ಯೋಜನೆಗಳು

153.4 ಕೊರಿಯಾದಲ್ಲಿ ಜಪಾನಿನ ಚಟುವಟಿಕಗಳು

153.5 ಕೊರಿಯಾದ ಸ್ವಾಧೀನ(೧೯೧೦)

153.6 ಜಪಾನಿನ ಆಳ್ವಿಕೆಯಲ್ಲಿ ಕೊರಿಯಾ

153.7 ಕೊರಿಯಾದಲ್ಲಿ ದೇಶಭಕ್ತರ ದಂಗೆ

153.8 ಕೊರಿಯಾದಲ್ಲಿ ಜಪಾನಿನ ಆಡಳಿತ

153.9 ಕೊರಿಯಾವನ್ನು ಆಧುನೀಕರಣಗೊಳಿಸುವ ಪ್ರಯತ್ನಗಳು

153.10 ಕೊರಿಯಾದ ಸ್ವಾತಂತ್ರ

153.11 ಸಾರಾಂಶ

153.12 ನಿಮ್ಮ ಪ್ರಗತಿಯ ಪರೀಕ್ಷೆ

153.13 ಹೆಚ್ಚಿನ ಅಧ್ಯಯನಕ್ಕೆ ಸೂಚಿಸಲಾದ ಗ್ರಂಥಗಳು

## 153.0 ಉದ್ದೇಶಗಳು

ಯಥಾಸ್ಥಿತಿಯ ಸ್ಥಾಪನೆಗೆ ಮೊದಲು ಮತ್ತು ಆನಂತರ ಕೊರಿಯಾದಲ್ಲಿ ಜಪಾನಿನ ರಾಜಕೀಯ ಮತ್ತು ಆರ್ಥಿಕ ಹಿತ್ತಾಸಕ್ತಿಗಳ ಬಗ್ಗೆ ಚರ್ಚಿಸುವುದು. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಲವು ಸಂಗತಿಗಳನ್ನು ತಿಳಿದಿಕೊಳ್ಳಬೇಕಾಗುತ್ತದೆ.

* ಕೊರಿಯಾದೊಂದಿಗೆ ಜಪಾನಿನ ಸಂಬಂಧಗಳು

* ವಿಶ್ವದ ರಾಷ್ಟ್ರಗಳು-ಕೊರಿಯಾದ ಮೇಲೆ ಜಪಾನಿನ ಪ್ರಾಬಲ್ಯವನ್ನು ಒಪ್ಪಿಕೊಂಡುದುದು.

* ಕ್ರಿ.ಶ.1910ರ ಲ್ಲಿ ಜಪಾನ್ ಕೊರಿಯಾವನ್ನು ಸೇರಿಸಿಕೊಂಡ್ಡಿದು ಕೊರಿಯಾದಲ್ಲಿ ಜಪಾನಿನ ಆಡಳಿತ ಕೊರಿಯಾವನ್ನು ಆಧುನೀಕರಣಗೊಳಿಸಲು ಜಪಾನಿನ ಪ್ರಯತ್ನಗಳು.

* 1945ರಲ್ಲಿ ಜಪಾನಿನ ಶರಣಾಗತಿಯ ನಂತರ ಕೊರಿಯಾದ ಸ್ವಾತಂತ್ರ.

## 153.1 ಪೀಠಿಕೆ

ಜಪಾನಿನ ಹೃದಯಕ್ಕೆ ಗುರಿಯಾದಂತಿದ್ದ ಕೊರಿಯಾದ ಮೇಲೆ ಜಪಾನಿಗೆ ಯಾವಾಗಲೂ ಕಣ್ಣಿದ್ದಿತು. ಕೊರಿಯಾದ ಮೇಲೆ ಹತೋಟಿಯನ್ನು ಸ್ಥಾಪಿಸುವುದು ಜಪಾನಿನ ರಕ್ಷಣೆ ಮತ್ತು ಭದ್ರತೆಯ ದೃಷ್ಠಿಯಿಂದ ಅತ್ಯಗತ್ಯದೊಂದಿಗೆ ಯುದ್ಧದಲ್ಲಿ ತೊಡಗಬೇಕಾಗಿದ್ದಿತು. ಆದರೆ ಈ ಎರಡೂ ಯೂದ್ಧಗಳಲ್ಲೂ ಚೀನಾ ಜಯಗಳಿಸಿತು. 19ನೇ ಶತಮಾನದ ಕಡೆಯ ವೇಳೆಗೆ ಸನ್ನಿವೇಶ ಬದಲಾಗಿದ್ದಿತು. ಜಪಾನ್ ಪ್ರಬಲವಾಗಿದ್ದರೆ, ಚೀನಾ ಸಾಂಪ್ರದಾಯಿಕವಾಗಿ ಮತ್ತು ದುರ್ಬಲವಾಗಿ ಮುಂದುವರಿದಿದ್ದಿತು.

ಇದರ ಅನುಕೂಲವನ್ನು ಬಳಸಿಕೊಂಡು ಜಪಾನ್ ಚೀನಾದೊಂದಿಗೆ ಈ ಹಳೆಯ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ನಿರ್ಧರಿಸಿತು. ಕ್ರಿ.ಶ.1876ರಲ್ಲಿ ಜಪಾನ್ ಬಲವಂತವಾಗಿ ಕೊರಿಯವನ್ನು ಒಂದು ಒಪ್ಪಂದವನ್ನು ಮಾಡಿಕೊಳ್ಳವಂತೆ ಮತ್ತು ತನ್ನ ಎರಡು ಬಂದರುಗಳನ್ನು ಜಪಾನಿನ ವ್ಯಾಪಾರಕ್ಕೆ ತೆರೆಯುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಹೀಗೆ ಕೊರಿಯದಲ್ಲಿ ರಾಜಕೀಯ ಪರಿಸ್ಥಿತಿ ತ್ವರಿತವಾಗಿ ಬದಲಾಗತೊಡಗಿತು ಮತ್ತು ಹೆಚ್ಚು ಸಮಸ್ಯಾತ್ಮಕವಾಗತೊಡಗಿತು.

1894-95ರ ಮೊದಲನೆ ಚೀನಾ-ಜಪಾನ್ ಯುದ್ಧದ ನಂತರದ ವರ್ಷಗಳಲ್ಲಿ ಕೊರಿಯಾದಲ್ಲಿ ಜಪಾನಿನ ಪ್ರಾಬಲ್ಯ ಹೆಚ್ಚಿತು. ರಷ್ಯ ಸೇರಿದಂತೆ ಎಲ್ಲಾ ವಿದೇಶಿ ಶಕ್ತಿಗಳ ಹಿಡಿತದಿಂದ ಕೊರಿಯಾವನ್ನು ಸುರಕ್ಷಿವಾಗಿಡುವ ವಿಷಯದಲ್ಲಿ ಜಪಾನ್ ಮೊದಲಿನಿಂದಲೂ ಆಸಕ್ತಿ ಹೊಂದಿದ್ದಿತು. ಶತ್ರುಗಳ ಕೈಯಲ್ಲಿ ಕೊರಿಯಾ ತನ್ನ ಹೃದಯಕ್ಕೆ ಗುರಿಯಾಗಿರಿಸಿದ ಚೂರಿಯೆಂದು ಜಪಾನೆ ಈಗಾಗಲೇ ವರ್ಣಿಸಿದ್ದಿತು. ಮೊದಲನೆ ಚೀನಾ-ಜಪಾನ್ ಯುದ್ಧದ ನಂತರ ಜಪಾನ್ ಕೊರಿಯಾದ ಸರ್ಕಾರವನ್ನು ತನ್ನ ಇಷ್ಟಕ್ಕೆ ತಕ್ಕಂತೆ ರೂಪಿಸಲು ಬಯಸಿದ್ದಿತು. ಆದು ಕೊರಿಯಾವನ್ನು ದುರಾಡಳಿತಕ್ಕೊಳಗಾದ ಪ್ರಾಚೀನ ರಾಜಪ್ರಭುತ್ವದಿಂದ ತನ್ನ ಇಚ್ಛೆಗೆ ತಕ್ಕ ಆಧುನಿಕ ರಾಜ್ಯವನ್ನಾಗಿ ಮಾರ್ಪಡಿಸಲು ಪ್ರಯತ್ನಿಸಿತು.

1905ರಲ್ಲಿ ರಷ್ಯದ ವಿರುದ್ಧ ಜಪಾನಿನ ವಿಜಯವು ಪೂರ್ವಏಷ್ಯಾದಲ್ಲಿ ಅದಕ್ಕೆ ಶಾಶ್ವತ ಸ್ಥಾನವನ್ನು ದೊರಕಿಸಿಕೊಟ್ಟಿತು. ಪೋರ್ಟ್ಸ್‌ಮತ್ ಒಪ್ಪಂದವನ್ನು ಜಪಾನ್ ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಪ್ರಾರಂಭಿಸಿತು. ಬಲವಂತವಾಗಿ ರಷ್ಯಾವನ್ನು ಕೊರಿಯಾದಿಂದ ನಿರ್ಗಮಿಸುವಂತೆ ಮಾಡಿದ ಅದು ಕೊರಿಯಾದ ಆಂತರಿಕ ವ್ಯವಹಾರಗಳಲ್ಲಿ ತಾನೊಬ್ಬನೇ ಮಧ್ಯಪ್ರವೇಶಿಸಲು ಸಾಕಷ್ಟು ಸ್ವಾತಂತ್ರವನ್ನು ಪಡೆಯಿತು. ಅಲ್ಲದೆ ಆಗಸ್ಟ್ 12, 1905ದಲ್ಲಿ ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದದ ನವೀಕರಣವು ಕೊರಿಯದಲ್ಲಿ ಜಪಾನಿನ ಸಾಮ್ರಾಜ್ಯಶಾಹಿ ಹಿತ್ತಾಸಕ್ತಿಗಳಿಗೆ ಬ್ರಿಟನ್ನಿನ ಬೆಂಬಲವನ್ನು ಹೆಚ್ಚಿಸಿತು.

1905ರಲ್ಲಿ ಕೊರಿಯಾ ಜಪಾನಿನ ಪರಿಣಿತರ ಸಲಹೆಗಳನ್ನು ಪಡೆಯಲು ಒಪ್ಪಿಕೊಂಡಂದಿನಿಂದಲೂ, ಜಪಾನಿನ ವರ್ತಕರು, ಕಾರ್ಮಿಕರು ಮತ್ತು ಸೇನಾ ಸಿಬ್ಬಂದಿಗಳು ಜಪಾನಿನ ಸವಲತ್ತುಗಳನ್ನು ತಮ್ಮ ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳಲು ಪ್ರಾರಂಭಿಸಿದರು. ಕೊರಿಯಾದ ಮೇಲೆ ಜಪಾನಿನ ಪ್ರಭಾವ ಅತಿ ಶೀಘ್ರವಾಗಿ ಹೆಚ್ಚಿತು. ಕೊರಿಯಾದ ಅಂಚೆ, ದೂರಸಂಪರ್ಕ ಮತ್ತು ದೂರವಾಣಿ

ವ್ಯವಸ್ಥೆಗಳ ಮೇಲೆ ಜಪಾನ್ ಹತೋಟಿಯನ್ನು ಸ್ಥಾಪಿಸಿತು. ಅಂತಿಮವಾಗಿ ಕ್ರಿ.ಶ.1910ರಲ್ಲಿ ಜಪಾನ್ ಕೊರಿಯಾವನ್ನು ತನ್ನೊಂದಿಗೆ ಸೇರಿಸಿಕೊಂಡಿತು.(ಸ್ವಾಧೀನಪಡಿಸಿಕೊಂಡಿತು)

## 153.2 ಕೊರಿಯಾದಲ್ಲಿ ಜಪಾನಿನ ಧೋರಣೆ

ಕ್ರಿ.ಶ.16ನೇ ಶತಮಾನದಿಂದಲೂ ಜಪಾನ್ ಕೊರಿಯಾದಲ್ಲಿ ತನ್ನ ಹಿತಾಸಕ್ತಿಗಳನ್ನು ಹೊಂದಿದ್ದಿತು. ಜಪಾನ್ ಕೊರಿಯವನ್ನು ತನ್ನದೇ ಆದ ಪ್ರದೇಶವೆಂದೂ ಮತ್ತು ತನ್ನ ಪ್ರಭಾವಕ್ಕೊಳಗಾದ ಪ್ರದೇಶವಂದೂ ಪರಿಗಣಿಸಿದ್ದಿತು. ಕೊರಿಯಾ ಸಹ ಜಪಾನಿನ ಪ್ರಾಬಲ್ಯವನ್ನು ಒಪ್ಪಿಕೊಂಡಿದ್ದು ಜಪಾನಿಗೆ ವಾರ್ಷಿಕ ಕಾಣಿಕೆಯನ್ನು ನೀಡುತ್ತಿದ್ದಿತು. ಜಪಾನ್ ಏಕಾಂತ ಮತ್ತು ಪ್ರತ್ಯೇಕದ ನೀತಿಯನ್ನು ಅನುಸರಿಸತೊಡಗಿದಾಗಿನಿಂದ ಕೊರಿಯಾದಲ್ಲಿ ಅದರ ಹಿತ್ತಾಸಕ್ತಿಗಳು, ಕ್ಷೀಣಿಸತೊಡಗಿದವು ಮತ್ತು ಚೀನಾದ ಹಿತ್ತಾಸಕ್ತಿಗಳು ಗಮನಾರ್ಹವಗಿ ಹೆಚಚಿದವು. ಕ್ರಮೇಣ ಜಪಾನ್ ತನ್ನ ಪ್ರತ್ಯೇಕತೆಯ ನೀತಿಯನ್ನು ಕೈಬಿಡಲಿ ನಿರ್ಧರಿಸಿತು ಮತ್ತು ಕೊರಿಯಾದಲ್ಲಿ ತನ್ನ ಹಿತಾಸಕ್ತಿಯನ್ನು ಅಭಿವೃದ್ಧಿಪಡಿಸಿತು.

ಜಪಾನಿನಲ್ಲಿ ಪುನರುಜ್ಜೀವನದ ನಂತರ ಮಿಜಿ ದೊರೆಯು ದೇಶದ ಬಗ್ಗೆ ಸಕ್ರಿಯ ಆಸಕ್ತಿ ವಹಿಸತೊಡಗಿದನು. ಅವನು ಜಪಾನಿನ ಪರಮಾಧಿಕರವನ್ನು ಒಪ್ಪಿಕೊಳ್ಳುವಂತೆ ಕೊರಿಯಾವನ್ನು ಕೇಳಿಕೊಂಡನು. ಆದರೆ ಕೊರಿಯಾ ಈ ಬೇಡಿಕೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ಜಪಾನಿನ ದೇಶಪ್ರೇಮಿಗಳು, ಈ ರಾಷ್ಟ್ರೀಯ ಅವಮಾನವನ್ನು ಸಹಿಸಲಿಲ್ಲ ಮತ್ತು ಹೆಚ್ಚು ಆಕ್ರಮಣಕಾರಿಗಳಾದ ಕೆಲವರು ಕೊರಿಯಾದ ಮೇಲೆ ಯುದ್ಧವನ್ನು ಹೂಡುವಂತೆ ದೊರೆಗೆ ಸಲಹೆ ಮಾಡಿದರು. ಆದಾಗ್ಯೂ ಇದನ್ನು ಒಪ್ಪದ ಜಪಾನಿನ ದೊರೆಯು ತಾಳ್ಮೆಯಿಂದಿರುವಂತೆ ಸೂಚಿಸಿದನು. ಇದರಿಂದ ಜಪಾನಿಯರು ತೃಪ್ತರಾದರೂ ದೊರೆಯು ಈ ಅವಮಾಲವನ್ನು ಮರೆಯಲಿಲ್ಲ ಮತ್ತು ಕೊರಿಯಾದ ಮೇಲೆ ಪರಮಾಧಿಕರವನ್ನು ಸ್ಥಾಪಿಸಲು ಅವನು ಸೂಕ್ತ ಅವಕಾಶಕ್ಕಾಗಿ ಕಾಯಲು ನಿರ್ಧರಿಸಿದನು.

1870-73ರ ಅವಧಿಯಲ್ಲಿ ಜಪನ್ ಕೊರಿಯಾದೊಂದಿಗೆ ವಾಣಿಜ್ಯ ಸಂಬಂದಗಳನ್ನು ಹೊಂದಲು ಪ್ರಯತ್ನಿಸಿತಾದರೂ ಪ್ರತ್ಯೇಕತೆಯ ನೀತಿಯನ್ನು ಅನುಸರಿಸಲು ನಿರ್ಧರಿಸಿತು. ಕೊರಿಯಾ ಐರೋಪ್ಯ ಮತ್ತು ವಿದೇಶಿ ವ್ಯಾಪಾರಸ್ಥರನ್ನು ದೇಶದೊಳಗೆ ಪ್ರವೇಶಿಸಲು ಅಥವಾ ಕ್ರೈಸ್ತ ಧಾರ್ಮಿಕ ಸಂಘಗಳನ್ನು ದೇಶದ ಒಳಕ್ಕೆ ಬರಲು ಅನುಮತಿ ನೀಡುವುದಕ್ಕಾಗಲಿ ಒಪ್ಪದಿರಲು ನಿರ್ಧರಿಸಿತು. ಕೊರಿಯಾದ ಈ ಪ್ರತಿರೋದದ ಒಟ್ಟು ಪರಿಣಾಮವೆಂದರೆ ಕೊರಿಯಾದೊಂದಿಗೆ ವಾಣಿಜ್ಯ ಸಂಬಂಧಗಳನ್ನು ಹೊಂದುವ ಜಪಾನಿನ ಪ್ರಯತ್ನಗಳ ವಿಫಲತೆ. ಈ ನಡುವೆ 1873ರಲ್ಲಿ ಚೀನಾ ಮತ್ತು ಜಪನಿನ ಪ್ರಯತ್ನಗಳು ಮಾಜಿಕೊಂಡ ಒಪ್ಪಂದದಂತೆ ಎರಡೂ ದೇಶಗಳು ಪರಸ್ಪರ ಆಕ್ರಮಣಕಾರಿ ನೀತಿಯನ್ನು ಅನುಸರಿಸದಿರಲು ಒಪ್ಪಿದವು.

ಆ ವೇಳೆಗೆ ಜಪಾನ್ ಕೊರಿಯಾದ ಉತ್ತರದ ಗಡಿಯ ವ್ಲಾಡಿವೋಸ್ಟಾಕ್‌ನಲ್ಲಿ ಒಂದು ಬಂದರನ್ನು ಸ್ಥಾಪಿಸಿದ ರಷ್ಯಾದ ಆಕ್ರಮಣಕಾರಿ ನೀತಿಯಿಂದ ಭೀತಿಗೊಳಗಾಯಿತು. ಆದ್ದರಿಂದ ಕೊರಿಯಾವನ್ನು ರಷ್ಯಾದ ತೆಕ್ಕೆಗೆ ಬೀಳದಂತೆ ತಡೆಯುವುದು ಕೊರಿಯಾದಲ್ಲಿ ಜಪಾನಿನ ಹಿತ್ತಾಸಕ್ತಿಯಾಗಿದ್ದಿತು. ಸೈನಿಕವಾದಿಗಳು ಹೆಸರು ಮತ್ತು ಕೀರ್ತಿಯನ್ನು ಗಳಿಸಲು ಯುದ್ಧವನ್ನು ಬಯಸಿದರು. ಆದ್ದರಿಂದ ಜಪಾನ್ ಸಹ ಕೊರಿಯಾದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸಿತು. ಕೊರಿಯಾದಲ್ಲಿ ಅಗತ್ಯವಾದ ಸುಧಾರಣೆಗಳನ್ನು ಜಾರಿಗೊಳಿಸುವ ಮೂಲಕ ವಿದೇಶಿ ಆಕ್ರಮಣದ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುವಂತೆ ಅದನ್ನು ಬಲಪಡಿಸುವುದು ಜಪಾನಿನ ಉದ್ದೇಶವಾಗಿದ್ದಿತು. ಇದರಿಂದ ರಷ್ಯಾದ ಪ್ರಭಾವ ಮತ್ತು ಮಧ್ಯಪ್ರವೇಶವನ್ನು ಹತ್ತಿಕ್ಕಬಹುದಾಗಿದ್ದಿತು. ಚೀನಾ ಕೊರಿಯಾದಲ್ಲಿ ಸುಧಾರಣೆಗಳ ಪರವಾಗಿಲ್ಲದಿದ್ದುದರಿಂದ ಕೊರಿಯಾವನ್ನು ಸ್ವತಂತ್ರ ರಾಷ್ಟ್ರವೆಂದು ಪರಿಗಣಿಸುವ ಮೂಲಕ ಜಪಾನ್ ಚೀನಾದ ಪ್ರಾಭಾವವನ್ನು ತೊಡೆದುಹಾಕಲು ಪ್ರಯತ್ನಿಸಿತು. ಹೀಗೆ 1875ರಲ್ಲಿ ಕೆಲವು ಕೊರಿಯಾನ್ನರು ಜಪಾನಿನ ನೌಕೆಯೊಂದರ ಮೇಲೆ ಗುಂಡುಹಾರಿಸಿದಾಗ, ಜಪಾನ್ ಒಂದು ಸೈನ್ಯವನ್ನು ಕೊರಿಯಾದ ಮೇಲೆ ದಾಳಿಗೆ ಕಳುಹಿಸಿಕೊಟ್ಟಿತು. ಜಪಾನಿನ ಸೈನ್ಯಾಧಿಕಾರಿಗಳು ಕೊರಿಯಾದೊಂದಿಗೆ ಬಲವಂತವಾಗಿ ಒಂದು ಸ್ನೇಹ ಮತ್ತು ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡರು. ಮಹತ್ವದ ಸಂಗತಿಯೆಂದರೆ ಕೊರಿಯಾ ಒಂದು ಸ್ವತಂತ್ರ ರಾಷ್ಟ್ರವಾಗಿ ಜಪಾನಿನೊಂದಿಗೆ ಈ ಒಪ್ಪಂದವನ್ನು ಮಾಡಿಕೊಂಡಿದ್ದಿತು ಮತ್ತು ಕೊರಿಯಾವನ್ನು ಸ್ವತಂತ್ರ ರಾಷ್ಟ್ರವೆಂದು ಪರಿಗಣಿಸುವ ಜಪಾನಿನ ಕ್ರಮವನ್ನು ಚೀನಾ ಪ್ರಬಲವಾಗಿ ವಿರೋಧಿಸಲಿಲ್ಲ. ಹೀಗೆ ಮಾಡಿಕೊಳ್ಳಲಾದ ಒಪ್ಪಂದಗಳು ಕೊರಿಯಾವನ್ನು ಹೊರಪ್ರಪಂಚಕ್ಕೆ ತೆರೆಯಲು ಕಾರಣವಾದವು.

## 153.3 ಕೊರಿಯಾದ ಮೇಲೆ ಜಪಾನಿನ ಯೋಜನೆಗಳು

ಸ್ಥಳೀಯ ದಂಗೆಯಾದ 'ಟ್ಯಾಂಗ್ ಹಾಕ್' ಚೀನಾ ಮತ್ತು ಜಪಾನುಗಳ ನಡುವೆ 1894-95ರ ಚೀನಾ-ಜಪಾನ್ ಯುದ್ಧಕ್ಕೆ ಕಾರಣವಾಯಿತು. ಈ ಯುದ್ಧದ ಪರಿಣಾಮವಾಗಿ ಜಪಾನ್ ಕೊರಿಯಾವನ್ನು ಆಕ್ರಮಿಸಿಕೊಂಡಿತು. ಕೊರಿಯಾದಲ್ಲಿ ಅದು ಏಕಪಕ್ಷೀಯವಾಗಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿತು. ಜಪಾನಿನ ಬಂಡವಾಳವನ್ನು ಮುಕ್ತವಾಗಿ ತೊಡಗಿಲಿ ಆರ್ಥಿಕ ಲಾಭವನ್ನು ಗಳಿಸಿತು. ಚೀನಾ-ಜಪಾನ್ ಯುದ್ಧದ ನಂತರ ಕೊರಿಯಾದ ಸಾರ್ವಭೌಮಾಧಿಕಾರವನ್ನು ಒಪ್ಪಿಕೊಳ್ಳಲಾಯಿತಾದರೂ, ಆರ್ಥಿಕವಾಗಿ ಅದು ಜಪಾನಿನ ಪ್ರಭಾವಕ್ಕೊಳ ಪಟ್ಟಿತು. ಜಪಾನ್ ಜಾರಿಗೆ ತಂದ ಸುಧಾರಣೆಗಳನ್ನು ಕೊರಿಯಾದ ರಾಣಿ ಒಪ್ಪಲಿಲ್ಲ. ಪರಿಣಾಮವಾಗಿ ಅವಳನ್ನು ಅನುಮಾನಾಸ್ಪದ ಸನ್ನಿವೇಶದಲ್ಲಿ ಕೊಲೆ ಮಾಡಲಯಿತು. ಇದು ಕೊರಿಯಾದಲ್ಲಿ ಜಪಾನಿಗೆ ಅನಾನುಕೂಲಕರ ಪರಿಸ್ಥಿತಿಯನ್ನು ಸೃಷ್ಟಿಸಿತು. ಆದರೆ ಕೊರಿಯಾದ ರಾಜಕೀಯ ಪಕ್ಷಗಳು ಸುಧಾರಣೆಗಳನ್ನು ಬೆಂಬಲಿಸಿದವು ಮತ್ತು ಕೊರಿಯಾದಲ್ಲಿ ಜಪಾನಿನ ಪ್ರಭಾವ ಅಪಾರವಾಗಿದ್ದು ಫೆಬ್ರವರಿ 11, 1896ರಂದು ಕೊರಿಯಾದ ದೊರೆ ಮತ್ತು ರಾಜಕುಮಾರನು ರಷ್ಯಾ ದೂತವಾಸದಲ್ಲಿ ವೇಶಮರೆಸಿಕೊಂಡು ಆಶ್ರಯ ಪಡದರು. ಕೊರಿಯಾದ ಚಕ್ರವರ್ತಿಯು ರಷ್ಯಾದ ದೂತವಾಸದಿಂದಲೇ ಸರ್ಕಾಎರವನ್ನು ನಡೆಸತೊಡಗಿದನು. ಕೋರಿಯಾದಲ್ಲಿ ತನ್ನ ಪ್ರಭಾವ ವಿಸ್ತರಣೆಯ ಹಾದಿಯಲ್ಲಿ ಯಾವುದೇ ರೀತಿಯಲ್ಲಿ ರಷ್ಯಾ ಎದುರಾಗುವುದನ್ನು ಬಯಸಿದ ಜಪಾನಿನ ಅಧಿಕಾರಿಗಳು ಇದನ್ನು ಇಷ್ಟಪಡಲಿಲ್ಲ. ಆದರೆ ರಾಣಿಯ ಕೊಲೆಯಿಂದಾಗಿ ಕೊರಿಯಾದಲ್ಲಿ ಜಪಾನಿನ ಪ್ರಭಾವ ಬಹಳವಾಗಿ ಕುಸಿಯಿತು ಬದಲಾಗಿ ರಷ್ಯಾದ ಪ್ರಭಾವ ಹೆಚ್ಚಿತು. ಆಡಳಿತದ ಸಡಿಲದಿಂದಾಗಿ ಕೊರಿಯಾದಲ್ಲಿ ಅವ್ಯವಸ್ಥೆ ತಲೆದೋರಿತು. ಕೊರಿಯಾದಲ್ಲಿ ರಷ್ಯಾದ ಪ್ರಭಾವದ ಹೆಚ್ಚಳದಿಂದ ರಷ್ಯಾರಾ ಮತ್ತು ಜಪಾನಿನ ಸಂಬಂಧಗಳು ಹದಗೆಟ್ಟವು. ಆದಾಗ್ಯೂ 1896ರಲ್ಲಿ ಈ ಎರಡೂ ರಾಷ್ಟ್ರಗಳ ನಡುವೆ ಒಂದು ಒಪ್ಪಂದವೇರ್ಪಟ್ಟು ಅದರಂತೆ ಎರಡೂ ರಾಷಟ್ರಗಳು ತಮ್ಮ ಪಾಡಗಳನ್ನು ವಾಪಸ್ ಕರೆಸಿಕೊಳ್ಳಲು ಮತ್ತು ಕೊರಿಯಾದಲ್ಲಿ ಸುವ್ಯವಸ್ಥೆಯನ್ನು ಕಾಯುವ ಜವಾಬ್ದಾರಿಯನ್ನು ಕೊರಿಯಾಕ್ಕೆ ಬಿಟ್ಟುಕೊಡಲು ಪರಸ್ಪರ ಸಮ್ಮತಿಸಿದವು. ಅಲ್ಲದೆ ಕೊರಿಯಾದಲ್ಲಿ ಅಭಿವೃದ್ಧಿಗೆ ಎರಡೂ ರಾಷ್ಟ್ರಗಳು ಜಂಟಿಯಾಗಿ ಬಂಡವಾಳ ತೊಡಗಿಸಲು ಒಪ್ಪಿದವು. ಸಂಕ್ಷಿಪ್ತವಾಗಿ, ಕೊರಿಯಾ ಮತ್ತು ಮಂಚೂರಿಯಾಗಳಲ್ಲಿ ಜಪಾನ್ ಮತ್ತು ರಷ್ಯಾಗಳು ಶತ್ರುಗಳಾಗಿದ್ದವು. ಆದರೆ ಎರಡೂ ರಾಷ್ಟ್ರಗಳು ಒಪ್ಪಂದದ ಷರತ್ತುಗಳನ್ನು ಪಾಲಿಸಲು ಹೆಚ್ಚು ಗಂಭೀರವಾಗಿ ಪ್ರಯತ್ನಸಲಿಲ್ಲ.

1990ರ ದಶಕದಲ್ಲಿ ಕೊರಿಯಾದ ಸೈನಿಕ ಮತ್ತು ಆರ್ಥಿಕ ಸಂಸ್ಥೆಗಳ ಮೇಲೆ ಸ್ವಲ್ಪಮಟ್ಟಿನ ಹತೋಟಿಯನ್ನು ಪಡೆಯುವ ರಷ್ಯಾ ತನ್ನ ಜನರನ್ನು ಕಳುಹಿಸಿತು. ರಷ್ಯಾದ ಅಧಿಕಾರಾತ್ಮ ಕ ದೋರಣೆಯು ಕೊರಿಯಾದಲ್ಲಿ ರಷ್ಯಾದ ವಿರುದ್ಧ ತೀವ್ರವಾದ ವಿರೋಧವನನು ಸೃಷ್ಟಿಸಿತು. ಇದೇ ವೇಳೆಯಲ್ಲಿ ಅದು ಕೊರಿಯಾದಲ್ಲಿ ಮುಂದೆ ಬರಲು ಜಪಾನಿಗೆ ಒಂದು ಸದವಕಾಶವನ್ನು ಕಲ್ಪಿಸಿತು.

ಕ್ರಿ.ಶ.1902ರಲ್ಲಿ ಜಪಾನ್ ಬ್ರಿಟನ್ನಿನೊಂದಿಗೆ ಒಂದು ಮೈತ್ರಿ ಒಪ್ಪಂದವನ್ನು ಮಾಡಿಕೊಂಡಿತು. ಕೊರಿಯಾ ಮತ್ತು ಮಂಚೂರಿಯಾಗಳಲ್ಲಿ ರಷ್ಯಾ ತನ್ನದೇ ಆಯೋಜನೆಗಳನ್ನು ಹೊಂದಿದ್ದುತು. ಇದು ಜಪಾನಿನೊಂದಿಗೆ (f1904-05) ಅದನ್ನು ಘರ್ಷಣೆಗಿಳುಯುವಂತೆ ಮಾಡಿತು ಮತ್ತು ಈ ಘರ್ಷಣೆಯಲ್ಲಿ ರಷ್ಯಾನ್ನರು ತೀವ್ರವಾದ ಸೋಲನ್ನನುಭವಿಸಿದರು. ಅಮೇರಿಕಾದ ಅಧ್ಯಕ್ಷ ಥಿಯೊಡರ್ ರೂಸೇವೆಲ್ಟನ ಮಧ್ಯಸ್ಥಿಕೆಯಿಂದ ಘರ್ಷಣೆ ಕೊನೆಗೊಂಡಿತು. 1905ರ ಪೋರ್ಟ್ಸ್‌ಮತ್ ಒಪ್ಪಂದದಿಂದ ಕೊರಿಯಾ ಮತ್ತು ಮಂಚೂರಿಯಾಗಳೆರಡರಲ್ಲೂ ತನ್ನ ವಿಸ್ತರಣೆಗೆ ಜಪಾನ್ ಹಾದಿಯನ್ನು ಸುಮಗೊಳಿಸಿಕೊಂಡತು. ನಂತರ 1910ರಲ್ಲಿ ಜಪಾನ್ ಕೊರಿಯಾವನ್ನು ಆಕ್ರಮಿಸಿಕೊಂಡಿತು.

## 153.4 ಕೊರಿಯಾದಲ್ಲಿ ಜಪಾನಿನ ಚಟುವಟಿಕೆಗಳು

1905ರಲ್ಲಿ ರಷ್ಯಾದ ಮೇಲೆ ಜಪಾನಿನ ವಿಜಯವು ಪೂರ್ವ ಏಷ್ಯಾದಲ್ಲಿ ಜಪಾನಿಗೆ ಪರಮಾಧಿಕಾರದ ಸ್ಥಾನವನ್ನು ದೊರಕಿಸಿಕೊಟ್ಟಿತು. ಅದು ಯೂರೋಪಿನ ಸಾಮ್ರಾಜ್ಯಶಾಹಿ ರಾಷ್ಟ್ರಳು ತುಳಿದ ಹಾದಿಯಲ್ಲಿಯೇ ಮುನ್ನಡೆಯಲು ಪ್ರಾರಂಭಿಸಿತು. ಅದು ಚೀನಾದಲ್ಲಿ ರಿಯಾಯಿತಿಗಳಿಗಾಗಿ ಹೋರಾಟದಲ್ಲಿ ತೊಡಗಿದ್ದ ಯೂರೋಪಿನ ರಾಷ್ಟ್ರಗಳಿಗೆ ಪ್ರಬಲ ಮತ್ತು ಗಂಭೀರ ವಿರೋಧಿಯಾಯಿತು. ಅದು ಪೋರ್ಟ್ಸ್‌ಮತ್ ಒಪ್ಪಂದವನ್ನು ತನ್ನ ಅನುಕೂಲಕ್ಕೆ ಉತ್ತಮವಾಗಿ ಬೆಳೆಸಿಕೊಂಡಿತು. ರಷ್ಯಾವನ್ನು ಬಲವಂತವಾಗಿ ಕೊರಿಯಾದಿಂದ ನಿರ್ಗಮಿಸುವಂತೆ ಮಾಡಿದ ಜಪಾನ್ ಕೊಕಿಯಾದ ವ್ಯವಹಾರಗಳಲ್ಲಿ ಏಕಾಂಗಿಯಾಗಿ ಮಧ್ಯಪ್ರವೇಶಿಸಲು

ಹೆಚ್ಚಿನ ಸ್ವಾತಂತ್ರ ಪಡೆಯಿತು. ಏಕಾಂಗಿಯಾಗಿ ಮಧ್ಯಪ್ರವೇಶಿಸಲು ಹೆಚ್ಚಿನ ಸ್ವಾತಂತ್ರ ಪಡೆಯಿತು. ಮಿಗಿಲಾಗಿ ಆಗಸ್ಟ್ 12,1905ರಲ್ಲಿ ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದದ ನವೀಕರಣವು ಕೊರಿಯಾದಲ್ಲಿ ಜಪಾನಿನ ಸಾಮ್ರಾಜ್ಯಷಾಹಿ ಹಿತಾಸಕ್ತಿಗಳಿಗೆ ಬ್ರಿಟನ್ನಿನ ಬೆಂಬಲವನ್ನು ಹೆಚ್ಚಿಸಿತು.

ರಷ್ಯಾ ಮತ್ತು ಜಪಾನುಗಳ ನಡುವೆ ಕೊರಿಯಾ ವಿವಾದದ ವಿಷಯವಾಗಿತ್ತೆಂಬುದು ವಾಸ್ತವ ಸತ್ಯವಾಗಿತ್ತು. ಆದ್ದರಿಂದ ರಷ್ಯಾ-ಜಪಾನ್ ಯುದ್ಧದ ನಂತರ ರಷ್ಯಾವನ್ನು ಕೊರಾಯಾದಿಂದ ಸಂಪೂರ್ಣವಾಗಿ ಹೊರಗಟ್ಟಿದ ಜಪಾನ್ ತನ್ನ ಮೇಲೆ ರಷ್ಯಾ ಮತ್ತೊಮ್ಮೆ ಗಂಭೀರ ಬೆದರಿಕೆಯೊಡ್ಡಿದಂತೆ ಪರ್ಯಾಯ ದ್ವೀಪ ಪ್ರದೇಶದ ಮೇಲೆ ತನ್ನ ಹಿಡಿತವನ್ನು ಭದ್ರಪಡಿಕೊಳ್ಳಲು ಪ್ರಯತ್ನಿಸಿತು. ರಷ್ಯಾ -ಜಪಾನ್ ಯುದ್ಧದ ಪ್ರಾರಂಭಕ್ಕೆ ಮೊದಲು ಜಪಾನಿನ ದೊರೆ ಪ್ರತ್ಯೇಕ ಕೊರಿಯಾದ ಅಸ್ತಿತ್ವವನ್ನು ಪ್ರತಿಪಾದಿಸಿದ್ದನು. ಏಕೆಂದರೆ ಇದು ಜಪಾನಿನ ಭದ್ರತೆಯನ್ನು ಖಾತ್ರಿಪಡಿಸುತ್ತಿದ್ದಿತು. ಫೆಬ್ರವರಿ, 1904ರಲ್ಲಿ "ತನ್ನ ರಾಜ ಕುಟುಂಬದ ಭದ್ರತೆಯ ಭರವಸೆ ಮತ್ತು ತನ್ನ ನೆಲದ ಸಮಗ್ರತೆ ಹಾಗೂ ಸ್ವಾತಂತ್ರದ ಭರವಸೆಗೆ ಪ್ರತಿಯಾಗಿ" ಜಪಾನಿನ ಸ್ನೇಹ ಪ್ರಸ್ತಾಪವನ್ನು ಸ್ವೀಕರಿಸಲು ಕೊರಿಯಾ ಒಪ್ಪಿದಾಗ ಕೊರಿಯಾದ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸಲು ಜಪಾನಿಗೆ ಅವಕಾಶ ಒದಗಿ ಬಂದಿತು. ಈಗ ಕೊರಿಯಾ ಜಪಾನಿನ ನಿಜವಾದ ಮಿತ್ರನಾಯಿತು ಮತ್ತು ಆರ್ಥಿಕ ಹಾಗೂ ಆಡಳಿತದ ವಿಚಾರಗಳಲ್ಲಿ ಜಪಾನಿನ ಸಲಹೆ ಮತ್ತು ಸೂಚನೆಗಳನ್ನು ಒಪ್ಪಿಕೊಂಡಿತು. ಜಪಾನ್ ಸರ್ಕಾರ ನೇಮಕ ಮಾಡಿದ ಸಲಹೆಗಾರರನ್ನು ಕೊರಿಯಾದ ಅತ್ಯಂತ ಪ್ರಮುಖ ಹುದ್ದೆಗಳಿಗೆ ನೇಮಿಸಲಾಯಿತು. 1905ರ ನವಂಬರ್‌ನಲ್ಲಿ ರಾಜಕುಮಾರ ಇಟೋನನ್ನು ಕೊರಿಯಾ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೊರಿಯಾಕ್ಕೆ ಕಳುಹಿಸಿಕೊಟ್ಟಿತು. ಅವನು ಕೋರಿಯಾ ಸರ್ಕಾರ ತನ್ನ ವಿದೇಶಿ ವ್ಯವಹಾರವನ್ನು ಜಪಾನಿಗೆ ವಹಿಸಿಕೊಡುವಂತೆ ಬಲತ್ಕಾರವಾಗಿ ಒಂದು ಒಪ್ಪಂದಕ್ಕೆ ಸಹಿ ಹಾಕಿಸಿದನು. ಕೊರಿಯಾದ ಆಡಳಿತದ ಸಮಗ್ರ ಮೇಲ್ವಿಚಾರಣೆಯ ವಿಶೇಷ ಅಧಿಕಾರವೂ ಸೇರಿದಂತೆ ತನ್ನ ರಾಜಧಾನಿ ಸಿಯಾಲ್‌ನಲಲಿ ಜಪಾನಿನ ಅಧಿಕಾರಿಯನ್ನು ಇರಿಸಿಕೊಳ್ಳಲು ಒಪ್ಪಿಕೊಳ್ಳವಂತೆಯೂ ಅವನು ಕೊರಿಯಾದ ಮನವೊಲಿಸಿದನು.

ಹೀಗೆ 1904-05ರ ಯುದ್ಧದ ನಂತರ ಕೊರಿಯಾದಲ್ಲಿ ಜಪಾನಿನ ರಕ್ಷಣೆಯನ್ನು ಸ್ಥಾಪಿಸಲಾಯಿತು. ರಾಜಕುಮಾರ ಇಟೊ 1907ರಲ್ಲಿ ಸಿಯೋಲ್‌ನಲ್ಲಿ ಜಪಾನಿನ ಮೊದಲ ಅಧಿಕಾರಿಯಾದನು (Rsidnt General). ಬ್ರಿಟನ್ ಭಾರತದಲ್ಲಿ ಸ್ಥಳೀಯ ರಾಜ್ಯಗಳ ಮೇಲ್ವಿಚಾರಣೆಯನ್ನು ನೋಡಿಕೊಂಡಂತೆ ಅವನು ದೇಶಿಯ ಶಕ್ತಿಗಳ ಮೂಲಕ ಕೊರಿಯಾವನ್ನು ನಿಯಂತ್ರಿಸುವ ಎಲ್ಲಾ ಪ್ರಯತ್ನವನ್ನು ಮಾಡಿದನು. ಕೊರಿಯಾ ಸರ್ಕಾರದ ಕಾರ್ಯಾಂಗ ಮತ್ತು ಶಾಸಕಾಂಗ ಸುಧಾರಣೆಳು ಸೇರಿದಂತೆ ಸರ್ಕಾರದ ಪ್ರಮುಖ ವ್ಯವಹಾರ ಗಳಲ್ಲಿ ಜಪಾನಿನ ಸಲಹೆಗಾರರಿಗೆ ಅವಕಾಶ ನೀಡುವಂತೆ ಅವನು ಕೊರಿಯಾದ ಚಕ್ರವರ್ತಿಯನ್ನು ಒತ್ತಾಯಪಡಿಸಿದನು. ಇಟೊ ಮಂಡಿಸಿದ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಕೊರಿಯಾದ ಚಕ್ರವರ್ತಿ ಸಿದ್ಧನಿರಲಿಲ್ಲ. ಅವನು ತನ್ನ ಮಗನ ಪರವಾಗಿ ಅಧಿಕಾರವನ್ನು ತ್ಯಜಿಸಲು ನಿರ್ಧರಿಸಿದನು. ಯುವಕ ರಾಜನು ಇಟೊನ ಬೇಡಿಕೆಗಳನ್ನು ಒಪ್ಪಿದನು. ಪೂರ್ವಏಷ್ಯದಲ್ಲಿ ಜಪಾನಿನೊಂದಿಗೆ ತನ್ನ ಸಂಬಂಧವನ್ನು ಕಡಿದುಕೊಳ್ಳಲು ಬಯಸಲಿಲ್ಲ. ಈಗಾಗಲೇ ತಿಳಿದಿರುವಂತೆ ಬ್ರಿಟನ್ ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದದ ನವೀಕರಣದ ಮೂಲಕ ಕೊರಿಯದಲ್ಲಿ ಜಪಾನಿನ ಚಟುನಟಿಕೆಗಳಿಗೆ ಬೆಂಬಲ ನೀಡಿದ್ದಿತು. ಕೊರಿಯಾದಲ್ಲಿ ಜಪಾನಿನ ಆಕ್ರಮಣಕಾರಿ ನೀತಿಯನ್ನು ವಿರೋಧಿಸುವ ಯಾವ ಯೂರೋಪಿನ ರಾಷ್ಟ್ರವೂ ಇರಲಿಲ್ಲ.

## 153.5 ಕೊರಿಯಾದ ಸೇರ್ಪಡೆ(ಸ್ವಾಧೀನ) (1910)

ಕೊರಿಯಾದ ವ್ಯವಹಾರವನ್ನು ನಿರ್ವಹಿಸುವಲ್ಲಿ ಇಟ್ಟೋ ಬಹಳ ಮುಂದೆ ಹೋಗಿದ್ದರೂ ತಮ್ಮ ಸಾಧನೆಯಿಂದ ಜಪಾನಿಯರಿಗೆ ತೃಪ್ತಿಯಾಗಿರಲಿಲ್ಲ. ಜಪಾನಿನ ತೀವ್ರಗಾಮಿ ಮಿಲಿಟರಿ ನಾಯಕರು ಕೊರಿಯಾವನ್ನು ಸಂಪೂರ್ಣವಾಗಿ ಜಪಾನಿನೊಂದಿಗೆ ಸೇರಿಸಿಕೊಳ್ಳಲು ಬಯಸಿದ್ದರು.

1905ರ ಪ್ರಾರಂಬದಲ್ಲಿಯೇ ಕೊರಿಯಾ ಜಪಾನಿನ ರಕ್ಷಣೆಗೊಳಪಟ್ಟಿದ್ದಿತು.(ಆಶ್ರಿತ ರಾಜ್ಯವಾಗಿದ್ದಿತು) ಮತ್ತು ಅದನ್ನು ಅಂತರಿಕ ರಾಷ್ಟ್ರೀಯವಾಗಿ ಮಾನ್ಯಮಾಡಲಾಗಿದ್ದಿತು. ರಾಜನ ಅರಮನೆಯೂ ಸೇರಿದಂತೆ ಕೊರಿಯಾದ ಎಲ್ಲಾ ಪ್ರಮುಖ ಸ್ಥಳಗಳನ್ನು ಜಪಾನಿನ ಆರಕ್ಷಕರು ಕಾಯುತ್ತಿದ್ದರು. ಹೀಗೆ ಶಾಂತಿ ಸಮ್ಮೇಳನದಲ್ಲಿ ಕೊರಿಯಾದ ಪ್ರತಿನಿಧಿಳು ಜಪಾನಿನಿಂದ ಕೊರಿಯಾನ್ನರ

ಹಕ್ಕುಗಳ ಉಲ್ಲಂಘನೆಯ ಬಗ್ಗೆ ದೂರು ನೀಡಿದರು ಮತ್ತು ವಿಶ್ವದ ರಾಷ್ಟ್ರಗಳೊಂದಿಗೆ ನೇರವಾದ ರಾಜತಾಂತ್ರಿಕ ಸಂಬಂಧಗಳನ್ನು ಬೇಡಿದವು. ಇದನ್ನು ಸಹಿಸದ ಜಪಾನಿನ ಹಿರಿಯ ರಾಜತಂತ್ರಜ್ಞರು ಕೊರಿಯಾವನ್ನು ಸೇರ್ಪಡೆಗೊಳಿಸಿಕೊಂಡು ಆ ಮೂಲಕ ಅದನ್ನು ಶಿಕ್ಷಿಸುವ ಸಮಯ ಇನ್ನೂ ಬಂದಿಲ್ಲವೆಂದು ಅಭಿಪ್ರಾಯಪಟ್ಟರು. ಆದಾಗ್ಯೂ ಕೊರಿಯಾದ ಚಕ್ರವರ್ತಿಯು ತನ್ನ ಮಗನ ಪರವಾಗಿ ಸಿಂಹಾಸನವನ್ನು ತ್ಯಜಿಸುವಂತೆ ಬಲಾತ್ಕರಿಸಲಾಯಿತು. ಕೊರಿಯಾದೊಂದಿಗೆ ಹೊಸ ಒಪ್ಪಂದಗಳನ್ನು ಮಾಡಿಕೊಂಡು ಜಪಾನಿನ ಸ್ಥಳೀಯ ಅಧಿಕಾರಿಯು ನಿಜವಾದ ರಾಜಪ್ರತಿನಿಧಿಯಾದನು. ಕೊರಿಯಾದ ಮೇಲೆ ಜಪಾನಿನ ಹಿಡಿತ ಬಿಗಿಗೊಂಡಿತು ಮತ್ತು ಅಕ್ಟೋಬರ್, 26,1909ರಲ್ಲಿ ಕೊರಿಯಾ ರಾಷ್ಟ್ರೀಯನೊಬ್ಬನಿಂದ ಇಟೋನ ಕೊಲೆ ಕೊರಿಯಾವನ್ನು ಜಪಾನಿನೊಂದಿಗೆ ಸೇರಿಸಿಕೊಳ್ಳಲು ಒಂದು ನೆಪವಾಯಿತು. ಕೊರಿಯಾದಲ್ಲಿ ಎಲ್ಲಾ ಆಯಕಟ್ಟಿನ ಸ್ಥಳಗಳಲ್ಲಿ ಜಪಾನಿನ ಆರಕ್ಷಕರನ್ನು ಇರಿಸಲಾಯಿತು. ಸಾರ್ವಜನಿಕ ಅಭಿಪ್ರಾಯದ ಎಲ್ಲಾ ಮಾಧ್ಯಮಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಯಿತು ಮತ್ತು ದೊರೆಯು ಕೊರಿಯಾದ ಸೇರ್ಪಡೆಗೆ ಜಪಾನಿನ ಚಕ್ರವರ್ತಿಯನ್ನು ವಿನಂತಿಸಿಕೊಳ್ಳುವಂತೆ ಮಾಡಲಾಯಿತು. 1910ರ ಆಗಸ್ಟ್ 22ರಂದು ಸೇರ್ಪಡೆಯ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದನ್ನು ಜಪಾನಿನಲ್ಲಿ ಮಿಜಿ ಯುಗದ ಪ್ರಮುಖ ಸಾಧನೆಯೆಂದು ಬಣ್ಣಿಸಲಾಯಿತು. ಇದರೊಂದಿಗೆ ಕೊರಿಯಾ ಜಪಾನಿನ ಸಾಮ್ರಾಜ್ಯದ ಭಾಗವಾಯಿತು. ಅದನ್ನು 'ಚೋಸೆನ್'ಎಂದು ಮರು ನಾಮಕರಣ ಮಾಡಲಾಯಿತು ಮತ್ತು ಜಪಾನ್ ಅದನ್ನು ತನ್ನ ಮುಂದಿನ ವಿಸ್ತರಣೆಯ ಜಿಗಿಯುವ ಮಣೆಯನ್ನಾಗಿ ಬಳಸತೊಡಗಿತು. ಅಲ್ಲದೆ ಜಪಾನ್ ಕೊರಿಯಾವನ್ನು ಅತ್ಯಂತ ಕಠಿಣವಾಗಿ ಬಳಸಿಕೊಂಡಿತು ಮತ್ತು ಕೊರಿಯಾದ ಆರ್ಥಿಕ ಸಂಪನ್ಮೂಲಗಳನ್ನು ತನ್ನ ಆರ್ಥಿಕ ಪ್ರಗತಿ ಮತ್ತು ಮುನ್ನಡೆಗೆ ಬಳಸಿಕೊಂಡಿತು. ಇದು ಮೊದಲಿಗೆ ಮಹಾಯುದ್ಧ ಆರಂಭವಾದಾಗ ಕೊರಿಯಾದಲ್ಲಿ ಏರ್ಪಟ್ಟಿದ್ದ ಪರಿಸ್ಥಿತಿಯಾಗಿತ್ತು.

## 153.6 ಜಪಾನಿನ ಆಳ್ವಿಕೆಯಲ್ಲಿ ಕೊರಿಯಾ

ಕೊರಿಯಾವನ್ನು ಸೇರ್ಪಡೆಗೊಳಿಸಿಕೊಂಡು ನಂತರ ಜಪಾನ್ ಅದನ್ನು 'ಚೋಸೆನ'ಎಂದು ಮರುನಾಮಕರಣ ಮಾಡಿತು ಮತ್ತು ಅದನ್ನು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಶೋಷಣೆ ಮಾಡಲು ಪ್ರಯತ್ನಿಸಿತು. ಚೀನಾದ ಮುಖ್ಯ ಭೂಮಿಯಲ್ಲಿ ಜಪಾನಿನ ಮುಂದಿನ ವಿಸ್ತರಣೆಗೆ ಕೊರಿಯಾ ನಿಜವಾಗಿಯೂ ಪರಿಣಾಮಕಾರಿ ನೆಲೆಯಾಯಿತು. ಆದರೆ ಜಪಾನಿನ ಆಳ್ವಿಕೆಯಲ್ಲಿ ಕೊರಿಯಾದ ಭೌತಿಕ ಪರಿಸ್ಥಿತಿ ಅಪಾರವಾಗಿ ಬದಲಾದುದು ನಿಚ್ಚಳವಾಗಿದ್ದಿತು. ರಸ್ತೆಗಳು ಮತ್ತು ಬಂದರುಗಳ ಪರಿಸ್ಥಿತಿ ಬಹಳವಾಗಿ ಸುಧಾರಿಸಿತು. ತ್ವರಿತವಾದ ಸಂಪರ್ಕವನ್ನು ಒದಗಿಸಲು ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಮೊದಲಿಗೆ ಕೊರಿಯಾದ ರಾಜಧಾನಿ ಸಿಯೂಲ್‌ನಲ್ಲಿ ಪ್ರಾರಂಭಿಸಲಾಗಿದ್ದ ವಿದ್ಯುದೀಕರಣವನ್ನು ಈಗ ಕೊರಿಯಾದ ಇತರ ಪಟ್ಟಣಗಳಿಗೂ ವಿಸ್ತರಿಸಲಾಯಿತು. ಜಪಾನಿ.ರು ಉತ್ತಮ ಆಂತರಿಕ ಉತ್ಪಾದನೆಗೆ ಅಪಾರ ಜಾಗೃತಿ ವಹಿಸಿದರು. ಆದ್ದರಿಂದ ಜಪಾನಿನ ಆಳ್ವಿಕೆಯ 25 ವರ್ಷಗಳಲ್ಲಿ ಕೃಷಿ ಉತ್ಪನಗಳ ಬೆಲೆ ದ್ವಿಗುಣಗೊಂಡ ಬಗ್ಗೆ ಕೊರಿಯಾದ ಜನರು ಹೆಮ್ಮೆಪಟ್ಟರು, ಜಪಾನಿಯರು ಕೊರಿಯಾದಲ್ಲಿ ಉಳಿದುಕೊಂಡಿದ್ದ ಅರಣ್ಯವನ್ನು ವೈಜ್ಞಾನಿಕವಾಗಿ ನಿರ್ವಹಿಸಿದರು. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯಗಳನ್ನು ಸುಧಾರಿಸಲು ಪ್ರಯತ್ನಗಳನ್ನು ಮಾಡಲಾಯಿತು ಅಫೀಮು, ಮಾರ್ಫಿನ್ ಮುಂತಾದ ಮಾದಕ ವಸ್ತುಗಳ ಉಪಯೋಗದ (ಬಳಕೆ) ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಕೊರಿಯಾದ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಜಪಾನಿಯರು ಪ್ರಯತ್ನಿಸಿದರು. ತಾವು ಸ್ಥಾಪಿಸಿದ ಶಾಲೆಗಳಿಗೆ ಹೆಚ್ಚು ಹೆಚ್ಚು ಕೊರಿಯಾದ ವಿದ್ಯಾರ್ಥಿಗಳನ್ನು ಅವರು ಆಕರ್ಷಿಸಿದರು. ಹೊಸ ಕೈಗಾರಿಕೆಗಳ ಬೆಳವಣಿಗೆ ಮತ್ತು ಪ್ರೋತ್ಸಾಹಗಳಿಗೆ ನೆರವು ನೀಡಲು ಒಂದು ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಕೊರಿಯಾದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ ಆಮದು ಮತ್ತು ರಫ್ತು ವ್ಯಾಪಾರವನ್ನು ವಿಸ್ತರಿಸಲಾಯಿತು. ಆದರೆ ಟೀಕಾಕಾರರು ಕೊರಿಯಾದಲ್ಲಿ ಆದ ಎಲ್ಲಾ ಬೆಳವಣಿಗೆಗಳು ಜಪಾನಿನ ಹಿತಾಸಕ್ತಿಗಳ ರಕ್ಷಣೆಯ ಕ್ರಮಗಳೆಂದು ಅಭಿಪ್ರಾಯಪಟ್ಟರು ಮತ್ತು ಅವುಗಳನ್ನು ಸಾಮ್ರಾಜ್ಯಶಾಹಿ ಯೋಜನೆಗಳೆಂದು ಪ್ರಕಟಿಸಿದರು.

## 153.7 ಕೊರಿಯಾದ ದೇಶಪ್ರೇಮಿಗಳ ದಂಗೆ (1919)

ಕೊರಿಯಾಕ್ಕೆ ಜಪಾನ್ ಕೊರಿಯಾ ಸರ್ಕಾರಕ್ಕಿಂತಲೂ ಉತ್ತಮವಾದ ಸರ್ಕಾರವನ್ನು ನೀಡಿತೆಂಬುದು ನಿಜ. ಆದರೆ ಅದು ಕೊರಿಯಾ ಜನತೆಯ ಸ್ಥಿತಿಗತಿಗಳನ್ನು ಸುಧಾರಿಸುವ ಉದ್ದೇಶಕ್ಕಿಂತಲೂ ಜಪಾನಿಗೆ ಒಂದು ಅತ್ಯುತ್ತಮ ಯುಗವನ್ನಾಗಿ ಮಾಡುವ ಗುರಿಯನ್ನು ಹೊಂದಿದ್ದಿತು. ಕೊರಿಯಾದ ಭಾಷೆಗೆ ಬದಲಾಗಿ ಜಪಾನಿ ಭಾಷೆಯನ್ನು ಬಲವಂತವಾಗಿ ಜಾರಿಗೊಳಿಸಿದುದು, ಕೊರಿಯಾ

ಸಾಹಿತ್ಯ ಮತ್ತು ಸಂಸ್ಥೆಗಳ ದಮನ. ಸಾರ್ವಜನಿಕ ಭೂಸಿಯ ಬಹುಪಾಲಿನ ಮುಟ್ಟುಗೋಲು ಮತ್ತು ಮಾರಾಟ, ಖಾಸಗಿ ಒಡೆತನದ ಉತ್ತಮ ಆಸ್ತಿಯ ಬಲ್ಕಾತ್ಕಾರದ ಮಾರಾಟ, ಪರಿಣಾಮವಾಗಿ ಅಂತಹ ಭೂಮಿಯನ್ನು ಕಳೆದುಕೊಂಡು ಜನರ ಮಂಚೂರಿಯಾ ವಲಸೆ, ವಾಕ್ ಸ್ವಾತಂತ್ರದ ಹರಣ ಮತ್ತು ಕೊರಿಯಾ ಪ್ರತಿಕೆಗಳ ದಮನ ಜನರೊಂದಿಗೆ ವ್ಯವಹರಿಸುವಲ್ಲಿ ಅಪಾರವಾದ ಕ್ರೌರ್ಯದ ಪ್ರದರ್ಶನ ಮುಂತಾದವುಗಳಿಂದ ಜಪಾನಿನ ಪ್ರಭುತ್ವಕ್ಕೆ ಕೊರಿಯಾದಲ್ಲಿ ಮುಕ್ತವಾದ ಮತ್ತು ಸಂಪೂರ್ಣವಾದ ಒಪ್ಪಿಗೆ ದೊರೆಯಲಿಲ್ಲ.

ಇದರ ಜೊತೆಗೆ ಮುಖ್ಯವಾಗಿ ಜಪಾನಿನ ಉತ್ತಮ ಪ್ರಜೆಯಾಗುವಂತೆ ಮಾಡಲು ರೂಪಿಸಲಾಗಿದ್ದ ಜಪಾನಿನ ಶಿಕ್ಷಣ ಕ್ರಮವನ್ನು ಕೊರಿಯನ್ನರು ಅಧ್ಯಯನ ಮಾಡಲಿಲ್ಲ. ಸ್ವಾತಂತ್ರದ ಕನಸುಗಳನ್ನು ಹೊಂದಿದ್ದ ವಿದ್ಯಾರ್ಥಿಗಳು ರಾಷ್ಟ್ರೀಯ ಸ್ವಾತಂತ್ರದ ಗುರಿಯನ್ನು ಮೈಗೂಡಿಸಿಕೊಂಡರು.

ಜಪಾನಿನ ಆಳ್ವಿಕೆಗೊಳಪಟ್ಟ ಕೊರಿಯಾದ ಜೊತೆಗೆ ಪ್ರಜಾಪ್ರಭುತ್ವದ ಬಗ್ಗೆ 1918ರ ವಿಶ್ವವ್ಯಾಪಿ ಉತ್ಸಾಹ ಮತ್ತು ಜನತೆಯ ಸ್ವಯಂ ನಿರ್ಧಾರದ ತತ್ವಗಳು 1919ರಲ್ಲಿ ಜಪಾನಿನ ವಿರುದ್ಧ ಕೊರಿಯಾದಲ್ಲಿ ತೀವ್ರವಾದ ದಂಗೆಗಳಿಗೆ ಕಾರಣವಾದವು. ಆದರೆ ಜಪಾನಿನ ಅಧಿಕಾರಿಗಳು ಈ ದಂಗೆಯನ್ನು ಬಹುಬೇಗನೆ ಅಡಗಿಸಿದರು ಮತ್ತು ಪ್ರತಿಷ್ಠೆಯನ್ನು ಉಳಿಸಿಕೊಳ್ಳಯಿತು.

## 153.8 ಕೊರಿಯಾದಲ್ಲಿ ಜಪಾನಿನ ಆಡಳಿತ

ಎರಡು ಮಹಾಯುದ್ಧಗಳ ನಡುವೆ ತನ್ನ ಮಸಾಹತುಗಳಲ್ಲಿ ಜಪಾನ್ ಬಹುರಾಷ್ಟ್ರೀಯ ದೇಶವೊಂದರ ದೃಷ್ಠಿಯಿಂದ ಅಧಿಕಾರವನ್ನು ನಡೆಸಿತು. ಜಪಾನಿನ ಮತ್ತು ಜಪಾನಿಯರು ಹಿತಾಸಕ್ತಿಗಳನ್ನು ಪೂರೈಸಲು ಮತ್ತು ಅದರ ಅಗತ್ಯಗಳನ್ನು ಪಡೆದುಕೊಳ್ಳಲು ಕೊರಿಯಾವನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸಲಾಯಿತೇ ವಿನಃ ಕೊರಿಯನ್ನರನ್ನು ಹಿತಾಸಕ್ತಿಗಳು ಮತ್ತು ಅಗತ್ಯಗಳ ಬಗ್ಗೆ ಆಕಸ್ಮಿಕ ಕಾಳಜಿ ಮಾತ್ರವೇ ಇದ್ದಿತು. ಕೊರಿಯನ್ನರನ್ನು ಆರ್ಥಿಕವಾಗಿ ಶೋಷಿಸಲಾಗುತ್ತಿದ್ದಿತು. ಮತ್ತು ರಾಜಕೀಯ ದಾಸ್ಯದ ಸ್ಥಿತಿಯಲ್ಲಿಡಲಾಗಿತ್ತು. ಸರ್ಕಾರದ ಆಡಳಿತದಲ್ಲಿ ಅನುಭವವನ್ನು ಪಡೆದುಕೊಳ್ಳಲು ಅವರಿಗೆ ಅನುಮತಿ ನೀಡಿರಲಿಲ್ಲ ಹಾಗೂ ದೇಶದ ಆರ್ಥಿಕ ವ್ಯವಸ್ಥೆಯ ನಿರ್ವಹಣೆಯಲ್ಲಿ ಭಾಗವಹಿಸಲೂ ಅವಕಾಶವಿರಲಿಲ್ಲ. ಜಪಾನಿನ ಆಡಳಿತವನ್ನು ಒಪ್ಪಿಕೊಳ್ಳವಂತೆ ಮಾಡಲು ಕೊರಿಯನ್ನರ ಸಾಂಸ್ಕೃತಿಕ ಅಸ್ಥಿತ್ವವನ್ನು ಗುರುತಿಲ್ಲದಂತೆ ಅಳಿಸಿ ಹಾಕುವ ನೀತಿಯನ್ನು ರೂಪಿಸಲಾಗಿದ್ದಿತು. ಸಾಧ್ಯವಾದಲ್ಲೆಲ್ಲಾ ಕೊರಿಯಾದ ಭಾಷೆಗೆ ಬದಲಾಗಿ ಜಪಾನೀ ಭಾಷೆಯನ್ನು ಬಳಕೆಗೆ ತರಲಾಗಿತ್ತು. ಕೊರಿಯಾ ಭಾಷೆಯನ್ನು ತಡೆಯಲಾಗಿದ್ದಿತು. ಸಾಂಸ್ಕೃತಿಕ ನಾಶದ ಮೂಲಕ ಕೊರಿಯನ್ನರು ಜಪಾನಿನ ಶ್ರೇಷ್ಠ ಮತ್ತು ನಿಷ್ಠಾವಂತ ಪ್ರಜೆಗಳಾಗಿರುವಂತೆ ಮಾಡಲು ಶಾಲೆಗಳಲ್ಲಿ ಮಹತ್ವ ನೀಡುವಂತೆ ಸೂಚಿಸಲಾಗಿದ್ದಿತು. ಆರ್ಥಿಕ ರಂಗದಲ್ಲಿ ಜನರ ಸಾಮೂಹಿಕ ಉಪಯೋಗಕ್ಕಿದ್ದ ಸಾರ್ವಜನಿಕ ಭೂಮಿಯ ಬಹುಭಾಗವನ್ನು ಮುಟ್ಟುಗೋಲು ಹಾಕಿಕೊಂಡು ಜಪಾನಿನಿಂದ ಬಂದು ನೆಲೆಸಿದವರಿಗೆ ಮಾರಾಟ ಮಾಡುವ ನೀತಿಯನ್ನು ಜಾರಿಗೆ ತರಲಾಯಿತು. ಜೊತೆಗೆ ಬಲವಂತದ ಮಾರಾಟದ ಮೂಲಕ ಉತ್ತಮವಾಗಿದ್ದ ಖಾಸಗಿ ಒಡೆತನದ ಆಸ್ತಿಗಳು ಜಪಾನಿಯರ ಕೈಸೇರಿದವು. ಪರಿಣಾಮವಾಗಿ ಜಮೀನುಗಳನ್ನು ಕಳೆದುಕೊಂಡ ಜನರು ಮಂಚೂರಿಯ ಮತ್ತು ಆದರಾಚೆಗೆ ವಲಸೆ ಹೋದರು.

ಮುಂದಿನ ದಶಕಗಳಲ್ಲಿ ಜಪಾನ್ ಕೊರಿಯಾ ಮತ್ತು ಅದರ ಜನರನ್ನು ವಿಲೀನಗೊಳಿಸುವ ದೃಢವಾದ ನೀತಿಯನ್ನು ಅನುಸರಿಸಿತು. ಕೊರಿಯದ ರೈತರು ಬೃಹತ್ ಜಪಾನೀ ಕೈಗಾರಿಕೆಗಳಿಗೆ ತಮ್ಮ ಭೂಮಿಗಳನ್ನು ಕಳೆದುಕೊಂಡರು ಮತ್ತು ಈ ಧೋರಣೆ ಹೆಚ್ಚಾಯಿತೆಂದು ಟೀಕಾಕಾರರು ದೂರಿದ್ದಾರೆ. ಕೊರಿಯನ್ನರಿಗಿಂತಲೂ ಜಪಾನಿಯರ ಮಕ್ಕಳಿಗೆ ಉತ್ತಮ ಶಾಲಾ ಸೌಲಭ್ಯಗಳನ್ನು ಒದಗಿಸಿದ್ದುದನ್ನು ಅವರು ತಮ್ಮ ಅಭಿಪ್ರಾಯಕ್ಕೆ ಬೆಂಬಲವಾಗಿ ನೀಡಿದ್ದಾರೆ. ಕೊರಿಯಾದಲ್ಲಿ ಜೀವನ ಮಟ್ಟ ಜಪಾನಿಗಿಂತಲೂ ಅತ್ಯಂತ ಕಡಿಮೆಯಿದ್ದು, ಕೊರಿಯಾದ ಕಾಲೀಕಾರರು ದ್ವೀಪಗಳ ಬೃಹತ್ ನಗರಗಳಿಗೆ ಭಾರೀ ಸಂಖ್ಯೆಯಲ್ಲಿ ವಲಸೆ ಹೋದರು. ಅವರು ಅತ್ಯಂತ ಕಡಿಮೆ ಕೂಲಿ ಪಡೆಯುತ್ತಿದ್ದು ಪ್ರಮುಖವಾಗಿ ಕೌಶಲ್ಯವಲ್ಲದ ವೃತ್ತಿಗಳಲ್ಲಿ ತೊಡಗಿದ್ದರು.

ಕೊರಿಯಾದ ಹೆಚ್ಚಿನ ಅಭಿವೃದ್ಧಿಯು ಜಪಾನ್ ಮತ್ತು ಜಪಾನಿಯರ ಸಾಮ್ರಾಜ್ಯಶಾಹಿ ಯೋಜನೆಗಳ ಲಾಭಕ್ಕೆ ಮೀಸಲಾಗಿದ್ದಿತೆಂಬುದು ಖಚಿತ.

## 153.9 ಕೊರಿಯಾವನ್ನು ಆಧುನೀಕರಣಗೊಳಿಸುವ ಪ್ರಯತ್ನಗಳು.

ಜಪಾನಿನಿಂದ ಕೊರಿಯಾದ ಸ್ವಾಧೀನವನ್ನು ಒಂದು ಮಹಾ ಸಾಧನೆಯೆಂದು ಉತ್ಪ್ರೇಕ್ಷಿಸಲಾಗಿದೆ. ಈ ಸ್ವಾಧೀನದೊಂದಿಗೆ ಜಪಾನ್ ತನ್ನ ವಿಸ್ತರಣಾ ನೀತಿಯನ್ನು ಆರಂಭಿಸಿತು. ಕೊರಿಯಾದ ಆಧುನೀಕರಣಕ್ಕೆ ಜಪಾನ್ ಹೆಚ್ಚಿನ ಗಮನವನ್ನು ನೀಡಿತು.

ಕೊರಿಯಾವನ್ನು ಸ್ವಾಧೀನಪಡಿಸಿಕೊಂಡ ನಂತರ ಅಧ್ಭುತ ಪ್ರಗತಿಯನ್ನು ಸಾಧಿಸಲಾಯಿತು. ರಸ್ತೆಗಳನ್ನು ಅಭಿವೃದ್ದಿಪಡಿಸಲಾಯಿತು ಮತ್ತು ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಬಂದರುಗಳನ್ನು ಅಭಿವೃದ್ಧಿಪಡಿಸಲಾಯಿತು, ವಿಧ್ಯುತ್ ದ್ವೀಪಗಳನ್ನು ಬಳಕೆಗೆ ತರಲಾಯಿತು.ಭೂಮಿಯನ್ನು ಅಭಿವೃದ್ಧಿಪಡಿಸಿ ಕೃಷಿ ಪದ್ಧತಿಯನ್ನು ಸುಧಾರಿಸಲಾಯಿತು. ಉತ್ತಮ ನೈರ್ಮಲ್ಯದ ವಿಧಾನಗಳನ್ನು ಅನುಸರಿಸಲಾಯಿತು. ಕೈಗಾರಿಕೆಗಳನ್ನು ಪ್ರೋತ್ಸಾಹಿಸಲಾಯಿತು ಮತ್ತು ಆಮದು ಹಾಗೂ ರಫ್ತು ವ್ಯಾಪಾರಗಳನ್ನು ವಿಸ್ತರಿಸಲಾಯಿತು. ಆಧುನಿಕ ಹಣಕಾಸಿನ ವ್ಯವಹಾದ (ಬ್ಯಾಕಿಂಗ್) ವ್ಯವಸ್ಥೆಯನ್ನು ಅಳವಡಿಸಲಾಯಿತು. ಆದರೆ ಒಟ್ಟು ವ್ಯಾಪಾರದ ಸುಮಾರು ಶೇ.90ರಷ್ಟು ಜಪಾನಿನ ಪ್ರಭಾವಕ್ಕೊಳ ಪಟ್ಟಿತು. ಚಿನ್ನದ ಗಣಿ ಉಧ್ಯಮ ಮಾತ್ರವೇ ಸ್ಥಳೀಯರ ಕೈಯಲ್ಲಿ ಉಳಿದಿದ್ದಿತು.

ಜಪಾನ್ ಕೊರಿಯಾಕ್ಕೆ ಕೊರಿಯನ್ನರಿಗಿಂತಲೂ ಅತ್ಯುತ್ತಮವಾದ ಸರ್ಕಾರವನ್ನು ನೀಡಿತೆಂಬುದು ನಿಜವಾದರೂ ಅದು ಕೊರಿಯಾದ ಜನರ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಿಂತಲೂ ಜಪಾನಿನ ಸ್ವಹಿತಾಸಕ್ತಿಯ ಉದ್ದೇಶವನ್ನು ಹೊಂದಿದ್ದಿತು.

## 153.10 ಕೊರಿಯಾದ ಸ್ವಾತಂತ್ರ್ಯ.

ಮೊದಲನೆ ಮಹಾಯುದ್ಧದ ನಂತರ ತಕ್ಷಣವೇ ಕೊರಿಯನ್ನರು ತಮ್ಮ ಸ್ವಾತಂತ್ರಕ್ಕೆ ಜಪಾನಿನ ವಿರುದ್ಧ ದಂಗೆಯೆದ್ದರು. ಆದರೆ ಅವರನ್ನು ಸುಲಭವಾಗಿ ಹತ್ತಿಕ್ಕಲಾಯಿತು ಮತ್ತು ಸಹಸ್ರಾರು ದಂಗೆಕೋರರನ್ನು ದೇಶದಿಂದ ಹೊರದೂಡಲ್ಪಟ್ಟವರಾಗಿ ಚೀನಾ ಮತ್ತು ಅಮೇರಿಕಾಗಳಲ್ಲಿ ನೆಲೆಸಿ ಹೋರಾಟವನ್ನು ಮುಂದುವರಿಸಿದರು. ಅವರು ರಾಷ್ಟ್ರಗಳ ಒಕ್ಕೂಟ ಸಂಸ್ಥೆಯ ಮುಂದೆ ತಮ್ಮ ಬೇಡಿಕೆಗಳನ್ನಿರಿಸಿದರು.

ಕೊರಿಯಾದ ಸ್ವಾತಂತ್ರ ಹೋರಾಟವು ಎರಡನೇ ಮಹಾಯುದ್ಧದ ಕಾಲದಲ್ಲಿ ಅತ್ಯಂತ ಉಗ್ರ ರೂಪವನ್ನು ತಾಳಿತು. 1943ರಲ್ಲಿ ಇಂಗ್ಲೆಂಡ್, ಅಮೇರಿಕ, ಚೀನ ಮತ್ತು ಕೈರೋ ಕೊರಿಯನ್ನರ ಪರವಾಗಿ ಸ್ವಾತಂತ್ರಕ್ಕಾಗಿ ಮನವಿ ಮಾಡಿಕೊಳ್ಳುವ ಭರವಸೆ ನೀಡಿದವು. ಎರಡನೇ ಮಹಾಯುದ್ಧದಲ್ಲಿ ಜಪಾನಿನ ಪರಾಜಯದ ನಂತರ ರಷ್ಯಾ ಉತ್ತರಾಧಿಕಾರಿಯಿಂದ ಕೊರಿಯಾವನ್ನು ಆಕ್ರಮಿಸಿಕೊಂಡರು. ದಕ್ಷಿಣದ ಕಡೆಯಿಂದ ಅಮೇರಿಕಾ ಕೊರಿಯಾವನ್ನು ಆಕ್ರಮಿಸಿಕೊಂಡಿತು. ಹೀಗೆ ರಷ್ಯಾದ ಬೆಂಬಲದಿಂದ ಉತ್ತರ ಕೊರಿಯಾ ಸ್ವಾತಂತ್ರವಾಯಿತು. ಪ್ಯೋಂಗ್-ಯುಂಗ್ ಉತ್ತರ ಚೀನಾದ ರಾಜಧಾನಿಯಾಯಿತು ಮತ್ತು ಸಿಯೂಲ್ ಅಮೇರಿಕಾದ ಬೆಂಬಲವನ್ನು ಪಡೆದ ದಕ್ಷಿಣ ಕೊರಿಯಾದ ರಾಜಧಾನಿಯಾಯಿತು. 380ನೇ ಸಮಾನಾಂತರ ರೇಖೆಯು ಎರಡು ದೇಶಗಳನ್ನು ಪ್ರತ್ಯೇಕಿಸುವ ಗಡಿರೇಖೆಯಾಯಿತು. ಕೊರಿಯಾ ಸಮಸ್ಯೆಯು 2ನೇ ಮಹಾಯುದ್ಧದ ನೇರ ಪರಿಣಾಮವಾಗಿದ್ದಿತು.

## 153.11 ಸಾರಾಂಶ

ಈ ಘಟಕದಲ್ಲಿ ನಾವು ಕೊರಿಯಾದಲ್ಲಿ ಜಪಾನಿನ ಹಿತಾಸಕ್ತಿಯ ಅನೇಕ ವಿಷಯಗಳನ್ನು ಚರ್ಚಿಸಿದೆವು. ಈ ಪಾಠದ ಅಧ್ಯಯನದಿಂದ ನೀವು ಇವುಗಳ ಬಗ್ಗೆ ತಿಳಿದುಕೊಂಡಿರಿ.

1. ತನ್ನ ಸಂಪದ್ಭರಿತ ನೈಸರ್ಗಿಕ ಸಂಪನ್ಮೂಲಗಳಿಂದ ಹೇಗೆ ಕೊರಿಯಾ ಪೂರ್ವ ಏಷ್ಯಾದ ಪ್ರಮುಖ ಪರ್ಯಂತ ದ್ವೀಪವಾಗಿತ್ತೆಂಬುದು.
2. ಕೊರಿಯಾದಲ್ಲಿ ಜಪಾನಿನ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳು
3. ಕೊರಿಯಾದಲ್ಲಿ ಜಪಾನಿನ ಸಾಮ್ರಾಜ್ಯಶಾಹಿ ಯೋಜನೆಗಳು ಮತ್ತು ಚಟುವಟಿಕೆಗಳು

4. 1910 ಜಪಾನಿನ ಕೊರಿಯಾದ ಸ್ವಾಧೀನ ಮತ್ತು ಜಪಾನಿನ ಆಳ್ವಿಕೆ.

5. ತಮ್ಮ ಸ್ವಹಿತಾಸಕ್ತಿಯಿಂದ ಕೊರಿಯಾವನ್ನು ಆಧುನೀಕರಣಗೊಳಿಸುವ ಜಪಾನಿನ ಪ್ರಯತ್ನಗಳು.

6. ಕೊರಿಯಾದ ದೇಶಭಕ್ತರ ಸ್ವಾತಂತ್ರ ಹೋರಾಟ.

7. 1945ರಲ್ಲಿ ಜಪಾನಿನ ಪರಾಜಯದ ನಂತರ ಕೊರಿಯಾದ ಸ್ವಾತಂತ್ರ, ಅದರ ವಿಭಜನೆ ಮತ್ತು ಸಮಸ್ಯೆಗಳು.

## 153.2 ನಿಮ್ಮ ಪ್ರಗತಿಯ ಪರಿಶೀಲನೆಗೆ

**I ಇವುಗಳನ್ನು ಹೋಲಿಕೆ ಮಾಡಿ ಬರೆಯಿರಿ.**

| | | | |
|---|---|---|---|
| ಅ) | 1894 - 5 | : | ಕೊರಿಯಾದ ಸ್ವಾಧೀನ |
| ಆ) | 1902 | : | ಕೊರಿಯಾದ ದೇಶಭಕ್ತರ ದಂಗೆ |
| ಇ) | 1904-5 | : | ಚೀನಾ-ಜಪಾನ್ ಯುದ್ಧ |
| ಈ) | 1910 | : | ಆಂಗ್ಲೋ-ಜಪಾನ್ ಮೈತ್ರಿ |
| ಉ) | 1919 | : | ರಷ್ಯಾ-ಜಪಾನ್ ಯುದ್ಧ |

**II ಪ್ರತಿಯೊಂದರ ಬಗ್ಗೆ ಐದು ಸಾಲುಗಳನ್ನು ಬರೆಯಿರಿ.**

ಅ) ಮುತ್ಸುಹಿಟೊ

ಆ) ಕೌಂಟ್ ಇಟೊ

ಇ) ಜೆನ್ರೊ

ಈ) ಪೋರ್ಟ್ಸ್‌ಮತ್ ಒಪ್ಪಂದ

ಉ) ಕೊರಿಯಾದಲ್ಲಿ ಜಪಾನಿನ ಆರ್ಥಿಕ ಹಿತಾಸಕ್ತಿ.

## 153.13 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1) Latourett .K.S. : The History kof Japan

2) Vinack .H.M. : A History of Far East on Modern Times.

3) William Barry : Modern Japan.

4) H.Convoy : The Japanese seizure of Korea.



ಇಂಗ್ಲಿಷ್ ಮೂಲ: ಎಸ್. ಮೀರ್ ಸಮಿವುಲ್ಲ.

ಅನುವಾದ : ಕೆ.ಬಿ.ಚಂದ್ರ.

## ಟಿಪ್ಪಣಿಗಳು

# ಘಟಕ - 154

## ಜಪಾನ್ ಮತ್ತು ಮೊದಲನೆ ಮಹಾಯುದ್ಧ

154.0 ಉದ್ದೇಶಗಳು

154.1 ಪೀಠಿಕೆ

154.2 ಜಪಾನಿನ ವಿಸ್ತರಣಾ ನೀತಿ

154.3 ಜಪಾನಿನ ಸಾಮ್ರಾಜ್ಯಶಾಹಿಷ್ ನೀತಿ

154.4 ಮೊದಲನೆ ಮಹಾಯುದ್ಧದ ಆರಂಭ

154.5 ಯುದ್ಧದಲ್ಲಿ ಜಪಾನಿನ ತೊಡಗಿಕೊಳ್ಳವಿಕೆ

154.6 ಜಪಾನಿನ 21 ಬೇಡಿಕೆಗಳು

154.7 ಚೀನಾದ ಪ್ರತಿಕ್ರಿಯೆ

154.8 ಜಪಾನಿನ ಸೈಬೀರಿಯಾ ಆಕ್ರಮಣ

154.9 ಯುದ್ಧದ ಕೊನೆಯಲ್ಲಿ ಜಪಾನ್

154.10 ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಜಪಾನ್

154.11 ಸಾರಾಂಶ

154.12 ನಿಮ್ಮ ಪ್ರಗತಿ ಪರಿಶೀಲನೆ

154.13 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು.

## 154.0 ಉದ್ದೇಶಗಳು

ಈ ಘಟಕದಲ್ಲಿ ನಾವು ಜಪಾನ್ ಆಕ್ರಮಣಕಾರಿ ನೀತಿಯನ್ನು ಅನುಸರಿಸಲು ಕಾರಣವಾದ ಮತ್ತು ಮೊದಲನೆ ಮಹಾಯುದ್ಧದಲ್ಲಿ (1914-18) ತೊಡಗಿಕೊಳ್ಳಲು ಅದನ್ನು ಬಲಾತ್ಕರಿಸಿದ ಸನ್ನಿವೇಶಗಳನ್ನು ಚರ್ಚಿಸುವೆವು. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನ ಅಂಶಗಳ ಬಗ್ಗೆ ತಿಳಿದುಕೊಳ್ಳುವಿರಿ.

* ಜಪಾನಿನ ವಿಸ್ತರಣಾ ನೀತಿ
* ಜಪಾನಿನಲ್ಲಿ ಸೈನಿಕ ಶಕ್ತಿಯ ಉದಯ
* ಚೀನಾದಲ್ಲಿ ಹೆಚ್ಚುತ್ತಿದ್ದ ರಷ್ಯಾದ ಪ್ರಭಾವ ಮತ್ತು ಜಪಾನಿನ ಪ್ರತಿಕ್ರಿಯೆ.
* ಜಪಾನಿನ 21ಬೇಡಿಕೆಗಳು ಮತ್ತು ಚೀನಾದ ಮೇಲೆ ಅದರ ಪರಿಣಾಮ.
* 21 ಬೇಡಿಕೆಗಳಿಗೆ ಚೀನಾದ ಪ್ರತಿಕ್ರಿಯೆ
* ಜಪಾನ್ ಚೀನಾದಲ್ಲಿ ಹೇಗೆ ಸುಲಭದ ವಿಜಯಗಳನ್ನು ಗಳಿಸಿತು ಮತ್ತು ಏಷ್ಯಾದ ಏಷ್ಯಾದ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಿತೆಂಬುದನ್ನು ತಿಳಿಯಲು.
* ಯುದ್ಧದ ಕೊನೆಯಲ್ಲಿ ಜಪಾನ್ ಹೇಗೆ ಆರ್ಥಿಕವಾಗಿ ಸಾಲ ಕೊಡುವ ರಾಷ್ಟ್ರವಾಯಿತೆಂಬುದನ್ನು ತಿಳಿಯಲು

## 154.1 ಪೀಠಿಕೆ

1904-05ರ ರಷ್ಯಾ-ಜಪಾನ್ ಯುದ್ಧದಲ್ಲಿ ಜಯಗಳಿಸಿದ ನಂತರ ಜಪಾನಿನ ಅಂತರರಾಷ್ಟ್ರೀಯ ಘನತೆ ಮತ್ತು ಸ್ಥಾನಮಾನಗಳು ಗಣನೀಯವಾಣ ಹೆಚ್ಚಿದವು. ಪೂರ್ವದಲ್ಲಿ ಯೂರೋಪಿನ ರಾಷ್ಟ್ರಗಳ ಶೋಷಣೆಯಲ್ಲಿ ಜಪಾನ್ ಸಹಪಾಲುದಾರನಾಯಿತು. ಕೊರಿಯಾ ಮತ್ತು ದಕ್ಷಿಣ ಮಂಚೂರಿಯಾಗಳನ್ನು ಆಕ್ರಮಿಸಿಕೊಂಡಿದ್ದರಿಂದ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾಯಿತು. ಅದು 1902 ಮಾಡಿಕೊಂಡ ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದದಿಂದ ಇಂಗ್ಲೆಂಡ್ ಒಬ್ಬ ವಿಶ್ವಾಸಾರ್ಹ ಸ್ನೇಹಿತನನ್ನು ಪಡೆಯಿತು. ಆದರೆ ದೇಶದಲ್ಲಿ ಅಷ್ಟೇನು ರಾಜಕೀಯ ಅಭದ್ರತೆ ಇರಲಿಲ್ಲ. ಆರ್ಥಿಕವಾಗಿ ನೌಕಾಪಡೆ ಮತ್ತು ವಸಾಹತ್ತುಗಳ ಮೇಲೆ ಮಿತಿಮೀರಿದ ಖರ್ಚಿನಿಂದಾಗಿ ಜಪಾನ್ ಸಂಕಷ್ಟಕ್ಕೊಳಗಾಗಿದ್ದಿತು. ಅಮೇರಿಕಾದೊಂದಿಗೆ ಅದರ ಸಂಬಂಧಗಳು ಹದಗೆಟ್ಟಿದ್ದವು. ಈ ಸನ್ನಿವೇಶದಲ್ಲಿ ಜಪಾನ್ ಮೊದಲನೆ ಮಹಾಯುದ್ಧದಲ್ಲಿ ಭಾಗವಹಿಸಿತು. ಶಾಂತಿ ಸಭೆಯಲ್ಲಿ ಯಶಸ್ವಿಯಾಗಿ ಮತ್ತು ಹರ್ಷದಿಂದ ಹೊರಬಂದಿತು.

ಮೊದಲನೆ ಮಹಾಯುದ್ಧವು ಜಪಾನಿಗೆ ದೇವರೇ ಕಳುಹಿಸಿದ ಉಡುಗೊರೆಯಾಗಿದ್ದು, ಯೂರೋಪಿನ ದೇಶಗಳು ಯುದ್ಧದಲ್ಲಿ ತಲ್ಲೀನವಾಗಿದ್ದು ಏಷ್ಯಾದಲ್ಲಿ ಜಪಾನ್ ಹೇಗಿದೆ ಎಂಬುದನ್ನು ನೊಡಲೂ ಸಮಯವಿಲ್ಲದಿದ್ದುದ್ದು ಜಪಾನ್ ತನ್ನ ಸಾಮ್ರಾಜ್ಯ ವಿಸ್ತರಿಸಿಕೊಳ್ಳಲಿ ಒಂದು ಉತ್ತಮ ಅವಕಾಶವನ್ನು ಒದಗಿಸಿತು. ಯುದ್ಧ ಕೊನೆಗೊಂಡಾಗ ಜಪಾನ್ ಏಷ್ಯಾದ ಅತ್ಯಂಕ ಪ್ರಬಲ ರಾಷ್ಟ್ರವಾಗಿ ಹೊರಬಂದಿತು.

ಮೊದಲನೆ ಮಹಾಯುದ್ಧದ ನಂತರದ ಎರಡು ದಶಕಗಳಲ್ಲಿ ಜಪಾನ್- ಚೀನಾದಲ್ಲಿ ಅತ್ಯಂತ ಆಕ್ರಮಣಕಾರಿ ಮತ್ತು ಶಕ್ತಿಶಾಲಿ ನೀತಿಯನ್ನು ಅನುಸರಿಸಿತು ಮತ್ತು 1945ರಲ್ಲಿ ಎರಡನೇ ಮಹಾಯುದ್ಧದಲ್ಲಿ ಸೋಲುವವರೆಗೆ ಮುಂದುವರಿಸಿತು.

## 154.2 ಜಪಾನಿನ ವಿಸ್ತರಣಾ ನೀತಿ.

ಯೂರೋಪಿನ ರಾಷ್ಟ್ರಗಳ ವಿಸ್ತರಣಾ ನೀತಿಗೆ ಈಗಾಗಲೇ ಬಲಿಯಾಗಿದ್ದ ಚೀನಾದಿಂದ ಜಪಾನ್ ತನ್ನ ವಿಸ್ತರಣಾ ನೀತಿಯನ್ನು ಆರಂಭಿಸಿತು. ಒಂದು ಕಡೆ ಚೀನಾದ ದುರ್ಬಲತೆ ಮತ್ತು ಮತ್ತೊಂದು ಕಡೆ ಯಾರೋಪಿನ ರಾಷ್ಟ್ರಗಳ ವಿಸ್ತರಣಾ ನೀತಿಯಿಂದ ಪ್ರೋತ್ಸಾಹಿಸಲ್ಪಟ್ಟು, ಜಪಾನ್ ತಾನೂ ಸಹ ಚೀನಾದಲ್ಲಿ ಒಂದು ಅವಕಾಶವನ್ನು ಪಡೆಯಲು ಬಯಸಿತು. 1894-95ರ ಚೀನ-ಜಪಾನ್ ಯುದ್ಧ ಜಪಾನಿನ ವಿಸ್ತರಣಾ ನೀತಿಯ ಒಂದು ಭಾಗವಾಗಿತ್ತು. ಜಪಾನ್ ಏಷ್ಯಾದಲ್ಲಿ ಬೃಹತ್ ರಾಷ್ಟ್ರದ ಪಾತ್ರವನ್ನು ವಹಿಸಲು ಬಯಸಿದ್ದಿತು. ಅದ್ದರಿಂದ ಅದು ಮಂಚೂರಿಯಾ ಕೊರಿಯಾ ಮತ್ತು ಪೂರ್ಣವಾಗಿ ಚೀನಾದಲ್ಲಿ ಆಕ್ರಮಣಕಾರಿ ನೀತಿಯನ್ನು ಅನುಸರಿಸಿತು. 1902ರಲ್ಲಿ ಜಪಾನ್ ಇಂಗ್ಲೆಂಡಿನೊಂದಿಗ ಸ್ನೇಹ ಒಪ್ಪಂದವನ್ನು ಮಾಡಿಕೊಂಡಿತು ಮತ್ತು ಈ ಒಪ್ಪಂದವು ಪ್ರಬಲ ರಾಷ್ಟ್ರವೊಂದರ ಜೊತೆ ಸ್ನೇಹ ಸೊಪಾದಿಸಲು ಒಂದು ಅವಕಾಶವನ್ನು ಒದಗಿಸಿತು. ಆದರೆ ಜಪಾನಿಗೆ ಮಾತ್ರವಲ್ಲದೆ ಇಡೀ ಪ್ರಪಂಚದ ದೃಷ್ಟಿಯಿಂದಲೇ ಈ ಕಾಲದ ಅತ್ಯಂತ ಪ್ರಮುಖ ಘಟನೆಯೆಂದರೆ 1904-05ರ ರಷ್ಯಾ-ಜಪಾನ್ ಯುದ್ಧ ಈ ಯುದ್ಧದಲ್ಲಿ ಬಲಿಷ್ಠ ರಾಷ್ಟ್ರವಾದ ರಷ್ಯಾವನ್ನು ಒಂದು ಚಿಕ್ಕ ರಾಷ್ಟ್ರವಾಗಿದ್ದ ಜಪಾನ್ ಸೋಲಿಸಿದುದು ಏಷ್ಯಾದಲ್ಲಿ ಮಾತ್ರವಲ್ಲದೆ ಇಡೀ ಪ್ರಪಂಚದಲ್ಲಿಯೇ ಪ್ರಬಲ ರಾಷ್ಟ್ರಗಳ ಆಲೋಚನಾಲಹರಿಯನ್ನು ಬದಲಾಯಿಸಿತು.

ಮೀಜಿ ಪುನರುಜ್ಜೀವನದ ನಂತರ ಜಪಾನ್ ತನ್ನ ಆಧುನೀಕರಣಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿತು. ಅದು ತನ್ನ ಸೈನ್ಯ, ನೌಕಾಪಡೆ ಮತ್ತು ತನ್ನ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ವ್ಯವಸ್ಥೆಗಳನ್ನು ಆಧುನೀಕರಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿತು. ಈ ಆಧುನೀಕರಣದ ನಂತರವೇ ಜಪಾನ್ ಏಷ್ಯಾದಲ್ಲಿ ಆಕ್ರಮಣಕಾರಿ ಮತ್ತು ವಿಸ್ತರಣಾ ಶಕ್ತಿಯಾಗಿ ಮಾರ್ಪಟ್ಟಿತು. ಜಪಾನಿನ ವಿಸ್ತರಣಾ ನೀತಿಗೆ ಪ್ರಮುಖ ಕಾರಣಗಳೆಂದರೆ,

i ಜಪಾನಿನ ಜನಸಂಖ್ಯೆಯ ತ್ವರಿತವಾದ ಹೆಚ್ಚಳ

ii ಜಪಾನಿಯರ ಬಗ್ಗೆ ಅಮೆರಿಕಾದ ಧೋರಣೆ

iii ತನ್ನ ಸಿದ್ಧವಸ್ತುಗಳಿಗೆ ಮಾರುಕಟ್ಟೆಗಳನ್ನು ಪಡೆಯುವ ಜಪಾನಿನ ಬಯಕೆ

iv ಜಪಾನಿನಲ್ಲಿ ಬೆಳೆದ ತೀವ್ರವಾದ ರಾಷ್ಟ್ರೀಯತೆ

v ಯೂರೋಪಿನ ರಾಷ್ಟ್ರಗಳಂತೆಯೇ ವಿಸ್ತರಣಾ ನೀತಿಯನ್ನು ಅನುಸರಿಸಲು ಜಪಾನ್ ಬಯಸಿದುದು

## 154.3 ಜಪಾನಿನ ಸಾಮ್ರಾಜ್ಯಷಾಹಿ ನೀತಿ

ರಷ್ಯಾದ ಮೇಲೆ ಜಪಾನಿನ ವಿಜಯವು ಪೂರ್ವಏಷ್ಯಾದಲ್ಲಿ ಜಪಾನಿಗೆ ಪರಮಾಧಿಕಾರದ ಸ್ಥಾನವನ್ನು ನೀಡಿತು. ಯೂರೋಪಿನ ರಾಷ್ಟ್ರಗಳು ತುಳಿದ ಹಾದಿಯಲ್ಲಿಯೇ ಜಪಾನ್ ಕೆಲಸವನ್ನು ಆರಂಭಿಸಿತು. ಚೀನಾದಲ್ಲಿ ರಿಯಾಯಿತಿಗಳು ಮತ್ತು ಸವಲತ್ತುಗಳಿಗಾಗಿ ಹೋರಾಟದಲ್ಲಿ ಜಪಾನ್ ಯೂರೋಪಿನ ರಾಷ್ಟ್ರಗಳಿಗೆ ಪ್ರಬಲ ಪ್ರತಿಸ್ಪರ್ಧಿಯಾಯಿತು ಮತ್ತು ಇದೇ ಸಮಯದಲ್ಲಿ ಪೋರ್ಟ್ಸ್‌ಮತ್ ಒಪ್ಪಂದ ಮೂಲಕ ಚೀನಾದಲ್ಲಿ ಪಡೆದ ಅನುಕೂಲಗಳನ್ನು ಬಳಸಿಕೊಳ್ಳಲು ಪ್ರಾರಂಭಿಸಿತು. ಕೊರಿಯಾದಿಂದ ರಷ್ಯಾವನ್ನು ಬಲಾತ್ಕಾರವಾಗಿ ಹಿಂದೆ ಸರಿಯುವಂತೆ ಮಾಡಿದ ಜಪಾನ್ ಕೊರಿಯಾದ ವ್ಯವಹಾರಗಳಲ್ಲಿ ಅರ್ಥಪೂರ್ಣವಾಗಿ ಮಧ್ಯ ಪ್ರವೇಶಿಸಲು ಪ್ರಾರಂಭಿಸಿತು ಮತ್ತು 1910ರಲ್ಲಿ ಕೊರಿಯಾವನ್ನು ನೇರವಾಗಿ ಸ್ವಾಧೀನ ಪಡಿಸಿಕೊಂಡಿತು. ಇದು ಜಪಾನಿನ ಆಕ್ರಮಣಕಾರಿ ಯೋಜನೆಯ ಒಂದು ಉತ್ತಮ ಉದಾಹರಣೆಯಾಗಿತ್ತು. ಯೂರೋಪಿನ ಸಂಸ್ಕೃತಿ ಮತ್ತು ನಾಗರೀಕತೆಯೊಂದಿಗೆ ಅದು ಯೂರೋಪಿನ ಸಾಮ್ರಾಜ್ಯಷಾಹಿ ನೀತಿಯನ್ನು ಮೈಗೂಡಿಸಿಕೊಂಡಿತು.

1914-18ರ ಮೊದಲನೆ ಮಹಾಯುದ್ಧ ಆರಂಭವಾದಾಗ ತನ್ನ ಸಾಮ್ರಾಜ್ಯಷಾಹಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಜಪಾನಿನರಿಗೆ ಒಂದು ಉತ್ತಮ ಅವಕಾಶ ಒದಗಿ ಬಂದಿತು. ಒಟ್ಟಾರೆ ಏಷ್ಯಾದಲ್ಲಿ, ಮತ್ತು ವಿಶೇಷವಾಗಿ ಚೀನಾದಲ್ಲಿ ತನ್ನ ಅಧಿಕಾರವನ್ನು

ವಿಸ್ತರಿಸಲು ಹಾಗೂ ಕ್ರೋಢೀಕರಿಸಿಕೊಳ್ಳಲು ಯುರೋಪಿನ ರಾಷ್ಟ್ರಗಳು ಮೊದಲನೆ ಮಹಾಯುದ್ದದಲ್ಲಿ ತಲ್ಲೀನವಾಗಿದ್ದುದರಿಂದ ಉಂಟಾಗಿದ್ದ ಸಂದರ್ಭವನ್ನು ಸಂಪೂರ್ಣವಾಗಿ ಜಪಾನ್ ತನ್ನ ಅನುಕೂಲಕ್ಕೆ ಬಳಸಿಕೊಂಡಿತು. ಬ್ರಿಟನ್ನಿನ ಮಿತ್ರನಾಗಿ ಅದು ಮೊದಲಿಗೆ ಜರ್ಮನಿಯ ಮೇಲೆ ಯುದ್ಧವನ್ನು ಘೋಷಣೆ ಮತ್ತು ಚೀನಾದಲ್ಲಿ ಜರ್ಮನಿಯ ಹತೋಟಿಯಲ್ಲಿದ ಕಿಯಾವೊ ಚಾವೋವನ್ನು ವಶಪಡಿಸಿಕೊಂಡಿದುದು. ಆ ಮೂಲಕ ಅದು ಷಾಂಟುಂಗ್‌ನಲ್ಲಿ ಭದ್ರವಾಗಿ ನೆಲೆಯೂರಿತು.ರಾಹಸ್ಯ ಒಪ್ಪಂದಗಳ ಮೂಲಕ ಮಿತ್ರ ರಾಷ್ಟ್ರಗಳು ಅವುಗಳ ಮೇಲೆ ಜಪಾನಿನ ಒಡೆತನವನ್ನು ಖಾತ್ರಿಪಡಿಸಿದವು ಮತ್ತು ವರ್ಸೇಲ್ಸ್ ಒಪ್ಪಂದದ ಮೂಲಕ ಖಚಿತವಾಗಿ ಜಪಾನಿಗೆ ಬಿಟ್ಟುಕೊಟ್ಟವು.

ಜಪಾನಿನ ನೆರೆಹೊರೆಯಲ್ಲಿ ಐರೋಪ್ಯ ವಸಹತ್ತುಷಾಹಿ ನೀತಿಯೂ ವಸಾಹತುಷಾಹಿ ನೀತಿಯನ್ನು ಅನುಸರಿಸುವಂತೆ ಜಪಾನಿನ ನಾಯಕರ ಮೇಲೆ ಪ್ರಭಾವ ಬೀರಿದವು. ಅನೇಕ ಯಾರೋಪಿನ ರಾಷ್ಟ್ರಗಳು ಶಾಂತ ಮಗಾಸಾಗರದ ದ್ವೀಪಗಳ ಮೇಲೆ ತಮ್ಮ ಹತೋಟಿಯನ್ನು ವಿಸ್ತರಿಸುವ ಕಾರ್ಯದಲ್ಲಿ ಮುಳುಗಿದ್ದವು. ರಷ್ಯ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಜರ್ಮನಿಗಳು ತಮ್ಮ ಪ್ರಭಾವಿತ ವಲಯಗಳನ್ನು ಸ್ಥಾಪಿಸಿದವು. ಇಂಡೋ -ಚೀನಾದಲ್ಲಿ ಫ್ರಂಚರು, ಸೈಬೀರಿಯಾದಲ್ಲಿ ರಷ್ಯನ್ನರು ವಿಶಾಲ ಪ್ರದೇಶಗಳನ್ನು ವಶಪಡಿಸಿಕೊಂಡ್ಡಿದ್ದರು.1898ರಲ್ಲಿ ಅಮೇರಿಕಾ ಸಹ ಹವಾಯಕ ದ್ವೀಪಗಳ ಮೇಲೆ ತನ್ನ ಆಳ್ವಿಕೆಯನ್ನು ಬಲಪಡಿಸಿದ್ದಿತು. ಜಪಾನಿನ ನಾಯಕರ ವಿರೋಧ್ದವಿದ್ದರೂ ಅನೇಕ ಐರೋಪ್ಯ ರಾಷ್ಟ್ರಗಳು, ಜಪಾನಿನ ನೆರೆಹೊರೆಯಲ್ಲಿದ್ದ ಭೂಮಿಗಳನ್ನು ಕಬಳಿಸತೊಡಗಿದ್ದವು. ಜಪಾನಿನ ಅಸುಪಾಸಿನಲ್ಲಿದ್ದುದರಿಂದ ಅವುಗಳ ಮೇಲೆ ತಮ್ಮ ಹಕ್ಕು ನ್ಯಾಯಸಮ್ಮತವೆಂದು ಅವು ಭಾವಿಸಿದವು. ಒಟ್ಟಿನಲ್ಲಿ ಐರೋಪ್ಯ ಸಾಮ್ರಾಜ್ಯಷಾಹಿ ನೀತಿಯು ಜಪಾನಿನ ಸಾಮ್ರಾಜ್ಯಷಾಹಿ ನೀತಿಯ ಮೇಲೆ ಪ್ರಭಾವ ಬೀರಿತು.

## 154.4. . ಮೊದಲನೆ ಮಹಾಯುದ್ಧದ ಆರಂಭ

1914 ರ ವರೆಗೆ ಪೂರ್ವಏಷ್ಯಾದಲ್ಲಿ ಜಪಾನಿನ ವಿಸ್ತರಣೆ ಮತ್ತು ಪ್ರಾಬಲ್ಯವು ಸ್ವಲ್ಪ ಮಟ್ಟಿಗೆ ಸುಧಾರಣೆಗಳಿಗೆ ಸಂಬಂಧಪಟ್ಟಿದ್ದಿತು. ಸೆರಾಜಿವೋ ಆಸ್ಟ್ರಿಯಾದ ರಾಜಕುಮಾರ ಫರ್ಡಿನ್ಯಾಂಡನ ಕೊಲೆ (ಜೂನ್, 28,1914) ಯುದ್ಧದ ಕಿಚ್ಚನ್ನು ಹಚ್ಚಿತು. ರಾಜಕೀಯ ಬಿಸಿಯೇರಿತು.ಜುಲೈ,28

ಆಸ್ಟ್ರಿಯಾ ಸರ್ಬಿಯಾಕ್ಕೆ ಅಂತಿಮ ಗಡುವನ್ನು ನೀಡಿತು ಮತ್ತು ಆಗಸ್ಟ್ 5 ವೇಳೆಗೆ ಆಸ್ಟ್ರಿಯಾ, ಜರ್ಮನಿ, ರಷ್ಯಾ, ಫ್ರಾನ್ಸ್ ಮತ್ತು ಇಂಗ್ಲೆಂಡ್ ಕಚ್ಚಾಟದಲ್ಲಿ ಸೇರಿಕೊಂಡವು. ಹೀಗೆ ಯಾರೋಪಿನ ಶಕ್ತಿಗಳು ತೀವ್ರವಾದ ಹೋರಾಟದಲ್ಲಿ ತೊಡಗಿದನು. ಹೀಗೆ ಸೃಷ್ಟಿಯಾದ ಸನ್ನಿವೇಶವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಜಪಾನ್ ಮುಕ್ತವೆಂದು ಭಾವಿಸಿತು.

1914 ರಲ್ಲಿಮೊದಲನೆ ಮಹಾಯುದ್ಧದ ಆರಂಭದೊಂದಿಗೆ ತನ್ನ ಸಾಮ್ರಾಜ್ಯಷಾಹಿ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಜಪಾನಿಗೆ ಒಂದು ಉತ್ತಮ ಅವಕಾಶ ಒದಗಿ ಬಂದಿತು. ಪೂರ್ವಏಷ್ಯಾದಲ್ಲಿ ವಿಶೇಷವಾಗಿ ಚೀನಾದಲ್ಲಿ ತನ್ನ ಅಧಿಕಾರವನ್ನು ವಿಸ್ತರಿಸಲು ಮತ್ತು ತನ್ನ ಸ್ಥಾನವನ್ನು ಕ್ರೋಡೀಕರಿಸಿಕೊಳ್ಳಲು ಜಪಾನ್ ಈ ಅವಕಾಶದ ಸಂಪೂರ್ಣ ಪ್ರಯೋಜನವನ್ನು ಪಡೆಯಿತು. ಬ್ರಿಟನ್ನಿನ ಮಿತ್ರನಾಗಿ ಅದು ಮೊದಲಿಗೆ ಜರ್ಮನಿಯ ಮೇಲೆ ಯುದ್ಧವನ್ನು ಘೋಷಿಸಿ ಚೀನಾದಲ್ಲಿ ಜರ್ಮನಿಗೆ ಸೇರಿದ್ದ ಕಿಯಾನೊ -ಚಾವೋವನ್ನು ವಶಪಡಿಸಿಕೊಂಡಿತು. ಆ ಮೂಲಕ ಅದು ಕ್ಷಾಂಟುಂಗ್‌ನಲ್ಲಿ ಭದ್ರವಾಗಿ ನೆಲೆಯಾರಿತು. ಜಪಾನಿನ ಈ ಆಕ್ರಮಣಗಳನ್ನು ವರ್ಸೇಲ್ಸ್ ಒಪ್ಪಂದದಲ್ಲಿ ಖಾತ್ರಿಪಡಿಸಲಾಯಿತು.

## 154.5 ಜಪಾನ್ ಯುದ್ಧದಲ್ಲಿ ಭಾಗವಹಿಸಿದುದು

ಯೂರೋಪಿನಲ್ಲಿ ಯುದ್ಧದ ಘಟನೆಗಳು ನಡೆಯುತ್ತಿರುವಾಗ ಜಪಾನ್ ಅತ್ಯಂತ ಬಲವಾದ ಸ್ಥಾನದಲ್ಲಿದ್ದಿತು. ಯುದ್ಧದಲ್ಲಿ ಭಾಗವಹಿಸಲು ಅದಕ್ಕೆ ನಿಜವಾದ ಆಸಕ್ತಿಯಿರಲ್ಲಿಲ್ಲ. ಇದೇ ಸಮಯದಲ್ಲಿ ಅದು ಇಂಗ್ಲೆಂಡಿನೊಂದಿಗೆ ಮೈತ್ರಿ ಒಪ್ಪಂದವನ್ನು ಮಾಡಿಕೊಂಡಿದ್ದು 1911ರಲ್ಲಷ್ಟೇ 10 ವರ್ಷಗಳ ಅವದಿಗೆ ಅದನ್ನು ನವೀಕರಿಸಲಾಗಿತ್ತು ಯುದ್ಧದಲ್ಲಿ ಯೂರೋಪಿನ ರಾಷ್ಟ್ರಗಳು ತಲ್ಲೀನವಾಗಿದ್ದು ಈ ಅವಕಾಶವನ್ನು ಏಷ್ಯಾದಲ್ಲಿ ತನ್ನ ವಿಸ್ತರಣೆಗೆ ಬಳಸಿಕೊಳ್ಳಲು ಬಯಸಿದುದು ಅದಕ್ಕೆ ಮತ್ತೊಂದು ಪ್ರಬಲ ಸನ್ನಿವೇಶವನ್ನು ಒದಗಿಸಿತು. ಯುದ್ಧ ಆರಂಭವಾದಾಗ ಇಂಗ್ಲೆಂಡ್ ಜಪಾನಿನ ಸಹಾಯ ಅಗತ್ಯವೆಂದು ಭಾವಿಸಲಿಲ್ಲ. ಆದರೆ ಯುದ್ಧ

ಮುಂದುವರಿದಂತೆ ಜಪಾನಿನಲ್ಲಿದ್ದ ಬ್ರಿಟಿಷರ ರಾಯಭಾರಿಯು ಜಪಾನಿನ ಸರ್ಕಾರವನ್ನು ಸಂಪರ್ಕಿಸಿ ಬ್ರಿಟಿಷ್‌ರ ವ್ಯಾಪಾರದ ನೌಕೆಗಳನ್ನು ನಾಶಪಡಿಸುತ್ತಿದ್ದ ಜರ್ಮನಿಯ ನೌಕೆಗಳನ್ನು ನಾಶಪಡಿಸಬೇಕೆಂಬ ಬ್ರಿಟಿಷ್ ಸರ್ಕಾರದ ಬಯಕೆಯನ್ನು ತಿಳಿಸಿದನು. ವಿಷಯವನ್ನು ಚರ್ಚಿಸಲು ಕರೆಯಲಾದ ಸಂಪುಟದ ಸಭೆಯಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಕೆಲವರು ಜಪಾನ್ ಯುದ್ಧದಲ್ಲಿ ಭಾಗವಹಿಸಬಾರದೆಂದು ಸೂಚಿಸಿದರೆ ಕೆಲವರು ಜಪಾನ್ ಜರ್ಮನಿಯೊಂದಿಗೆ ಸೇರುವಂತೆ ಸಲಹೆ ಮಾಡಿದರು. ಇನ್ನೂ ಕೆಲವರು ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದಕ್ಕೆ ಬದ್ಧವಾಗಿ ಜಪಾನ್ ಯುದ್ಧದಲ್ಲಿ ಇಂಗ್ಲೆಂಡಿನೊಂದಿಗೆ ಸೇರಬೇಕೆಂಬ ಅಭಿಪ್ರಾಯಪಟ್ಟರು. ಅಂತಿಮವಾಗಿ ತನ್ನ ವಿಸ್ತರಣೆಗೆ ದೊರೆತಿದ್ದ ಈ ಸುವರ್ಣ ಅವಕಾಶವನ್ನು ಕಳೆದುಕೊಳ್ಳದಿರಲು ತೀರ್ಮಾನಿಸಿತು ಮತ್ತು ಇಂಗ್ಲೆಂಡಿನ ಪರವಾಗಿ ಯುದ್ಧದಲ್ಲಿ ಪ್ರವೇಶಿಸಲು ನಿರ್ಧರಿಸಿತು.

### ಜಪಾನಿನ ಯುದ್ಧ ಘೋಷಣೆ

ಹೀಗೆ ನೀತಿಯ ಆಧಾರದ ಮೇಲೆ ತೆಗೆಸುಕೊಂಡ ಒಂದು ತೀರ್ಮಾನದ ನಂತರ ಜಪಾನ್ ಆಗಸ್ಟ್ 15, 1914ರಂದು ಜರ್ಮನಿಗೆ ಒಂದು ಸೂಚನೆಯನ್ನು ನೀಡಿ ಷಾಂಟುಂಗ್ ಪ್ರಾಂತದಲ್ಲಿ ಅದು ಹೊಂದಿದ್ದ ಸವಲತ್ತುಗಳನ್ನು ಬಿಟ್ಟುಕೊಡುವಂತೆ ಆ ಮೂಲಕ ಆ ಪ್ರದೇಶವನ್ನು ಚೀನಾಕ್ಕೆ ಹಿಂದಿರುಗಿಸಲಾಗುವುದೆಂದು ತಿಳಿಸಿತು. ಇದಕ್ಕೆ ಜರ್ಮನಿ ಉತ್ತರ ನೀಡದಿದ್ದುದರಿಂದ 23 ಆಗಸ್ಟ್ 1914 ರಂದು ಜಪಾನ್‌ಜರ್ಮನಿಯ ಮೇಲೆ ಯುದ್ಧವನ್ನು ಘೋಷಿಸಿತ್ತು ಮತ್ತು ಮುನ್ನಡೆಯಿತು. ಜಪಾನ್ ಚೀನಾದ ತಟಸ್ಥತೆಯನ್ನು ಉಲ್ಲಂಘಿಸಿತಾದರೂ ಯೂರೋಪಿನ ಯಾವ ರಾಷ್ಟ್ರವೂ ಚೀನಾದ ಸಹಾಯಕ್ಕೆ ಬರಲಿಲ್ಲ. ಕಿಯಾವೋಚೋವ್‌ನಲ್ಲಿ ಜರ್ಮನಿಯ ನೆಲೆಗು ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಳ್ಳಲಾಯಿತು. ಅಲ್ಲದೆ ಜಪಾನ್ ಜಿಂಗ್‌ಟಾವೋ ಇಂದ ಜಿನಾನ್ ವರೆಗಿನ ರೈಲು ಮಾರ್ಗ ಮತ್ತು ಆ ಭಾಗದ ಜರ್ಮನಿಯ ಗಣಿ ಆಸ್ತಿಗಳನ್ನು ವಶಪಡಿಸಿಕೊಂಡಿತು. ಈ ರೀತಿಯಲ್ಲಿ ಜಪಾನ್ ಕ್ಷಾಂಟುಂಗ್ ಪ್ರಾಂತ್ಯದಲ್ಲಿ ಭದ್ರವಾಗಿ ನೆಲೆನಿಂತಿತು. ನಂತರ ಜಪಾನ್ ತಾನು ಹೊಸದಾಗಿ ವಶಪಡಿಸಿಕೊಂಡ ಪ್ರದೇಶದಲ್ಲಿ ರಾಜಕೀಯ ಹತೋಟಿಯನ್ನು ಸ್ಥಾಪಿಸಲು ಆಲೋಚಿಸಿತು.

ಯುದ್ಧ ಮುಂದುವರಿದಂತೆ ಪೆಸಿಫಿಕ್ ಸಾಗರದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿದ್ದ ಜರ್ಮನಿಯ ಏಷ್ಯಾದ ನೌಕಾಪಡೆಯ ವಿರುದ್ಧವು ಕ್ರಮಕೈಗೊಳ್ಳಲು ನಿರ್ಧರಿಸಿತು. ಜರ್ಮನಿಯ ಒಡೆತನದಲ್ಲಿದ್ದ ಮಾರ್ಷಲ್ ಮತ್ತು ಕರೋಲಿನ್ ದ್ವೀಪಗಳು ಮತ್ತು ಉತ್ತರ ಭೂಮಧ್ಯರೇಖೆಯ ಇತರ ಅನೇಕ ಭಾಗಗಳನ್ನು ಜಪಾನ್ ವಶಪಡಿಸಿಕೊಂಡಿತು. 1917ರ ವೇಳೆಗೆ ಜಪಾನ್ ಆಸ್ಟ್ರೇಲಿಯ ಮತ್ತು ದಕ್ಷಿಣ ಆಫ್ರಿಕಾದ ಸಮುದ್ರಗಳ ಮೇಲೆ ಸಂಪೂರ್ಣ ಹತೋಟಿಯನ್ನು ಪಡೆಯಿತು. ವಿಚಿತ್ರವೆಂದರೆ ಜಪಾನ್ ಅಷ್ಟೊಂದು ಸುಲಭವಾಗಿ ತನ್ನ ವಿಸ್ತರಣೆಯಲ್ಲಿ ತೊಡಗಿದ್ದರೆ, ಯೂರೋಪಿನ ರಾಷ್ಟ್ರಗಳು ಯೂರೋಪಿನಲ್ಲಿ ಯುದ್ಧದಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗಿದ್ದು ಏಷ್ಯಾದಲ್ಲಿ ಏನು ನಡೆಯುತ್ತಿದೆ ಮತ್ತು ಜಪಾನ್ ಹೇಗೆ ಈ ಭಾಗವನ್ನು ಪ್ರಬಲ ಶಕ್ತಿಯಾಗಿ ಬೆಳೆಯುತ್ತಿದೆ ಎಂಬುದನ್ನು ಗಮನಿಸಲು ಅವುಗಳಿಗೆ ಸಮಯವಿರಲಿಲ್ಲ.

## 154.6 ಜಪಾನಿನ ಇಪ್ಪತ್ತೊಂದು ಬೇಡಿಕೆಗಳು

ಯೂರೋಪಿನ ರಾಷ್ಟ್ರಗಳು ಮೊದಲನೆ ಮಹಾಯುದ್ಧದಲ್ಲಿ ಸಂಪೂರ್ಣವಾಗಿ ತಲ್ಲೀನವಾಗಿದ್ದ ಈ ಸಂದರ್ಭದ ಸಂಪೂರ್ಣ ಪ್ರಯೋಜನ ಪಡೆದ ಜಪಾನ್, ಜನವರಿ, 18, 1915ರಂದು ತನ್ನ ಕುಪ್ರಸಿದ್ಧಿಯ ಇಪ್ಪತ್ತೊಂದು ಬೇಡಿಕೆಗಳನ್ನು ಚೀನಾದ ಮುಂದಿಟ್ಟು ಚೀನಾವನ್ನು ಸಂಪೂರ್ಣವಾಗಿ ತನ್ನ ಪ್ರಭುತ್ವಕ್ಕೆ ಒಳಪಡಿಸಲು ಪ್ರಯತ್ನಿಸಿತು. ಈ ಬೇಡಿಕೆಗಳ ಬಗ್ಗೆ ಇತರ ರಾಷ್ಟ್ರಗಳ ಟೀಕೆಗಳನ್ನು ಮುಚ್ಚಿಡಲು ಜಪಾನ್ ಪ್ರಯತ್ನಿಸಿತು, ಆದರೆ ಅವು ಬಹಿರಂಗಗೊಂಡವು. ಈ ಬೇಡಿಕೆಗಳನ್ನು ಐದು ಗುಂಪುಗಳಾಗಿ ವಿಂಗಡಿಸಲಾಗುತ್ತು. ಈ ಬೇಡಿಕೆಗಳು ಕ್ಷಾಂಟುಂಗ್, ಮಂಚೂರಿಯಾ, ಒಳ ಮಂಗೋಲಿಯ ಮತ್ತು ಕಲ್ಲಿದ್ದಲು ಹಾಗೂ ಕಬ್ಬಿಣದ ಆದಿರಿನ ಗಣಿಗಳ ರಿಯಾಯಿತಿಗಳಿಗೆ ಸಂಬಂಧಿಸಿದ್ದವು. ಚೀನಾ ತನ್ನ ಯಾವುದೇ ಕೊಲ್ಲಿಗಳು, ಬಂದರುಗಳು, ಮತ್ತು ಕರಾವಳಿಗಳನ್ನು ಇತರ ಯಾವುದೇ ರಾಷ್ಟ್ರಕ್ಕೆ ಗುತ್ತಿಗೆ ನೀಡಬಾರದೆಂಬುದು ಬೇಡಿಕೆಗಳಲ್ಲಿ ಒಂದಾಗಿತ್ತು. ಚೀನಾವನ್ನು ಯೂರೋಪಿಗೆ ಮುಚ್ಚುವುದು(ಯೂರೋಪಿಯನ್ನರಿಂದ ದೂರವಿರುವುದು)ಮತ್ತು ಏಷ್ಯಾವನ್ನು ಏಷ್ಯಾನ್ನರಿಗೆ ಉಳಿಸಿಕೊಳ್ಳುವುದು ಇದರ ಉದ್ದೇಶವಾಗಿತ್ತು.

ನಂತರ ಜಪಾನ್ ತನ್ನ ಬೇಡಿಕೆಗಳನ್ನು ಚೀನಾದ ಮುಂದೆ ಇಟ್ಟಿತು ಮತ್ತು ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ದುರ್ಬಲವಾಗಿದ್ದ ಚೀನದ ಮೇಲೆ ಒತ್ತಡವನ್ನು ಹೇರಿತು. ಬೇಡಿಕೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಲ್ಲಿ ಚೀನಾ ಜಪಾನಿನ ಆಶ್ರಿತ ರಾಜ್ಯವಾಗುತ್ತಿದ್ದಿತು. ಈ ಬೇಡಿಕೆಗಳು ದುರ್ಬಲವಾಗಿದ್ದ ಚೀನಾದ ಮೇಲೆ ಜಪಾನಿನ ಬಹಿರಂಗ ಆಕ್ರಮಣವಲ್ಲದೆ ಬೇರೇನೂ ಆಗಿರಲಿಲ್ಲ. ಈ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಜಪಾನ್ ಯೂರೋಪಿನ ರಾಷ್ಟ್ರಗಳೊಂದಿಗೆ ಅನೇಕ ರಹಸ್ಯ ಒಪ್ಪಂದಗಳಿಗೂ ಸಹಿ ಹಾಕಿತು. ವಿಶ್ವದ ಯಾವ ರಾಷ್ಟ್ರವೂ ಚೀನಾದ ಸಹಾಯಕ್ಕೆ ಬರದಿದ್ದುದರಿಂದ ಬೇಡಿಕೆಗಳಲ್ಲಿ ಸಾಧ್ಯವಾದಷ್ಟು ರಿಯಾಯಿತಿಗಳನ್ನು ಪಡೆದು ಅವುಗಳನ್ನು ಒಪ್ಪಿಕೊಳ್ಳದೆ ಬೇರೇ ದಾರಿಯೇ ಇರಲಿಲ್ಲ. ಅಂತಿಮವಾಗಿ ಚೀನಾ ಸಮಂಜಸವಲ್ಲದ ಮತ್ತು ಆಕ್ರಮಣಕಾರಿಯಾಗಿದ್ದ ಜಪಾನಿನ ಬೇಡಿಕೆಗಳನ್ನು ಒಪ್ಪಿಕೊಂಡಿತು. ಇವುಗಳನ್ನು ಸಾಮಾನ್ಯವಾಗಿ ಜಪಾನಿನ 21 ಬೇಡಿಕೆಗಳೆಂದು ಕರೆಯಲಾಗಿದೆ.

## 154.7 ಚೀನಾದ ಪ್ರತಿಕ್ರಿಯೆ

ಚೀನಾದ ಅಧ್ಯಕ್ಷನಿಗೆ ಎಲ್ಲಾ ವರ್ಗಗಳ ಬೆಂಬಲವನ್ನು ಪಡೆಯುವುದು ಚೀನಾದಲ್ಲಿ 21ಬೇಡಿಕೆಗಳನ್ನು ಸಲ್ಲಿಸಿದ್ದರ ಪರಿಣಾಮವಾಗಿದ್ದಿತು. ಹೆಚ್ಚಿನ ವರ್ಗಗಳು ಯಾವುದೇ ಪರಿಣಾಮಕಾರಿ ಪ್ರತಿರೋದದ ವಿಧಾನಗಳು ಚೀನಾಕ್ಕಿಲ್ಲದಿದ್ದರೂ ಯುದ್ಧ ವಿರೋದಕ್ಕೆ ಬೆಂಬಲವಾಗಿದ್ದವು. ಯುದ್ಧ ಸಿದ್ಧತೆಯ ಉದ್ದೇಶದಿಂದ ರಾಷ್ಟ್ರೀಯ ವಿಮೋಚನಾ ನಿಧಿಯೆಂಬ ಒಂದು ನಿಧಿಯನ್ನು ಸ್ಥಾಪಿಸಿ ಶ್ರೀಮಂತರು ಮತ್ತು ಬಡವರೂ ಸೇರಿದಂತೆ ಎಲ್ಲಾ ವರ್ಗಗಳನ್ನು ಚಂದಾದಾರನ್ನಾಗಿ ಮಾಡಿಕೊಳ್ಳಲಾಯಿತು. ಚೀನಾದ ಅಧ್ಯಕ್ಷನು ತನ್ನಗೆ ಧೈರ್ಯವಿದ್ದಷ್ಟೂ ಜಪಾನಿನ ಒತ್ತಡವನ್ನು ಎದುರಿಸಿದನೆಂಬುದರಲ್ಲಿ ಅನುಮಾನವಿರಲಿಲ್ಲ ಮತ್ತು ಅಂದಿನ ಪರಿಸ್ಥಿತಿಯಲ್ಲಿ ಸಾಧ್ಯವಾದಷ್ಟನ್ನು ಉಳಿಸಿದನು. ಆದರೆ ಯುದ್ಧವನ್ನು ಘೋಷಿಸುವಂತೆ ಕೆಣಕುವ ಅಂಶವನ್ನು ವಿರೋಧಿಸುವ ಧೈರ್ಯ ಅವನಿಗಿರಲಿಲ್ಲ. ಆದಾಗ್ಯೂ ತನ್ನ ಸರ್ಕಾರ ಪರವಾಗಿ ಬರುತ್ತಿದ್ದ ನಿರಂತರವಾದ ಅಭಿಪ್ರಾಯದ ಅಭಿವ್ಯಕ್ತಿಯಿಂದ, ಚೀನಾದ ಅಧ್ಯಕ್ಷನು ಬಹಳವಾಗಿ ಉತ್ತೇಜಿತನಾಗಿದ್ದನು ಮತ್ತು ಬಹುಷಃ ರಾಜಪ್ರಭುತ್ವವನ್ನು ಪುನರ್ ಸ್ಥಾಪಿಸುವುದು ಒಂದು ಚಳುವಳಿಯನ್ನು ಹೂಡುವ ಮಟ್ಟಿಗೆ ಆದರಿಂದ ಗಮನಾರ್ಹವಾಗಿ, ಪ್ರಭಾವಿತನಾಗಿದ್ದನು. ಹೀಗೆ ಜಪಾನಿನ ಬೇಡಿಕೆಗಳು, ಚೀನಾದ ಆಂತರಿಕ ಪರಿಸ್ಥಿತಿಯ ಮೇಲೆ ಪರೋಕ್ಷವಾಗಿ ಗಮನಾರ್ಹವಾದ ಪರಿಣಾಮವನ್ನು ಬೀರಿತು. ಆದರೆ ರಾಜಪ್ರಭುತ್ವದ ಮರುಸ್ಥಾಪನೆಗೆ ಬೆಂಬಲದ ಬಗ್ಗೆ ಚೀನಾದ ಅಧ್ಯಕ್ಷನಾಗಿದ್ದ ಯುವಾನ್ ಷಿಕಾಯ್‌ಗೆ ಸುಳ್ಳುಸುದ್ದಿ ನೀಡಲಾಗಿದ್ದಿತು. ಚೀನಾದಾದ್ಯಂತ ದಂಗೆಗಳುಂಟಾದವು ಮತ್ತು ಅಂತಿಮವಾಗಿ ಯುವಾನ್ ಷಿಕಾಯ್ 1916ರಲ್ಲಿ ಮರಣ ಹೊಂದಿದನು.

ಅಧ್ಯಕ್ಷನ ಪದಚ್ಯುತಿ ಮತ್ತು ಪೀಕೆಂಗನ್ನು ಶಾಸನ ಸಭೆಗೆ ವಹಿಸಿಕೊಟ್ಟ ನಂತರ ಕೇಂದ್ರ ಸರ್ಕಾರವು ಯುಮನ್ ಷಿಕಾಯ್ ಮಾಡಿಕೊಂಡಿದ್ದ ಒಪ್ಪಂದಗಳು ಅವುಗಳನ್ನು ಅನುಷ್ಠಾನಕ್ಕೆ ತಂದಿರಲಿಲ್ಲ ಮತ್ತು ಎರಡನೆಯದಾಗಿ ಪಾರ್ಲಿಮೆಂಟಿನ ಒಪ್ಪಿಗೆಯನ್ನು ಪಡೆದಿರಲಿಲ್ಲವೆಂಬ ಕಾರಣದಿಂದಲೇ ಅಸಿಂಧುವೆಂದು ಸಮರ್ಥಿಸಿಕೊಂಡಿತು. ಆದರೆ ಜಪಾನ್ ತಾನು ಪಡೆದುಕೊಂಡಿದ್ದ ಹೊಸ ಸ್ಥಾನಮಾನ ಮತ್ತು ಸಂದರ್ಭ ದೊರೆತಾಗಲೆಲ್ಲ 1915ರಲ್ಲಿ ಒಪ್ಪದಿದ್ದ ಷರತ್ತುಳಿಗೆ ಚೀನಾವನ್ನು ಬಲವಂತಪಡಿಸುವುದನ್ನು ಮುಂದುವರಿಸಿದ್ದರಿಂದ ಅದು ಸುಮ್ಮನಿರಲಿಲ್ಲ.

ಮಂಚೂರಿಯಾದಲ್ಲಿ ಜಪಾನಿಯರು ಮತ್ತು ಚೀನೀಯರ ನಡುವೆ ಸಮಸ್ಯೆ ನಿರಂತರವಾಗಿ ತಲೆದೋರುತ್ತಿದ್ದು ಜಪಾನ್ ಪ್ರತಿಯೊಂದು ಘಟನೆಯನ್ನೂ ತನ್ನ ಸ್ವಹಿತಾಸಕ್ತಿಗಳನ್ನು ಬೆಳೆಸಿಕೊಳ್ಳಲು ಬಳಸಿಕೊಂಡಿತು. ಈ ಅನೇಕ ವಿಷಯಗಳಲ್ಲಿ ಜಪಾನಿಯರು ಪೂರ್ಣವಾಗಿ ಅಥವಾ ಭಾಗಶಃ ತಪ್ಪೆಸಗಿದ್ದರು. ಆದರೆ ಅದು ಚೀನಾದ ಮೇಲೆ ತಮ್ಮ ಹಕ್ಕಿಗೆ ಒತ್ತಾಯಿಸುವುದನ್ನು ಅಡ್ಡಿಯುಂಟುಮಾಡಲಿಲ್ಲ. ಅವುಗಳಲ್ಲಿ ಅತ್ಯಂತ ಕ್ರೂರವಾದುದೆಂದರೆ ಚೆಂಗೋಹಿಯಾಟುನ್ ಘಟನೆ. ಈ ಘಟನೆಯಲ್ಲಿ ಜಪಾನಿನ ಪೋಲೀಸರು ಚೀನಾದ ವರ್ತಕನೊಬ್ಬನು ವ್ಯಾಪಾರಕ್ಕಿಟ್ಟಿದ ಕೆಲವು ವಸ್ತುಗಳನ್ನು ಪಡೆದು ಹಣ ನೀಡಲು ನಿರಾಕರಿಸಿದ್ದರು. ಈ ಸಮಸ್ಯೆಯಿಂದಾಗಿ ಎರಡೂ ಪಡೆಗಳು ಒಂದು ದೊಡ್ಡ ಘರ್ಷಣೆಗೆ ಮುಂದಾದವು. ಈ ಕಾರಣದಿಂದ ಜಪಾನಿಯರು ಹಣದ ಪರಿಹಾರವನ್ನು ಪಡೆದರು ಮತ್ತು ಮತ್ತೊಮ್ಮೆ ಚೀನಾ ರಿಯಾಯಿತಿಗಳನ್ನು ನೀಡಬೇಕಾಯಿತು.

## 154.8 ಜಪಾನಿನ ಸೈಬೀರಿಯಾ ಆಕ್ರಮಣ

ರಷ್ಯಾದಲ್ಲಿ ಜಾರನ ಆಳ್ವಿಕೆಯ ಕೊನೆಗೊಳಿಸಿದ 1917ರ ಬಾಲ್ಶೆವಿಕ್ಸ್ ಕ್ರಾಂತಿಯು ಯೂರೋಪಿನ ಯುದ್ಧದಿಂದ ಕದಡಿದ ನೀರಿನಲ್ಲಿ ಮೀನು ಹಿಡಿಯಲು ಮತ್ತೊಂದು ಅವಕಾಶವನ್ನು ನೀಡಿತು. ಜನರಲ್ ತೆರ್‌ಚಿಯ ಸೈನಿಕ ಆಡಳಿತವು 1918ರಲ್ಲಿ ಮಿತ್ರರಾಷ್ಟ್ರಗಳೊಂದಿಗೆ (ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್) ಸೈಬೀರಿಯಾಕ್ಕೆ ಪಡೆಗಳನ್ನು ಕಳುಹಿಸಿ ಬೈಕಲ್ ಸರೋವರದವರೆಗೆ ಪೂರ್ವ ಸೈಬೀರಿಯಾವನ್ನು ಆಕ್ರಮಿಸಿಕೊಂಡಿತು. ಆದಾಗ್ಯೂ 1919ರಲ್ಲಿ ಕೆಂಪು ಸೇನೆಯು ಶ್ವೇತ ಸೈನ್ಯವನ್ನು ಸೋಲಿಸಿತು. 1920ರ ಪ್ರಾರಂಭದಲ್ಲಿ ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ತಮ್ಮ ಪಡೆಗಳು ಸೈಬೀರಿಯಾದಿಂದ ತಮ್ಮ ಪಡೆಗಳನ್ನು ವಾಪಸ್ ಕರೆಸಿಕೊಂಡವು. ಆದರೆ ಟೋಕಿಯಾದಲ್ಲಿ ಯುದ್ಧಮಂತ್ರಿ ತನಾಕ ಸೈಬೀರಿಯಾಕ್ಕೆ ಹೆಚ್ಚುವರಿ ಪಡೆಗಳನ್ನು ಕಳುಹಿಸಲು ನಿರ್ಧರಿಸಿದನು. ತೆರೌಚಿ ಮತ್ತು ಪ್ರಧಾನಮಂತ್ರಿಗಳೂ ಸಹ ಸೈಬೀರಿಯಾದಲ್ಲಿ ಏರ್ಪಟ್ಟಿರುವ ಅರಾಜಕ ಪರಿಸ್ಥಿತಿಯು ಮಂಚೂರಿಯಾ ಮತ್ತು ಕೊರಿಯಾದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ಪೂರ್ವ ಸೈಬೀರಿಯಾ ಜಪಾನಿನ ವಶದಲ್ಲಿಯೇ ಉಳಿಯಬೇಕೆಂದು ಘೋಷಿಸಿದರು. ಸೈಬೀರಿಯಾ ದಂಡಯಾತ್ರೆಯು ಅಪಾರ ವೆಚ್ಚ ಮತ್ತು 75,000 ಸೈನಿಕರನ್ನೊಳಗೊಂಡ ದೂರದ ದುಬಾರಿಯಾದ ದಂಡಯಾತ್ರೆಯಾಗಿದ್ದಿತು. ಇತರ ಮಿತ್ರರಾಷ್ಟ್ರಗಳು ಈ ಭಾಗದಿಂದ ತಮ್ಮ ಪಡೆಗಳನ್ನು ವಾಪಸ್ಸು ಕರೆಸಿಕೊಂಡಿದ್ದರಿಂದ , ಜಪಾನಿನ ಕೇಂದ್ರ ಶಾಸನ ಸಭೆಯಲ್ಲಿ (ಡಯಟ್) ವಿರೋಧ ಪಕ್ಷವು ಸರ್ಕಾರ ಕ್ರಮವನ್ನು ತೀವ್ರವಾಗಿ ತಿರಸ್ಕರಿಸಿತು. ಜಪಾನಿನ ವಿರುದ್ಧ ರಷ್ಯಾದ ಶತೃತ್ವ ತೀವ್ರವಾಯಿತು. 1922ರಲ್ಲಿ ಮಾತ್ರವೇ ಜಪಾನ್ ಸೈಬೀರಿಯಾದಿಂದ ತನ್ನ ಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡಿತು.

## 154.9 ಯುದ್ಧದ ಕಡೆಯಲ್ಲಿ ಜಪಾನ್

1916-17ರ ರಹಸ್ಯ ಒಪ್ಪಂದಗಳು ಪೂರ್ವ ಏಷ್ಯಾದಲ್ಲಿ ಜಪಾನಿನ ಸ್ಥಾನವನ್ನು ಫ್ರಾನ್ಸ್, ಬ್ರಿಟನ್ ಮತ್ತು ಇಟಲಿಗಳು ಮಾನ್ಯಮಾಡಿವೆಯೆಂಬುದನ್ನು ಖಚಿತ ಪಡಿಸಿದವು. ರಷ್ಯಾ ಸಹ ಜುಲೈ 3, 1916ರ ಒಡಂಬಡಿಕೆಗಳ ಮೂಲಕ ಪೂರ್ವ ಏಷ್ಯಾ, ದಕ್ಷಿಣ ಮಂಚೂರಿಯಾ ಮತ್ತು ಒಳಮಂಗೋಲಿಯಾಗಳಲ್ಲಿ ಜಪಾನಿನ ಹೊಸ ಸ್ಥಾನಮಾನವನ್ನು ಒಪ್ಪಿಕೊಂಡಿತು. ಫೆಬ್ರವರಿ, 1917ರಲ್ಲಿ ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ಮತ್ತು ಇಟಲಿಗಳೊಂದಿಗೆ ಮಾಡಿಕೊಂಡ ರಹಸ್ಯ ಒಡಂಬಡಿಕೆಗಳಿಂದ ಕ್ವಾಂಟುಂಗ್‌ನ ಮೇಲೆ ಜಪಾನಿನಹಕ್ಕು ಮತ್ತಷ್ಟು ಬಲಗೊಂಡಿತ್ತು. ಚೀನಾದಲ್ಲಿ ತನ್ನ ಒಪ್ಪಂದ ಹಕ್ಕುಗಳ ಮೇಲೆ 1915ರ ಒಪ್ಪಂದಗಳು ಪ್ರತಿಕೂಲ ಪರಿಣಾಮ ಬೀರಿದ್ದರಿಂದ ಅಮೆರಿಕಾ ದೇಶವೊಂದೇ ಅದನ್ನು ವಿರೋಧಿಸಿತು. ಪೂರ್ವ ಏಷ್ಯಾದಲ್ಲಿ ಜಪಾನ್ ತನ್ನ ಪರಮಾಧಿಕಾರವನ್ನು ಸ್ಥಾಪಿಸಿತು. ಅವಕಾಶ ನೀಡಲು ಒಪ್ಪಲಿಲ್ಲ. ಸ್ವಲ್ಪ ಕಾಲದಲ್ಲಿಯೇ ಜರ್ಮನಿಯ ಪ್ರಚಾರದ ಮೂಲಕ ಅಮೆರಿಕಾ ಮತ್ತು ಜಪಾನ್‌ಗಳ ನಡುವಿನ ಶತೃತ್ವ ಪ್ರಚಂಚದ ರಾಷ್ಟ್ರಗಳಿಗೆ ಬಹಿರಂಗವಾಯಿತು. ಆದರೆ ಜಪಾನಿನೊಂದಿಗೆ ಜಗಳದಲ್ಲಿ ತೊಡಗುವುದು ಸಾಧುವಲ್ಲವೆಂದು ಭಾವುಸಿತು ಮತ್ತು ಈ ಸಂದಿಗ್ಧ ಸಮಯದಲ್ಲಿ ಶತೃವಿನ ಗುಂಪನ್ನು ಸೇರಿತು. ಅವು ಶತೃ ರಾಷ್ಟ್ರಗಳನ್ನು (ಆಕ್ಸಿಸ್) ಎದುರಿಸಲು ಬಲವಾಗಿ ಒಂದುಗೂಡಬೇಕಾಯಿತು. ಇದನ್ನು ಪರಿಗಣಿಸಿ ಅಮೆರಿಕಾ ಸಾಧ್ಯವಾದಷ್ಟು ಬೇಗ ಜಪಾನಿನೊಂದಿಗೆ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿತು. 1917ರ ಬೇಸಿಗೆಯಲ್ಲಿ ವಿಸ್ಕಂಟ್ ಇಶೀ ಕಿಕುಜಿರೊವನ್ನು ಜಪಾನ್ ಮತ್ತು ಅಮೆರಿಕಾಗಳ ನಡುವೆ ರಾಜಿಯನ್ನು ಮಾಡಿಕೊಳ್ಳಲು ವಾಷಿಂಗ್‌ಟನ್‌ಗೆ ಆಹ್ವಾನಿಸಲಾಯಿತು. ನಂತರ ವಿಸ್ಕಂಟ್ ಇಶೀ ಮತ್ತು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ರಾಬರ್ಟ್ ಲ್ಯಾನ್ಸಿಂಗ್ ನಡುವೆ ನಡೆದ ಮಾತುಕತೆಗಳಲ್ಲಿ, ಜಪಾನ್ ಯುದ್ಧದಿಂದ ನಿರ್ಗಮಿಸಬಹುದೆಂಬ ಭಯದಿಂದ ಅಮೆರಿಕಾ ಚೀನಾದಲ್ಲಿ ತನ್ನ ವಿಶೇಷ ಸವಲತ್ತುಗಳ ಮೇಲಿನ ಹಕ್ಕನ್ನು ಬಿಟ್ಟುಕೊಡುವಂತೆ ಜಪಾನನ್ನು ಒತ್ತಾಯಿಸಲಿಲ್ಲ. ಹೀಗೆ ನವೆಂಬರ್ 7, 1917ರಂದು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಲ್ಯಾನ್ಸಿಂಗ್ ಮತ್ತು ವಿಸ್ಕಂಟ್ ಇಶೀ ನಡುವೆ ಒಂದು ಸಾರ್ವಜನಿಕ ಪ್ರಕಟಣೆಯಲ್ಲು ರಾಜಿ ಏರ್ಪಟ್ಟಿತು. ಲ್ಯಾನ್ಸಿಂಗ್ ಇಶೀ ಒಪ್ಪಂದವೆಂದ ಕರೆಯಲಾದ ಇದರಂತೆ ಅಂತಿಮವಾಗಿ ಅಮೆರಿಕಾ ಸಹ ಚೀನಾದಲ್ಲಿ ಜಪಾನಿನ ವಿಶೇಷ ಹಕ್ಕುಗಳನ್ನು ಒಪ್ಪಿಕೊಂಡಿತು.

ಇಂತಹ ಸನ್ನಿವೇಶದಲ್ಲಿ ಮೊದಲನೆ ಮಹಾಯುದ್ಧ 1918ರಲ್ಲಿ ಕೊನೆಗೊಂಡಿತು. ಜಪಾನಿಗೆ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಯುದ್ಧವು ಒಂದು ದೊಡ್ಡ ವರವಾಯಿತೆಂಬುದನ್ನು ಸಾಭೀತುಪಟ್ಟಿತು. ಈಗ ಜಪಾನ್ ಆರ್ಥಿಕವಾಗಿ ಸಾಲಗಾರನಿಂದ ಸಾಲಕೊಡುವವನಾಗಿ, ರಾಜಕೀಯವಾ,ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಿತು ಮತ್ತು ಅದರ ಮಹತ್ವಾಕಾಂಕ್ಷೆಯ ವಿದೇಶಾಂಗ'ನೀತಿಯು ತಡೆಯಿಲ್ಲದೆ ಮತ್ತು ಹತೋಟಿಯಿಲ್ಲದೆ ಉಳಿದುಕೊಂಡಿತು(ಮುಂದುವರಿಯಿತು) ವಾಷಿಂಗ್‌ಟನ್ ಸಮ್ಮೇಳನದಲ್ಲಿ ಅದು ವಿಶ್ವದ ರಾಷ್ಟ್ರಗಳಿಗೆ ಷರತ್ತುಗಳನ್ನು ವಿಧಿಸುವ ಸ್ಥಿತಿಯನ್ನು ತಲುಪಿತು

## 154.10 ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಜಪಾನ್

ಮೊದಲನೆ ಮಹಾಯುದ್ಧ 1918ರಲ್ಲಿ ಕೊನೆಗೊಂಡಿತು. 1919ರಲ್ಲಿ ಪ್ಯಾರಿಸ್‌ನಲ್ಲಿ ಶಾಂತಿ ಸಮ್ಮೇಳನ ನಡೆಯಿತು. ಯುದ್ಧದಲ್ಲಿ ಜಪಾನ್ ಮತ್ತು ಚೀನಾಗಳೆರಡು ಮಿತ್ರರಾಷ್ಟ್ರಗಳ ಜೊತೆ ಹೋರಾಡಿದ್ದರಿಂದ, ಜಪಾನಿನ ನತ್ತು ಚೀನಾದ ನಿಯೋಗಗಳ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿ ವಿರುದ್ಧ ಹಕ್ಕುಗಳನ್ನು ಮಂಡಿಸಿದವು. ಆದಾಗ್ಯೂ ಜಪಾನಿನ ಹಕ್ಕುಗಳನ್ನು ಒಪ್ಪಿಕೊಳ್ಳಲಾಯಿತು ಮತ್ತು ಚೀನಾದ ಹಕ್ಕುಗಳನ್ನು ಪರಿಗಣಿಸಲಾಗಲಿಲ್ಲ. ಜಪಾನಿನ ನಿಯೋಎವು ಮುಖ್ಯವಾಗಿ ಕ್ಷಾಂಟುಂಗ್ ಮತ್ತು ಫೆಸಿಫಿಕ್ ದ್ವೀಪಳ ಬಗ್ಗೆ ಆಸಕ್ತಿ ಹೊಂದಿದ್ದರೂ, ಅದು ಜನಾಂಗ ಸಮಾನತೆಯ ಬಗ್ಗೆ ಕೆಲವು ಹೇಳಿಕೆಗಳನ್ನು ಪಡೆಯಲು ಉತ್ಸುಕವಾಗಿಟ್ಟಿತು. ಪರಿಣಾಮವಾಗಿ ಅದು ರಾಷ್ಟ್ರಳಗೆ ಒಕ್ಕೂಟ ಸಂಸ್ಥೆಯ ಪ್ರಣಾಳಿಕೆಗೆ(ತತ್ವ) ಜನಾಂಗ ಸಮಾನತೆಯ ಪರಿಚ್ಛೇದನವನ್ನು ಸೇರಿಸುವಂತೆ ಸೂಚಿಸಿತು. ಆದರೆ ಅದನ್ನು ತಿರಸ್ಕರಿಸಲಾಯಿತು. ಪೆಸಿಫಿಕ್ ದ್ವೀಪಗಳನ್ನುಂ ಜಪಾನಿನ ಆಡಳಿತ ಉಸ್ತುವಾರಿಗೆ(ಮ್ಯಾಂಡೇಟ್) ವಹಿಸಲಾಯಿತು. ಕಡೆಯಲ್ಲಿ ಜಪಾನ್ ಅಮೆರಿಕಾದ ಅಧ್ಯಕ್ಷ ವಿಲ್ಸನ್ನನಿಂದ ತಾನು ಬಯಸಿದ್ದನ್ನು ಪಡೆಯಿತು. ಜಪಾನಿನ ಹಕ್ಕನ್ನು ವಿರೋಧಿಸಿದ್ದ ಒಬ್ಬನೇ ಪ್ರತಿನಿಧಿಯಾಗಿದ್ದ ವಿಲ್ಸನ್ನನೂ ಜಪಾನ್ ಸಮ್ಮೇಳನದಿಂದ ಹೊರಹೋಗುವುದನ್ನು ತಡೆಯಲು ಇಟಲಿಯಂತೆಯೇ ಜಪಾನಿನ ಹಕ್ಕನ್ನು ಒಪ್ಪಿಕೊಂಡನು. ಅಂತಿಮವಾಗಿ, ಕಾಲಕ್ರಮದಲ್ಲಿ ಚೀನಾಕ್ಕೆ ಕೆಲವು ರಿಯಾಯಿತಿಗಳನ್ನು ನೀಡಬೇಕೆಂಬ ಷರತ್ತಿನ ಮೇಲೆ ಕ್ಷಾಂಟುಂಗ್‌ನಲ್ಲಿ ಜರ್ಮನಿಯ ಮೊದಲಿನ ಹಕ್ಕುಗಳನ್ನು ವಹಿಸಿಕೊಳ್ಳಲು ಜಪಾನಿನ ಅನುಮತಿ ನೀಡಲು ಒಪ್ಪಲಾಯಿತು. ಅಲ್ಲದೆ ಜಪಾನನ್ನು ರಾಷ್ಟ್ರಗಳ ಒಕ್ಕೂಟ ಸಂಸ್ಥೆಯ ಭದ್ರತಾ ಸಮಿತಿಯ ಐವರು ಶಾಶ್ವತ ಸದಸ್ಯರಲ್ಲಿ ಒಬ್ಬನನ್ನಾಗಿ ಮಾಡುವ ಮೂಲಕ ವಿಶ್ವದ ಪ್ರಬಲ ಲಾಷ್ಟ್ರಗಳಲ್ಲೊಂದೆಂದು ಗುರುತಿಸಲಾಯಿತು. ಹೀಗೆ ಇಂಗ್ಲೆಂಡ್, ಅಮೆರಿಕಾ ಮತ್ತು ಜಪಾನುಗಳನ್ನು ಪೂರ್ವ ಏಷ್ಯಾದ ಮೂರು ರಾಷ್ಟ್ರಗಳಾಗಿ ಉಳಿದವು.

## 154.11 ಸಾರಾಂಶ

ಈ ಘಟಕದಲ್ಲಿ ನಾವು ವಿಶ್ವರಾಷ್ಟ್ರವಾಗಿ ಬೆಳೆಯಲು ಜಪಾನಿಗೆ ಒಂದು ಉತ್ತಮ ಅವಕಾಶವನ್ನು ಕಲ್ಪಿಸಿದ ಮೊದಲನೆ ಮಹಾಯುದ್ಧ ಆರಂಭವಾದುದರ ಬಗ್ಗೆ ತಿಳಿದುಕೊಂಡೆವು. ಪಾಶ್ಚಿಮಾತ್ಯ ದೇಶಗಳು ತಮ್ಮದೇ ವ್ಯವಹಾರಗಳಲ್ಲಿ ಮುಳುಇದ್ದುದರಿಂದ, ಜಪಾನ್ ಯುದ್ಧದ ಅವಕಾಶವನ್ನು ಪೂರ್ವದಲ್ಲಿ ತನ್ನ ವಿಸ್ತರಣೆಗೆ ಬಳಸಿಕೊಳ್ಳಲು ಬಯಸಿತು. ದೀರ್ಘ ಪರಿಗಣನೆಯ ನಂತರ ಜಪಾನ್ ಯುದ್ಧದಲ್ಲಿ ಮಿತ್ರರಾಷ್ಟ್ರಗಳೊಂದಿಗೆ ಸೇರಲು ನಿರ್ಧರಿಸಿ ಆಗಸ್ಟ್ 15, 1914ರಂದು ಯುದ್ಧವನ್ನು ಘೋಷಿಸಿತು ಮತ್ತು ಬಹುಬೇಗನೆ ಅದುವರೆಗೆ ಜರ್ಮನಿಯ ಹತೋಟಿ ಮತ್ತು ಪ್ರಭಾವಕ್ಕೊಳಪಟ್ಟಿದ್ದ ಚೀನಾದ ಎಲ್ಲಾ ಪ್ರದೇಶಗಳನ್ನು ವಶಪಡಿಸಿಕೊಂಡಿತು. ಪಿಸಿಫಿಕ್ ಪ್ರದೇಶದಲ್ಲಿ ಜರ್ಮನಿಗೆ ಸೇರಿದ್ದ ಕೆಲವು ದ್ವೀಪಗಳನ್ನು ಅದು ವಶಪಡಿಸಿಕೊಂಡಿತು.ಜಪಾನಿನ ಆಕ್ರಮಣಕಾರಿ ಕ್ರಮವನ್ನು ಅಮೆರಿಕಾ , ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಟಲಿಗಳು ಬೆಂಬಲಿಸಿದವು.

ಜೊತೆಗೆ ಚೀನಾದಲ್ಲಿ ತನ್ನ ಆಕ್ರಮಣಕಾರಿ ನೀತಿಯ ಒಂದು ಭಾಗವಾಗಿ ಜಪಾನ್ ತನ್ನ ಕಿಪ್ರಸಿದ್ಧ(ಕುಖ್ಯಾತಿಯ) 21 ಬೇಡಿಕೆಗಳನ್ನು ಚೀನಾದ ಮುಂದಿಟ್ಟಿತೆಂಬುದನ್ನು ನಾವು ತಿಳಿದುಕೊಂಡೆವು. ಯಾವ ಯೂರೋಪಿನ ರಾಷ್ಟ್ರವೂ ಚೀನಾದ ಸಹಾಯಕ್ಕೆ ಬರದಿದ್ದುದರಿಂದ ಚೀನಾ ಇಷ್ಟವಿಲ್ಲದಿದ್ದರೂ ಆ ಬೇಡಿಕೆಗಳಲ್ಲಿ ಹೆಚ್ಚಿನವುಗಳನ್ನು ಒಪ್ಪಿಕೊಳ್ಳಬೇಕಾಯಿತು. ನಂತರ ತನ್ನ ರಕ್ಷಣೆಯ ರಾಜ್ಯವನ್ನಾಗಿ ಮಾಡಿಕೊಳ್ಳಲು ಸೈಬೀರಿಯಾಕ್ಕೆ ಜಪಾನ್ ತನ್ನ ಸೈನ್ಯವನ್ನು ಕಳುಹಿಸಿತು. ಆದರೆ ಬಹುಬೇಗನೆ ಲಾಭದಾಯಕವಲ್ಲವೆಂದು ತಿಳಿದು ಅದನ್ನು ಕೈಬಿಟ್ಟಿತು.

ಜಪಾನ್ ಉತ್ತರ ಮಂಚೂರಿಯಾವನ್ನು ವಶಪಡಿಸಿಕೊಳ್ಳಲೂ ಸಹ ಸೈನ್ಯವನ್ನು ಕಳುಹಿಸಿತು. ಅಮೆರಿಕಾ ಮಧ್ಯಪ್ರವೇಶಿಸಿ, ಜಪಾನ್ ಹಿಂತೆಗೆಯುವಂತೆ ಮಾಡಲಾಯಿತು. ಕಡೆಯದಾಗಿ ಯುದ್ಧದ ಕಡೆಯಲ್ಲಿ ಜಪಾನ್ ಆರ್ಥಿಕವಾಗಿ ಸಾಲ ನೀಡುವ ದೇಶವಾಗಿ ಮತ್ತು ವಿಶ್ವರಾಷ್ಟ್ರವಾಗಿ ಏಳಿಗೆ ಬಂದುದನ್ನು ನಾವು ತಿಳಿದುಕೊಂಡೆವು.

## 154.12 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**I** ಈ ಕೆಳಗಿನ ಪ್ರತಿಯೊಂದರ ಬಗ್ಗೆಯೂ ಒಂದು ಪುಟದಷ್ಟು ಬರೆಯಿರಿ

ಅ) 21 ಬೇಡಿಕೆಗಳು

ಆ) ಲ್ಯಾನ್ಸಿಂಗ್ ಇಶೀ ಒಪ್ಪಂದ

ಇ) 1917ರ ಒಪ್ಪಂದಗಳು

**II** ಎರಡು ಪುಟಗಳಿಗೆ ಕಡಿಮೆಯಿಲ್ಲದಂತೆ ಉತ್ತರಿಸಿ

1) ಜಪಾನ್ ಮೊದಲನೆ ಮಹಾಯುದ್ಧವನ್ನು ಪ್ರವೇಶಿಸಲು ಕಾರಣವಾದ ಅಂಶಗಳನ್ನು ವಿವರಿಸಿ.

2) ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಕೈಗೊಂಡ ಪ್ರಮುಖ ತೀರ್ಮಾನಗಳೇನು?
ಅವು ಜಪಾನಿನ ವಿಸ್ತರಣಾ ನೀತಿಯನ್ನು ಯಶಸ್ವಿಯಾಗಿ ಅನುಮೋಗಿದವೆ?

## 154.13 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು


1) Borton, Huge and Others : Japan between East West

2) Storny : History of Modern Japan

3) William : Modern Japan


ಅನುವಾದ : ಕೆ.ಬಿ. ಚಂದ್ರ

## ಟಿಪ್ಪಣಿಗಳು

# ಘಟಕ -155

## ಯುದ್ಧಗಳ ನಡುವಿನ ಕಾಲದಲ್ಲಿ ಜಪಾನಿನ ಆಂತರಿಕ ಬೆಳವಣಿಗೆಗಳು

ರಚನೆ.

155.0 ಉದ್ದೇಶಗಳು.

155.1 ಪೀಠಿಕೆ

155.2 ಜಪಾನಿನ ಆಂತರಿಕ ಪರಿಸ್ಥಿತಿಗಳು

155.3 ಆರ್ಥಿಕ ಬದಲಾವಣೆಗಳು

155.4 ಪ್ರಜಾಸತ್ತಾತ್ಮಕ ಬದಲಾವಣಗಳು

155.5 ಸಂಸತ್ ವ್ಯವಸ್ಥೆಯ ಬಗ್ಗೆ ಒಲವುಗಳು

155.6 ಹಿರೊಹಿಟೊ ಮತ್ತು ಪಕ್ಷ ಸರ್ಕಾರ

155.7 ಪ್ರಜಾಸತ್ತಾತ್ಮಕ ವಿರೋಧಿ ಭಾವನೆಗಳ ಉದಯ

155.8 ಸೇನಾಸಿದ್ಧಿಂತದ ಅಧಿಕಾರ

155.9 ಸಾರಾಂಶ

155.10 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

155.11 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು.

## 155.0 ಉದ್ದೇಶಗಳು

ಈ ಘಟಕದಲ್ಲಿ ನಾವು ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಜಪಾನಿನಲ್ಲಾದ ರಾಜಕೀಯ , ಆರ್ಥಿಕ ಬೆಳವಣಿಗೆಗಳು ಮತ್ತು ಪ್ರಜಾಸತ್ತಾತ್ಮಕ ಒಲವುಗಳಲ್ಲಾದ ಬದಲಾವಣೆಗಳ ಕೆಲವು ಪ್ರಮುಖ ವಿಷಯಗಳನ್ನು ಚರ್ಚಿಸುವೆವು. ಈ ಘಟಕವನ್ನು ಅಭ್ಯಸಿಸಿದ ನಂತರ ನೀವು ಕೆಳಕಂಡ ಅಂಶಗಳನ್ನು ತಿಳಿಯಕೊಳ್ಳಬೇಕಾಗುವುದು.

* ಮೊದಲನೆ ಮಹಾಯುದ್ಧದ ನಂತರ ಜಪಾನಿನಲ್ಲಿ ಪ್ರಜಾಸತ್ತಾತ್ಮಕ ನೀತಿ.
* ಜಪಾನಿನ ಆರ್ಥಿಕ ಸ್ಥಿತಿಗತಿಗಳು ಹೇಗೆ ಬದಲಾದವೆಂಬುದು
* ಜಪಾನಿನಲ್ಲಿ ರಾಜಕೀಯ ಪಕ್ಷಗಳ ಸರ್ಕಾರದ ಏಳಿಗೆ
* ಜಪಾನಿನಲ್ಲಿ ಪ್ರಜಾಸತ್ತಾತ್ಮಕ ಒಲವಿನ ಬೆಳವಣಿಗೆ
* ಜಪಾನಿನಲ್ಲಿ ಸಂಸತ್ ವ್ಯವಸ್ಥೆಯ ಹಂತ
* ಜಪಾನಿನಲ್ಲಿ ಸೈನ್ಯಾಡಳಿತದ ಅಲೆಯ ಉದಯ

## 155.1 ಪೀಠಿಕೆ

ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲಿ ಪೂರ್ವ ಏಷ್ಯಾದಲ್ಲಾದ ಅತ್ಯಂತ ಮಹತ್ವದ ಬೆಳವಣಿಗೆಗಳಲ್ಲಿ ವಿಶ್ವರಾಷ್ಟ್ರವಾಗಿ(ವಿಶ್ವದ ಪ್ರಬಲ ರಾಷ್ಟ್ರವಾಗಿ) ಜಪಾನಿನ ಏಳಿಗೆಯೂ ಒಂದು. 1894-95ರಲ್ಲಿ ಚೀನಾವನ್ನು ಸೋಲಿಸಿದಾಗ ಅದನ್ನು ಪೂರ್ವದ ಸಂಭವನೀಯ ಪ್ರಬಲ ರಾಷ್ಟ್ರವೆಂದು ಪರಿಗಣಿಸಲಾಯಿತು. ಅಂದಿನಿಂದ ಎರಡನೇ ಮಹಾಯುದ್ಧದ ಮುಕ್ತಾಯದವರೆಗೆ ಪೂರ್ವದ ವಲಯದಲ್ಲಿ ಜಪಾನಿನವಿಸ್ತರಣೆ ನಿರಾತಂಕವಾಗಿ ಮುಂದುವರಿಯಿತು. ಜಪಾನಿನ ವಿಸ್ತರಣಾ ನೀತಿಯು ಕೇವಲ ಪ್ರಾದೇಶಿಕ ವಿಸ್ತರಣೆಗೆ ಮಾತ್ರವೇ ಸೀಮಿತವಾಗಿರದೆ ಅದು ಆರ್ಥಿಕ ಮತ್ತು ಸಾಂಸ್ಕೃತಿಕಗಳನ್ನು ಒಳಗೊಂಡಿದ್ದಿತು. ಮೊದಲನೆ ಚೀನಾ_ಜಪಾನ್ ಯುದ್ಧದ ನಂತರ ಇಪ್ಪತ್ತನೇ ಶತಮಾನದ ಮೊದಲರ್ಧ ಭಾಗದಲ್ಲಿ ಜಪಾನಿನ ವ್ಯಾಪಾರ ಮತ್ತು ಕೈಗಾರಿಕೆ ತ್ವರಿತವಾಗಿ ಬೆಳವಣಿಗೆ ಹೊಂದಿತು. ಅದರ ಜನಸಂಖ್ಯೆ ಬೆಳವಣಿಗೆಯೂ ಅಷ್ಟೇ ತ್ವರಿತವಾಗಿತ್ತು. ತನ್ನ ಆಶ್ರಿತ ಪ್ರದೇಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತನ್ನ ಹಿಡಿತಕ್ಕೊಳ್ಳುವ ಉದ್ದೇಶದಿಂದ ಜಪಾನ್ ತನ್ನ ಸಂಸ್ಕೃತಿಯು ಅವುಗಳನ್ನು ಆಕರ್ಷಿಸಿತು.

ಜಪಾನಿನಲ್ಲಿ ರಾಜಕೀಯ ಪಕ್ಷಗಳ ಸರ್ಕಾರದ ಉದಯ ಇತ್ತೀಚಿನ ಬೆಳವಣಿಗೆ ಮೊದಲನೆ ಮಹಾಯುದ್ಧವು ಜಪಾನನ್ನು ಬಹು ಪ್ರಮುಖ ರಾಷ್ಟ್ರವನ್ನಾಗಿ ಮಾಡಿತು ಮತ್ತು ಅದರ ರಾಜಕೀಯ ನೋಟದಲ್ಲಿ ಬದಲಾವಣೆಯನ್ನು ಉಂಟುಮಾಡಿತು. ಮೊದಲನೆ ಮಹಾಯುದ್ಧದ ಕಾಲದಲ್ಲಿ ಮಿತ್ರಪಕ್ಷದ ರಾಷ್ಟ್ರಗಳೊಂದಿಗೆ ಅದರ ಒಡನಾಟವು ಜಪಾನಿನ ಜನರಲ್ಲಿ "ವಿಲ್ಸನ್ನನ ಪ್ರಜಾಸತ್ತಾತ್ಮಕ ಕಾರ್ಯಕ್ರಮ" ಜನಪ್ರಿಯವಾಗುವಂತೆ ಮಾಡಿತು. ಯುದ್ಧದ ಕಾಲದಲ್ಲಿ ತ್ವರಿತವಾದ ಕೈಗಾರಿಕೀಕರಣವು ಅತ್ಯಂತ ಆಧುನಿಕ ಜನಪ್ರಿಯ ಮತ್ತು ಬಹುಶಃ ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರದ ಕಡೆಗಿದ್ದ ಹೊಸ ರಾಜಕೀಯ ನಾಯಕತ್ವವನ್ನು ಹೋಲುವ ಒಂದು ಹೊಸ ಜಪಾನಿನ ಸಮಾಜವನ್ನು ಸೃಷ್ಟಿಸಿತು. ಮಿಗಿಲಾಗಿ ಜಪಾನಿನ ಜನರು ಹಳೆಯ ರಾಜಕೀಯ ವಿಚಾರಗಳನ್ನು ನಿರಾಕರಿಸುವ ಯುದ್ಧಕಾಲದ ಬರವಣಿಗೆಳಿಂದ ಪ್ರಭಾವಿತರಾಗಿದ್ದರು. ರಾಜಕೀಯ ಪಕ್ಷಗಳ ಸರ್ಕಾರದ ಬೆಳವಣಿಗೆಗೆ ಮತ್ತೊಂದು ಕಾರಣವೆಂದರೆ ಜಪಾನಿನಲ್ಲಿ ಸೈನಿಕಾಧಿಕಾರಿಗಳ ಸ್ಥಾನದ ಕುಸಿತ. ಮೊದಲನೆ ಮಹಾಯುದ್ಧ ಮತ್ತು ನಂತರದ ಜಪಾನಿನ ಆರ್ಥಿಕ ಪರಿಸ್ಥಿತಿಗಳೂ ಆ ಕಾಲದ ರಾಜಕೀಯ ಅಲೆಯ ಮೇಲೆ ನೇರವಾದ ಪರಿಣಾಮವನ್ನು ಉಂಟುಮಾಡಿತು.

## 155.2 ಜಪಾನಿನ ಆಂತರಿಕ ಪರಿಸ್ಥಿತಿ.

1912ರಲ್ಲಿ ಮುತ್ಸುಹಿಟೊನ ಮರಣದ ನಂತರ ಅವನ ಮಗ ಯೋಶಿಹಿಟೋ (1912-26) ಜಪಾನಿನ ಚಕ್ರವರ್ತಿಯಾದನು. ಅವನು ಅಸಮರ್ಥನಾಗಿದ್ದು ತನ್ನ ತಂದೆಯ ವ್ಯಕ್ತಿತ್ವ ಅವನಿಗಿರಲಿಲ್ಲ. ಮಿಜಿ ಚಕ್ರವರ್ತಿಯ ಮರಣದಿಂದ 1867ರಿಂದಲೂ ಆಡಳಿತದ

ಉನ್ನತ ಸ್ಥಾನದಲ್ಲಿದ್ದ ಕೆಲವೇ ಜನರ ಒಂದು ಗುಂಪಿನ ಅಧಿಕಾರ ಕೊನೆಗೊಂಡಿತು. ಒಂದು ಸಂಸದೀಯ ಸಂವಿಧಾನ ಮತ್ತು ಸೈನ್ಯಾಧಿಕಾರಿಗಳ ಪ್ರಾಬಲ್ಯದ ಅಲೆಯಿಂದ ಯೋಶಿಹಿಟೊನ ಆಡಳಿತ ಅಸಾಧ್ಯವಾಯಿತು. ತನ್ನ ಸುಪ್ರಸಿದ್ಧ ತಂದೆಯಂತೆ ಹೊಸ ಚಕ್ರವರ್ತಿಯು ನಿಜವಾದ ಆಡಳಿತದ ಗುಂಪಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುವ ಸಾಮರ್ಥ್ಯವನ್ನು ಹೊಂದಿರಲಿಲ್ಲ. ಸ್ವಾಭಾವಿಕನಾಗಿಯೇ ಈ ಕಾಲದಲ್ಲಿ ಜಪಾನಿನ ಸಿಂಹಾಸನವು ಒಂದು ಆಧ್ಯಾತ್ಮಿಕ ಶಕ್ತಿಯ ಗುರುತಾಗಿ(ಚಿಹ್ನೆ) ಉಳಿಯಿತು. ಸ್ವಲ್ಪಕಾಲದ ನಂತರ ಅದು ಅಧಿಕಾರಾಕಾಂಕ್ಷಿಗಳ ಕೈಯಲ್ಲಿ ಒಂದು ಆಯುಧವಾಯಿತು.

ಆರ್ಥಿಕ ವಲಯದಲ್ಲಿ ಪಶ್ಚಿಮದ ತಂತ್ರಜ್ಞಾನ ಮತ್ತು ಪೂರ್ವದ ಅಗ್ಗದ ಕೂಲಿಯ ಕಾರ್ಮಿಕ ವರ್ಗದ ಸಂಯೋಜನೆಯೂ ಪೂರ್ವ ಮತ್ತು ಪಶ್ಚಿಮದ ರಾಷ್ಟ್ರಗಳೆರಡರ ಮೇಲೂ ಜಪಾನಿಗೆ ಪ್ರಬಲವಾದ ಅನುಕೂಲವನ್ನು ನೀಡಿತು. ಕಡಿಮೆ ಬೆಲೆಯ ಜಪಾನಿನ ವಸ್ತುಗಳು ಮೊದಲಿಗೆ ಆ ದೇಶಕ್ಕೆ ಸರಬರಾಜು ಮಾಡುವ ಮೂಲಕ ದೇಶದ ಅಗತ್ಯವನ್ನು ಪೂರೈಸಿದ ನಂತರ ಹೊರ ಪ್ರಪಂಚದ ಮಾರುಕಟ್ಟೆಗಳಿಗೆ ಕಳುಹಿಸಲಾಯಿತು. ಜಪಾನಿನ ಜನಸಂಖ್ಯೆ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದಿತು. ಕೃಷಿ ಪ್ರಗತಿ ಹೊಂದಿದರೂ ಹೆಚ್ಚುತ್ತಿದ್ದ ಜನಸಂಖ್ಯೆಯ ಒತ್ತಡವನ್ನು ಪೂರೈಸಲು ಸಾಧ್ಯವಾಗಲಿಲ್ಲ. ಹೊಸ ಕೈಗಾರಿಕೆಗಳು ಮಾತ್ರವೇ ತೀವ್ರವಾಗಿ ಬೆಳೆಯುತ್ತಿದ್ದ ಕೃಷಿಕರ ವರ್ಗವನ್ನು ನಿರ್ವಹಿಸಲು ಸಾಧ್ಯವಾಗಬಲ್ಲ ಮಾರ್ಗನಾಗಿದ್ದಿತು. ಗ್ರಾಮಾಂತರ ಪ್ರದೇಶಗಳಿಂದ ಲಭ್ಯವಿದ್ದ ಅಗ್ಗದ ಕೂಲಿಕಾರರು ಜಪಾನಿನ ಬೆಳೆಯುತ್ತಿದ್ದ ಕೈಗಾರಿಕೆಗಳ ಮುಖ್ಯ ಆಧಾರವಾಗಿ ಪರಿಣಮಿಸಿದ್ದು.

## 155.3 ಆರ್ಥಿಕ ಬದಲಾವಣೆಗಳು

ಮೊದಲನೆ ಮಹಾಯುದ್ಧವು ಜಪಾನಿನ ವ್ಯಾಪಾರ ಮತ್ತು ಉದ್ದಿಮೆಗಳ ಮೇಲೆ ಮಹತ್ವದ ಪ್ರಭಾವವನ್ನು ಬೀರುವ ಮೂಲಕ ಮೊದಲು ಅದರ ಆಂತರಿಕ ಮತ್ತು ನಂತರ ವಿದೇಶಾಂಗ ನೀತಿಯ ಮೇಲೆ ಪರಿಣಾಮವನ್ನುಂಟು ಮಾಡಿತು. ಚೀನಾ-ಜಪಾನ್ ಯುದ್ಧವು (1894) ಜಪಾನಿನ ವಿದೇಶಿ ವ್ಯಾಪಾರಕ್ಕೆ ಪ್ರೋತ್ಸಾಹವನ್ನು ನೀಡಿತು. ಸಮುದ್ರ ಸ್ಥಾರಿಗೆಗೆ ಸರ್ಕಾರದ ಧನ ಸಹಾಯ, ಸ್ವರ್ಣಮಾನದ ಜಾರಿ, ಹೆಚ್ಚುವರಿ ರದ್ಧತಿ ಮುಂತಾದವು ಜಪಾನಿನ ವ್ಯಾಪಾರ ಮತ್ತು ಉದ್ಯಮಗಳ ಬೆಳವಣಿಗೆಗೆ ಕಾರಣವಾದವು. ರಷ್ಯ-ಜಪಾನ್ ಯುದ್ಧವು ಏಷ್ಯಾದ ರಾಷ್ಟ್ರಗಳಿಗೆ ಜಪಾನಿನ ರಫ್ತು ವ್ಯಾಪಾರವನ್ನು ಮತ್ತಷ್ಟು ಹೆಚ್ಚಿಸಿತು. ಆದರೆ ಮೊದಲನೆ ಮಹಾಯುದ್ಧದ ಆರಂಭವು ವ್ಯಾಪಾರದ ಕ್ರಮಬದ್ಧ ಮಾರ್ಗಗಳನ್ನು ಅಸ್ತವ್ಯಸ್ಥಗೊಳಿಸಿತು ಮತ್ತು ತಾತ್ಕಾಲಿಕ ಹಿನ್ನಡೆಯನ್ನುಂಟು ಮಾಡಿತು. 1915ರ ಪ್ರಾರಂಭದಲ್ಲಿ ಜಪಾನ್ ಅತ್ಯಂತ ಅನುಕೂಲಕರ ಸ್ಥಾನದಲ್ಲಿದ್ದಿತು. ಯುರೋಪ್ ತನ್ನ ಉತ್ಪಾದಿಸಲಾದ ವಸ್ತುಗಳನ್ನು ರಫ್ತು ಮಾಡಲು ಸಾಧ್ಯವಾಗಲಿಲ್ಲ ಮತ್ತು ಮಾರುಕಟ್ಟೆಯು ಜಪಾನಿನ ವಸ್ತುಗಳಿಗೆ ಮುಕ್ತವಾಗಿ ತೆರೆಯಿತು. ನಂತರ ಮಿತ್ರರಾಷ್ಟ್ರಗಳ ಬೇಡಿಕೆಗೆ ಅನಿಗುಣವಾಗಿ ಶಸ್ತ್ರಾಸ್ತ್ರ ಮತ್ತು ನೌಕೋದ್ಯಮಗಳು ಅಗಾಧವಾಗಿ ಬೆಳೆದವು. ಜಪಾನ್ ಯುದ್ಧರಂಗದಿಂದ ಬಹಳ ದೂರವಿದ್ದಿತು ಮತ್ತು ತನ್ನ ವಸ್ತುಗಳಿಗೆ ಅಪಾರ ಬೇಡಿಕೆಯಿಂದಾಗಿ ತನ್ನ ವ್ಯಾಪಾರ ಮತ್ತು ಉಧ್ಯಮಗಳಲ್ಲಿ ಬಾರೀ ಹೆಚ್ಚಳವನ್ನು ಕಂಡಿತು.

ಆದರೆ ಈ ಏರಿಕೆಯ ಕೆಲವು ಮೊದಲನೆ ಮಹಾಯುದ್ಧದ ನಂತರ ಕೊನೆಗೊಂಡಿತು. ಇಳಿಕೆಯ ಕಾಲ ಆರಂಭವಾಯಿತು. ವ್ಯಾಪಾರ ಸ್ಥಗಿತಗೋಂಡಿತು. ಮೊದಲನೆಯ ಮಹಾಯುದ್ಧದ ಕಾಲದಲ್ಲಿ ದೊರೆತ ಅನುಕೂಲ ಮಯವಾಯಿತು. ಈ ಕಷ್ಟಗಳೊಂದಿಗೆ ಭಯಂಕರ ಭೂಕಂಪಗಳು ಸಂಭಂವಿಸಿದವು. ಈ ನಷ್ಟವನ್ನು ಬರಿಸಲು ಜಪಾನ್ ಬಾರೀ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಯಿತು. ಆದ್ದರಿಂದ ವ್ಯಾಪಾರ ಸಮತೋಲನ ಜಪಾನಿಗೆ ಮತ್ತೊಮ್ಮೆ ಅನಾನುಕೂಲವಾಯಿತು.

ನಂತರದಲ್ಲಿ ಬಂಡವಾಳ ಕ್ರೋಡೀಕರಣ ಹೆಚ್ಚಳದಿಂದ ಏಕಸ್ವಾಮ್ಯದ ಪ್ರವೃತ್ತಿ ಬೆಳೆಯತೊಡಗಿತು. ಆ ಹಣಕಾಸಿನ ವಹಿವಾಟು (ಬ್ಯಾಂಕಿಂಗ್) ಐದು ಹಣಕಾಸಿನ ಸಂಸ್ಥೆಗಳ ಪ್ರಾಬಲ್ಯಕ್ಕೊಳ್ಳಪಟ್ಟಿತು. ಆ ಹಣಕಾಸಿನ ಸಂಸ್ಥೆಗಳೆಂದರೆ ಜೈಬತ್ಸು, ಮಿತ್ಸಯಿ, ಮಿತ್ಸಿಬಿಷಿ, ಸುಮಿಟೋಮೋ ಮತ್ತು ಯೋಷಿಡಾ, ಅವುಗಳಲ್ಲಿ ಮಿತ್ಸುಮಿ ಅತ್ಯಂತ ಪ್ರಮುಖವಾಗಿದ್ದು ರಾಷ್ಟ್ರೀಯ ಬಂಡವಾಳ ಹೂಡಿಕೆಯ ಶೇ. ಎಪ್ಪತ್ತೈದು ಭಾಗವನ್ನು ಅವು ನಿಯಂತ್ರಿಸುತ್ತಿದ್ದವು. ಈ ಬಂಡವಾಳ ಕೇಂದ್ರೀಕರಣದ ಜೊತೆಯಲ್ಲಿಯೇ ಉತ್ಪಾದಕರ ಸಂಘಗಳ(ಕಾರ್ಟೆಲ್ಸ್) ರಚನೆಯೂ ನಡೆಯಿತು. ಉತ್ಪಾದಕರ ಸಂಘಗಳು, ಉತ್ಪಾಧನೆ ವಿತರಣೆಯನ್ನು ನಿಯಂತ್ರಿಸಿದುದಲ್ಲದೆ, ಬಹುತೇಕ ಕೈಗಾರಿಕೆಗಳಲ್ಲಿ ಬೆಲೆಯ ಮಟ್ಟವನ್ನು ಉಳಿಸಿಕೊಂಡು ಬಂದವು. ಈ ಉತ್ಪಾಧಕರ ಸಂಘಗಳು ಎರಡು ಮಹಾಯುದ್ಧಗಳ ನಡುವಿನ ಜಪಾನಿನ ಆರ್ಥಿಕ ಜೀವನದ ಪ್ರಧಾನ ಲಕ್ಷಣಗಳಾಗಿದ್ದವು.

## 155.4 ಪ್ರಜಾಸತ್ತಾತ್ಮಕ ಒಲವು

ಮೊದಲನೆ ಮಹಾಯುದ್ಧವು ಯೂರೋಪಿನಲ್ಲಿ ನಿರಂಕುಶ ರಾಜಪ್ರಭುತ್ವಗಳ ಮೇಲೆ ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯದೊಂದಿಗೆ ಕೊನೆಗೊಂಡಿತು. ಜಪಾನಿಯರು ವಿಶೇಷವಾಗಿ ಮಧ್ಯಮ ವರ್ಗದ ಜನರು ಇತರ ವರ್ಗಗಳ ಜನರಂತೆ ತಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರವನ್ನು ಹೊಂದಲು ಬಯಸಿದರು. 1918ದಲ್ಲಿ ಜನರಲ್ ತೇಕಾಚಿಯ ಮಂತ್ರಿಮಂಡಳದ ಪತನದ ನಂತರ, ಸಯೊನ್‌ಜಿಯ ಆಶ್ರಯದಾತನಾದ ಹರ ತಕಾಶಿಯು (1856-1921)ಯುದ್ಧ ಪೂರ್ವ ಸೀಯೊಕೈ ಮಂತ್ರಿಮಂಡಳಗಳ ಮೇಲೆ ಪ್ರಬಲವಾದ ಪ್ರಭಾವವನ್ನು ಹೊಂದಿದ್ದು, ಪ್ರಧಾನಮಂತ್ರಿಯಾಗಿ ಸೇವೆಸಲ್ಲಿಸಿದ ಮೊದಲ ಸಾಮಾನ್ಯ ವ್ಯಕ್ತಿಯಾಗಿದ್ದನು. ಅವನು ಸರ್ಕಾರದೊಂದಿಗೆ ಧೀರ್ಘ ಕಾಲದ ಸಂಬಂಧಗಳಿಂದಾಗಿ ಸರ್ವಿಜನ್ರೋ ಮತ್ತು ಕುಲೀನರ ಸಭೆ(ಮೇಲ್ಮನೆ)ಯ ಬೆಂಬಲವನ್ನು ಗಳಿಸಿದನು. ಅವನು ಅನುಕೂಲಕರ ನಾಗರೀಕ-ಸೈನಿಕ ಸಂಬಂಧಗಳ ಬಗ್ಗೆ ತನ್ನ ಪೂರ್ವಿಕರಿಗಿಂತ ಅಪಾರ ಮೆಚ್ಚುಗೆಯನ್ನು ಹೊಂದಿದ್ದ ತನಾಕ ಗೀಚಿಯನ್ನು ಸೇನಾ ಮಂತ್ರಿಯನ್ನಾಗಿ ತನ್ನ ಸಂಪುಟಕ್ಕೆ ಸೇರಿಸಿಕೊಂಡನು. ಆದಾಗ್ಯೂ ಹರ ತಲಾಕನು, ಹಣದುಬ್ಬರ, ಜಪಾನಿನ ಆರ್ಥಿಕ ವ್ಯವಸ್ಥೆಯನ್ನು ಯುದ್ಧೋತ್ತರ ಸನ್ನಿವೇಶಗಳಿಗೆ ಸರಿಹೊಂದುವಂತೆ ಮಾಡುವ ಅಗತ್ಯ, ವಿದೇಶಿ ಆಲೋಚನೆಗಳ ಹಾವಳಿ ಮತ್ತು ತಲೆಯೆತ್ತುತ್ತಿದ್ದ ಪ್ರಬಲವಾಗುತ್ತಿದ್ದ ಕಾರ್ಮಿಕ ಚಳುವಳಿ ಮುಂತಾದ ಪ್ರಮುಖ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಹರನು ಯಶಸ್ವೀ ವಿಧಾನಗಳ ಮೂಲಕ ಸೀಯೊಕೈನ ಬಹುಮತವನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿದನು. ಹೊಸ ಚುನಾವಣೆ ಕಾನೂನುಗಳು, ಮತದಾನದ ಪುನರ್ ವಿಂಗಡನೆ.

ಹರನ ಮಂತ್ರಿಮಂಡಳವು ಉನ್ನತ ಶಿಕ್ಷಣದ ವಿಸ್ತರಣೆಗೆ ಹೆಚ್ಚಿನ ಪರಿಶ್ರಮ ವಹಿಸಿತು. ಆದರೆ ಮೂಲಭೂತ ಅಗತ್ಯಗಳ ಕೊರತೆ ಚಳುವಳಿಗಳು ಮತ್ತು ಬೀಗಮುದ್ರೆಗಳಿಂದಾಗಿ ಅದು ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚೇನವನ್ನು ಸಾಧಿಸಲು ಸಾಧ್ಯವಾಗಲಿಲ್ಲ. 1921ದಲ್ಲಿ ಹರನು ಬೋಕಿಯೋದ ರೈಲು ನಿಲ್ದಾಣದಲ್ಲಿ ರೈಲ್ವೇ ಕಾರ್ಮಿಕನೊಬ್ಬನಿಂದ ಕೊಲೆಯಾದನು. ಅವನ ಮರಣವು ಜಪಾನಿನಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ತೀವ್ರವಾದ ಹೊಡೆತವನ್ನು ನೀಡಿತು.

ಇದೇ ವೇಳೆಗೆ ಚಕ್ರವರ್ತಿ ಯೋಶಿಹಿಟೊ ಆರೋಗ್ಯದ ಹಿನ್ನೆಲೆಯಲ್ಲಿ ಸಾರ್ವಜನಿಕ ಜೀವನದಿಂದ ನಿವೃತ್ತನಾಗಿದ್ದುದರಿಂದ ಯುವರಾಜ ಹಿರೊಹಿಟೊ ರಾಜಪ್ರತಿನಿಧಿಯಾದನು. ಮೂರು ವರ್ಷಗಳವರೆಗೆ ಪಕ್ಷ ಅಧಿಕಾರ ವರ್ಗದ ಸರ್ಕಾರದ ಆಡಳಿತವನ್ನು ನಡೆಸಿತು. ಹೀಗೆ ಜವಾಬ್ದಾರಿ ಸರ್ಕಾರದ ಚಳುವಳಿಗೆ ಹಿನ್ನೆಡೆಯುಂಟಾಯಿತು

## 155.5 ಸಂಸದೀಯ ಸರ್ಕಾರ

ಹಳೆಯ ಕೆಲವೇ ಅಧಿಕಾರಿಗಳ ಆಡಳಿತದ ಮುಕ್ತಾಯದ ನಂತರ ರಾಜಕೀಯ ಶಕ್ತಿಯ ಸಮತೋಲನಕ್ಕೆ ಸಂಸದೀಯ ಮತ್ತು ಪಕ್ಷ ವ್ಯವಸ್ಥೆಗೆ ಮಹತ್ವ ಹೆಚ್ಚಿತು. ಹೆಚ್ಚು ಹೆಚ್ಚು ಕೈಗಾರಿಕೆ ಮತ್ತು ವಾಣಿಜ್ಯ ದುರೀಣರು ರಾಜಕೀಯ ಪಕ್ಷಗಳ ಮೇಲೆ ಹತೋಟಿಯನ್ನು ಸ್ಥಾಪಿಸಿ ಅನೇಕ ಪ್ರಕರಣಗಳಲ್ಲಿ ಭ್ರಷ್ಟಾಚಾರಕ್ಕೆ ಕಾರಣರಾದರು. ಆದರೆ ಇಂತಹ ಸೋಲುಗಳಿಂದಾಗ್ಯೂ ಪ್ರಜಾಪ್ರಭುತ್ವ ನಿಜವಾಗಿಯೂ ಪ್ರಬಲವಾಗತೊಡಗಿತು. 1925ದಲ್ಲಿ ಸಾರ್ವತ್ರಿಕ ಪುರುಷತ್ವ ವನ್ನು ಜಾರಿಗೆ ತರಲಾಯಿತು. ಇದು ಕಾಟೊ ಸರ್ಕಾರದ ಯಶಸ್ಸಿನ ಸಂಕೇತವಾಗಿತ್ತು. ಜಪಾನಿನ ಪ್ರಧಾನ ಮಂತ್ರಿ ಕಾಟೊ ತನ್ನ ಪಕ್ಷವಾದ ಕೆನ್‌ಸೀಕೈ ಮತ್ತು ಸೀಯೂಕೈಗಳ ಸಂಯುಕ್ತರಂಗ (ಮೈತ್ರಿಯನ್ನು ಏರ್ಪಡಿಸಿದನು. ಕೆನ್‌ಸಿಕೈ ಪಕ್ಷವು ದೇಶದ ಕೈಗಾರಿಕಾ ಹಿತ್ತಾಸಕ್ತಿಗಳಲ್ಲಿ ನಿಕಟ ಸಂಪರ್ಕ ಹೊಂದಿದ್ದತು. ಹಾಗೆಯೇ ಸೀಯುಕೈ ಪಕ್ಷವು ಹಿಂದೆ ಅಧಿಕಾರ ವರ್ಗದೊಂದಿಗೆ ಕೈಜೋಡಿಸಿದ್ದರೂ ಈಗ ಆರ್ಥಿಕ ವಿಸ್ತರಣೆಯ ಪರವಾಗಿತ್ತು. ಅವರು ಭೂಮಿ ಮತ್ತು ವಾಣಿಜ್ಯ ಹಿತಾಸಕ್ತಿಗಳೊಂದಿಗೆ ಹೆಣದುಕೊಂಡಿದ್ದು ಇದರಿಂದ ಅವರು ಪ್ರಬಲ ವ್ಯಕ್ತಿಗಳು ಮತ್ತು ಸ್ವಹಿತ್ತಾಸಕ್ತಿಗಳ ಕೈಯಲ್ಲಿನ ಅಸ್ತ್ರಗಳಂತಾಗಿದ್ದರು.

ಕಾಟೋ ನಾಯಕತ್ವದ ನಾಗರೀಕ ಸರ್ಕಾರವು ಖಾಯಂ ಸೇನೆಯ ಕಡಿತದ ಮೂಲಕ ಸರ್ಕಾರದ ವೆಚ್ಚದಲ್ಲಿ ಬಲವಂತವಾಗಿ ಗಮನಾರ್ಹ ಬದಲಾವಣೆಯನ್ನು ಮಾಡಬೇಕಾಯಿತು. ಅದು ವಸಾಹತು ವಿಸ್ತರಣೆಗೆ ನಿಲುಗಡೆ ಹಾಕಿತು. ಅದು ಒಂದು ಆರೋಗ್ಯ ವಿಮಾ ಕಾಯಿದೆ, ಮತ್ತು ಕಾರ್ಮಿಕ ಸಂಘಗಳ ಕಾಯಿದೆಯನ್ನು ಜಾರಿಗೆ ತಂದಿತು. ಅದು ಚೀನಾದ ಬಗ್ಗೆ ರಾಜಿ ಮಾಡಿಕೊಳ್ಳುವ ಒಲೈಕೆಯ ಧೋರಣೆಯನ್ನು ಅಳವಡಿಸಿಕೊಂಡಿತು. ಆದರೆ (1926)ರ ಪ್ರಾರಂಭದಲ್ಲಿ ಕಾಟೊ ಕಾಯಿಲೆ ಬಿದ್ದು ಮರಣಹೊಂದಿದನು.

ಅವನ ಮರಣದೊಂದಿಗೆ ಜಪಾನಿನ ಸಂವಿಧಾನಾತ್ಮಕ ಪ್ರಗತಿ ಮತ್ತೊಂದು ಹಿನ್ನಡೆಯನ್ನು ಎದುರಿಸಿತು. ಅದೇ ವರ್ಷ ಜಪಾನಿನ ಚಕ್ರವರ್ತಿ ಯೋಷಿಹಿಟೊ ಕೂಡ ಮರಣ ಹೊಂದಿದನು ಮತ್ತು ಹಿರೋಹಿಟೊ ಅವನ ಉತ್ತರಾಧಿಕಾರಿಯಾದನು.

## 155.6 ಹಿರೋಹಿಟೊ ಮತ್ತು ಪಕ್ಷ ಸರ್ಕಾರ

1912ರಲ್ಲಿ ಸಾವು ಮಿಜಿ ಚಕ್ರವರ್ತಿ ಮುತ್ಸುಹಿಟೊನನ್ನು ಅವನ ನೆನಪನ್ನು ಅಪಾರವಾಗಿ ಗೌರವಿಸಲಾಯಿತು. ಯೋಶಿಹಿಟೊ ಅವನ ಉತ್ತರಾಧಿಕಾರಿಯಾದನು. ಹೊಸ ಆಳ್ವಿಕೆಯನ್ನು ತಾಯ್‌ಶೋ, ಮಹಾ ಪ್ರಾಮಾಣಿಕತೆಯೆಂದು ವರ್ಣಿಸಲಾಗಿತ್ತು. ಯೋಶಿಹಿಟೊ ಮಾನಸಿಕವಾಗಿ ಸ್ವಸ್ಥನಲ್ಲದಿದ್ದುದರಿಂದ, 1921ರಲ್ಲಿ ಯುವರಾಜ ಹಿರೋಹಿಟೊ ಅವನ ರಾಜಪ್ರತಿನಿಧಿಯಾದನು. 1926ರಲ್ಲಿ ಯೋಶಿಹಿಟೊ ಮರಣಹೊಂದಿದನು. ನಂತರ ಹಿರೋಹಿಟೊ ಚಕ್ರವರ್ತಿಯಾದನು. ಇದರೊಂದಿಗೆ ಶೋವಾದ ಪ್ರಸಾರ(ಜ್ಞಾನೋದಯದಶಾಂತಿ) ಆರಂಭವಾಯಿತು. ಅವನು ವಿದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿ ಆ ಪ್ರದೇಶಗಳ ಅಪಾರ ಅನುಭವವನ್ನು ಸಂಪಾದಿಸಿದನು. ಅವನ ವೈಯಕ್ತಿಕ ಆಯ್ಕೆ(ಒಲವು)ಗಳು ಸರ್ಕಾರದ ಉಧಾರೀಕರಣವಾಗಿದ್ದಿತು ಮತ್ತು ತೀವಗಾಮಿ(ಅತಿಯಾದ) ಸೈನಿಕಾಧಿಕಾಧಿಕಾರಿಗಳು ಮತ್ತು ದೇಶಪ್ರೇಮವಾದಿಗಳ ವಿರುದ್ಧವಾಗಿದ್ದನು. ಅವನು ಮಿಜಿ ಚಕ್ರವರ್ತಿಯಷ್ಟು ಪ್ರಬಲನಾಗಿರಲಿಲ್ಲ. ತೀವ್ರಗಾಮಿಗಳು ಅವನ ಹೆಸರಿನಲ್ಲಿ ದೇಶವನ್ನು ಸಾಮ್ರಾಜ್ಯಶಾಹಿ ಸಾಹಸದತ್ತ ಕೊಂಡೊಯ್ದರು.

ಕೆನ್‌ಸೀಕೈ ಪಕ್ಷವೂ ಬ್ಯಾಂಕಿಂಗ್ ಕ್ಷೇತ್ರವನ್ನು ಸಾಮಾನ್ಯ ಹಣಕಾಸಿನ ಸಂಕಷ್ಟದಿಂದ ಪಾರು ಮಾಡಲು ಪ್ರಿವಿಕೌನ್ಸಿಲ್ ಬ್ಯಾಂಕಿಗೆ ಪರಿಹಾರವನ್ನು ನೀಡುವ ವಿಷಯದಲ್ಲಿ ವಿರೋದ ಪಕ್ಷವು ಅದನ್ನು 1927ರಲ್ಲಿ ಕಿತ್ತೊಗೆಯುವವರೆಗೆ ಅಧಿಕಾರದಲ್ಲಿತು. ನಂತರ ಸೀಯುಕೈ ಪಕ್ಷದ ಬರೋನ್ ತನಕ ಎಂಬ ಒಬ್ಬ ಸೈನಾಧಿಕಾರಿಯು ಪ್ರಧಾನ ಮಂತ್ರಿಯಾದನು. ಅವನು ಹಿಂದಿನ ಸರ್ಕಾರವು ಚೀನಾದ ಬಗ್ಗೆ ಅನುಸರಿಸಿದ್ದ ಒಲೈಕೆಯ ನೀತಿಯನ್ನು ಕೊನೆಗೊಳಿಸಿದನು. ಅವನು ಚೀನಾದೊಂದಿಗೆ ಎಲ್ಲಾ ಸಹಕಾರವನ್ನು ಕೈಬಿಟ್ಟು ಚೀನಾದಲ್ಲಿ ಜಪಾನಿನ ನ್ಯಾಯಭದ್ಧ ಹಕ್ಕುಗಳನ್ನು ನ್ಯಾಯಭದ್ದ ಮಾರ್ಗಗಳ ಮೂಲಕ ರಕ್ಷಿಸುವ ಬಗ್ಗೆ ಆಲೋಚಿಸಿ ತೊಡಗಿದನು.

## 155.7 ಪ್ರಜಾಸತ್ತಾತ್ಮಕ ವಿರೋಧಿ ಭಾವನೆಯ ಬೆಳವಣಿಗೆ

ಈ ಸನ್ನಿವೇಶದಲ್ಲಿ ಒಂದು ವ್ಯಾಪಕವಾದ ಅತೃಪ್ತಿಯು ಹಳೆಯ ಒಂದು ಸೇನಾಪಡೆ ಮತ್ತು ನೌಕಾಪಡೆಯ ಕಾಲುವೆಯ ಮೂಲಕ ಸ್ಫೋಟಗೊಂಡಿತು. ಈ ಎರಡು ಸೇವೆಗಳ ಉನ್ನತ ಹುದ್ದೆಗಳನ್ನು ಚೋಶು ಮತ್ತು ಸತ್‌ಸ್ ಬಣಗಳು ಏಕಸ್ವಾಮ್ಯವನ್ನಾಗಿ ಮಾರಿಕೊಂಡಿದ್ದವು. ಅಧಿಕಾರಿಗಳು, ಗ್ರಾಮಾಂತರ ಪ್ರದೇಶಗಳ ಭೂಮಾಲೀಕರು, ಶ್ರೀಮಂತ ರೈತರು ಮತ್ತು ಮಾಧ್ಯಮವರ್ಗ ಕುಟುಂಬಗಳಿಂದ ಬಂದವರಾಗಿದ್ದರು. ನೌಕಾಪಡೆ ಮತ್ತು ಸೇನಾಪಡೆಗಳ ಆಯವ್ಯಯದಲ್ಲಿ ಮಾಡಲಾದ ಕಡಿತ ಮತ್ತು ಸಮೀಪದ ಭವಿಷ್ಯದಲ್ಲಿ ಇನ್ನು ಹೆಚ್ಚಿನ ಕಡಿತದ ಭಯ ಈ ಅಧಿಕಾರಿಗಳನ್ನು ಕೆರಳಿಸಿತು.

ಸೇನಾಪಡೆಗಳ ಸಿಬ್ಬಂದಿಗಳು ಬಂಡವಾಳಶಾಹಿಯ ಕ್ರಾಂತಿಕಾರಿ ದ್ವೇಶದಿಂದ ಉತ್ತೇಜಿತರಾಗಿ ಕೃಷ್ಷಿಕ ವರ್ಗದ ಸ್ಥಿತಿಯನ್ನು ಸುಧಾರಿಸಲು ತಮ್ಮದೇ ಆದ ಕಾರ್ಯಕ್ರಮಗಳನ್ನು ಹಕಿಕೊಂಡರು. ಪ್ರತಿಯಾಗಿ ಕೃಷಿಕ ವರ್ಗವು ಸೇನಾ ಪಡೆಗಳಿಗೆ ತಮ್ಮ ಬೆಂಬಲ ನೀಡಿತು. ಈ ಕಾರಣದಿಂದ ಜಪಾನಿನಲ್ಲಿ ಸಂಸದೀಯ ಸರ್ಕಾರ ವಿಫಲವಾಯಿತು ಮತ್ತು ಸೈನಿಕ ಭಾವನೆಗಳು ಪುನರುಜ್ಜೀವನಗೊಂಡವು.

ಅಪ್ಪಟ ದೇಶಭಕ್ತಿಯು ಇದ್ದಿತು. ರಾಜಕೀಯ ಪಕ್ಷಗಳ ಮುಖಂಡರುಗಳು ಷಾಮೀಲಾಗಿದ್ದ ಬೃಹತ್ ವ್ಯಾಪಾಕವು (Big Business)ದೇಶದ ರಾಜಕೀಯ ಬದುಕು ದುಷ್ಟ ಬಂಡವಾಳಶಾಹಿ ಹಿತ್ತಾಸಕ್ತಿಗಳಿಂದ ಬ್ರಷ್ಟವಾಗಿದೆಯೆಂಬ ಅನುಮಾನ ತಲೆಯೆತ್ತಿತು. ದೇಶದಲ್ಲಿ ವರ್ತಕರ ಪ್ರಾಬಲ್ಯದಿಂದ ಅಂತರರಾಷ್ಟ್ರೀಯ ರಾಜಕೀಯದಲ್ಲಿ ದೇಶದ ಘಲತೆ ಕುಸಿದಿದೆಯೆಂಬ ಭಾವನೆ ಇದ್ದಿತು. ಜಪಾನಿನ ಸಮಾಜದಲ್ಲಿ ಸಂತೃಪ್ತಿಯಿಂದಿದ್ದ ವ್ಯಾಪಾರಸ್ತರು ಸಾಮ್ರಾಜ್ಯದ ವಿಶೇಷಾಧಿಕಾರವನ್ನು ಕಳೆದುಕೊಂಡಿದ

1930ರಲ್ಲಿ ಕೆಲವು ಸೈನ್ಯಾಧಿಕಾರಿಗಳು ನಾಗರೀಕ ಪಕ್ಷಗಳ ನಾಯಕರ ಅತಿಕ್ರಮೇಣದ ವಿರಿದ್ಧ ಸೈನ್ಯ ಮತ್ತು ನೌಕಾಪಡೆಗಳ ಸ್ಥಾನವನ್ನು ರಕ್ಷಿಸಲು ಚೆರ್ರಿ ಸೊಸೈಟಿಯನ್ನು ಸ್ಥಾಪಿಸಿದರು. ಚೆರ್ರಿ ಸೊಸೈಟಿಯು ಸರ್ಕಾರ(ರಾಜ್ಯವನ್ನು) ಬಂಡವಾಳಶಾಹಿ ಸಿದ್ಧಾಂತ ಮತ್ತು ಉಧಾರೀಕರಣ ಸಿದ್ಧಾಂತಗಳಿಂದ ಪರಿಶುದ್ಧಗೊಳಿಸಲು ತೀವ್ರಸ್ವರೂಪದ ರಾಷ್ಟ್ರೀಯ ಸುಧಾರಣೆಗಳಿಗೆ ಒತ್ತಾಯಿಸಿದರು. ಪಾಶ್ಚಿಮಾತ್ಯೀಕರಣ ವಿರೋಧಿ ಅಲೆಯೂ ಇದ್ದಿತು. 'ರಾಜಪ್ರಭುತ್ವ ಹಾದಿಗೆ' ಹಿಂದಿರುಗುವುದು ರಾಜಕೀಯ ಮೋಕ್ಷದ ಹಾದಿಯಾಗಿದ್ದಿತು. ಚಕ್ರವರ್ತಿಯನ್ನು ಬಂಡವಾಳಶಾಹಿ ಮಂತ್ರಿಗಳ ಹಿಡಿತದಿಂದ ರಕ್ಷಿಸಬೇಕಾಗಿತ್ತು.

## 155.8 ಸೇನಾ ಸಿದ್ಧಾಂತದ ಅಧಿಕಾರ

ಎರಡು ಮಹಾಯುದ್ಧಗಳ ನಡುವೆ ಸೈನಿಕ ವ್ಯಕ್ತಿಯ ಅಧಿಕಾರ ಸ್ಥಾಪನೆಯು ಜಪಾನಿನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. ಸರ್ಕಾರವನ್ನು ಹತೋಟಿಯಲ್ಲಿಟ್ಟುಕೊಂಡಿದ ಸೈನಿಕ ವ್ಯಕ್ತಿಗಳು ಮಂಚೂಣಿ ಖಂಡಾಂತರ ನೀತಿಯನ್ನು ಅನುಸರಿಸಿದರು. ಒಂದಲ್ಲಾ ಒಂದು ನೆಪದಲ್ಲಿ ಅವರು ಜೆಹೋಲ್, (ಪೀಕಿಂಗ್‌ನ ಉತ್ತರಕ್ಕಿರುವ ಪ್ರಾಂತ) ಚಹರ್ (ಒಳಮಂಗೋಲಿಯಾ ಮತ್ತು ವಾಯುವ್ಯ ಚೀನಾದ ನಡುವಿನ ಗಡಿಯ) ಹಪೀ (ಪೀಕಿಂಗ ಆಗ್ನೇಯಕ್ಕಿರುವ)ಗಳನ್ನು ಅವುಗಳ ನಾಯಕರನ್ನು ಒಲಿಸಿಕೊಳ್ಳುವ ಮೂಲ್ಕಕ 1935ರಲ್ಲಿ ಜಪಾನಿನ ಪ್ರಭಾವಿತ ವಲಯಕ್ಕೆ ಸೇರಿಸಿಕೊಂಡರು. ಜೊತೆಗೆ ಯೂರೋಪ್ ಖಂಡದ ಪರಿಸ್ಥಿತಿಯು ಒಂದು ಧೈರ್ಯಶಾಲಿ ಸಾಹಸಕ್ಕೆ ಲಾಭದಾಯಕವೆಂಬಂತೆ ಕಂಡುಬಂದಿತು. ಹಿಟ್ಲರನ ಏಳಿಗೆಯು ಯೂರೋಪಿನ ಗಮನವನ್ನು ಸೆಳೆಯಿತು. 1935ರಲ್ಲಿ ಅಮೆರಿಕ ತಟಸ್ಥತೆಯ ಕಾಯಿದೆಯನ್ನು ಜಾರಿಗೊಳಿಸಿತು, ಅದರಲ್ಲಿ ಬಿರುಗಾಳಿಗೆ ಸಿಲುಕಿರುವ ಯೂರೋಪಿನ ಭವಿಷ್ಯ ಏರಿಳಿತದಲ್ಲಿ ಯಾವುದೇ ಆಸಕ್ತಿ ವಹಿಸುವುದಿಲ್ಲವೆಂದು ಹೇಳಿತು. ಹಿಟ್ಲರನ ಹೇಳಿಕೆಯ ಕಮ್ಯುನಿಸ್ಟ್ ವಿರೋಧಿ ಹುಮ್ಮಸ್ಸು ಮತ್ತು ರೋಮ್-ಬರ್ಲಿನ್ ಶತ್ರುಕೂಟದ ರಚನೆಯಿಂದಾಗಿ ರಷ್ಯ ಜಾಗೃತಿ(ಎಚ್ಚರಿಕೆ)ಯ ಸ್ಥಿತಿಯಲ್ಲಿದ್ದಿತು. ಆದ್ದರಿಂದ ಸ್ಟಾಲಿನ್ನನು ಪಶ್ಚಿಮದ ಕಡೆ ತನ್ನ ಗಮನವನ್ನು ಕೇಂದ್ರೀಕರಿಸಬೇಕಾಯಿತು. ಚೀನಾದಲ್ಲಿ ಬೃಹತ್ ಹೆಜ್ಜೆಯನ್ನು ಇಡಲು ಇದು ಜಪಾನಿಗೆ ಅನುಕೂಲಕರ ಅವಕಾಶವಾಗಿದ್ದಿತು. ಯೂರೋಪಿನ ರಾಷ್ಟ್ರಗಳು ಯಾವುದೋ ಒಂದು ವಿಷಯದಲ್ಲಿ ಬಂದಿತವಾಗಿದ್ದು, ಚೀನಾದ ವಿಷಯದಲ್ಲಿ ಮಧ್ಯಪ್ರವೇಶಿಸುವ ನಿರೀಕ್ಷೆಯಿರಲಿಲ್ಲ.

ಮಿಗಿಲಾಗಿ ಜಪಾನಿನ ನಿರೀಕ್ಷೆಗೂ ಮೊದಲೇ ಚೀನಾದಲ್ಲಿ ಅಂತರ್ಯುದ್ಧ ಮುಕ್ತಾಯವಾಗುತ್ತಾ ಬಂದಿತು. ಜಪಾನಿನ ಆಕ್ರಮಣವನ್ನು ವಿರೋಧಿಸಲು ತನ್ನ ಕುಮಿಂಟಾಗ್ ಪಕ್ಷವನ್ನು ಚೀನಾದ ಕಮ್ಯುನಿಸ್ಟ್ ಪಕ್ಷದೊಂದಿಗೆ ಒಂದುಗೂಡಿಸುವೆನೆಂಬ ಷರತ್ತಿನ ಮೇಲೆ ಸಿಯಾಗ್‌ನಲ್ಲಿ ಭಂದನದಲ್ಲಿದ್ದ ಚಿಯಾಂಗ್‌ಕೈ ಷೆಕ್‌ನ ಬಿಡುಗಡೆಯು ಜಪಾನಿಗೆ ಒಂದು ಎಚ್ಚರಿಕೆಯಾಗಿದ್ದು ಅದು ಚೀನಾವನ್ನು ಕಬಳಿಸಲು ಬಯಸಿದ್ದರೆ ಆತುರವನ್ನು ಮಾಡಬೇಕಾಗಿದ್ದಿತು.

ಜಪಾನ್ ಅಪಾಯಕಾರಿ ಸಾಹಸಕ್ಕೆ ಕೈಹಾಕುವ ಮೊದಲು ಸ್ನೇಹಿತರಿಗಾಗಿ ಸುತ್ತಲೂ ನೋಡಿತು. ತಾನು ರಾಷ್ಟ್ರಗಳ ಒಕ್ಕೂಟವನ್ನು ತ್ಯಜಿಸಿದ್ದರಿಂದ ವಾಷಿಂಗ್‌ಟನ್ ನೌಕಾ ಒಪ್ಪಂದವನ್ನು ನಿರಾಕರಿಸಿದ್ದರಿಂದ, ತನ್ನ ಹಳೆಯ ಗೆಳೆಯ ಬ್ರಿಟನ್ನನ್ನು ಕಳೆದುಕೊಂಡಿದ್ದರಿಂದ ಮತ್ತು ಅಮೆರಿಕಾದ ಮಧುರ ಭಾವನೆಗಳನ್ನು ಕಳದುಕೊಂಡಿದ್ದರಿಂದ ಜಪಾನ್ ಏಕಾಂಗಿಯಾದಂತೆ ಭಾವಿಸತೊಡಗಿತು. ಮತ್ತು ಪಶ್ಚಿಮದಲ್ಲಿ ಯುದ್ಧ ಮೋಡಗಳು ಆವರಿಸುತ್ತಿರುವ ಸಮಯದಲ್ಲಿ ಏಕಾಂತವು ಅಪಾಯಕಾರಿಯಾಗಿದ್ದಿತು.

ಮಿಜಿ ಯುಗದ ಪ್ರಾರಂಭದ ದಿವಸಗಳಿಂದಲೂ ಜಪಾನಿನ ಸೇನಾ ಮುಖಂಡರು ಜರ್ಮನಿಯ ಸೈನ್ಯದ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಆದರೆ ಈಗ ಸೇನಾ ಮುಖಂಡರು ಹಿಟ್ಲರನ ನಾಜಿ ಸರ್ಕಾರದೊಂದಿಗೆ ಒಕ್ಕೂಟ ರಚನೆಯನ್ನು ಸೂಚಿಸಿದರು. 1936ರಲ್ಲಿ ಜರ್ಮನಿ ಮತ್ತು ಜಪಾನುಗಳ ನಡುವೆ ಒಂದು ಆಕ್ರಮಣ ವಿರೋಧಿ ಒಪ್ಪಂದವಾಯಿತು. ರಷ್ಯದ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಚಟುವಟಿಕೆಗಳ ವಿರುದ್ಧ ರಕ್ಷಿಸಿಕೊಳ್ಳಲು ಎರಡೂ ದೇಶಗಳು ಒಂದಾಗಿ ಕಾರ್ಯಪ್ರವೃತ್ತವಾಗಬೇಕಾಗಿತ್ತು. ಇದು ಮುಂದೆ ಜರ್ಮನಿ, ಇಟಲಿ ಮತ್ತು ಜಪಾನ್‌ಗಳ ನಡುವೆ ತ್ರಿಪಕ್ಷೀಯ ಒಪ್ಪಂದಕ್ಕೆ (1940) ಕಾರಣವಾಯಿತು. ಆದ್ದರಿಂದ ಜಪಾನ್ ಫ್ಯಾಸಿಸ್ಟ್ ಗುಂಪನ್ನು ಸೇರಿತು ಮತ್ತು ಅದರ ಅಪಾಯಕಾರಿ ಏಕಾಂಗಿತನ ಕೊನೆಗೊಂಡಿತು.

ಈ ವೇಳೆಗೆ ಮಂಚುಕೊ ಮತ್ತು ಉತ್ತರ ಚೀನಾದ ಮೂರು ಪ್ರಾಂತಗಳು ತಮ್ಮ ಕಲ್ಲಿದ್ದಲು ಮತ್ತು ಕಬ್ಬಿಣದ ಅದುರಿನ ಸಂಪತ್ತಿನ ಮೂಲಗಳೊಂದಿಗೆ ಜಪಾನಿನ ಹತೋಟಿಯಲ್ಲಿದ್ದವು. ಬೃಹತ್ ವ್ಯಾಪಾರವು ಸೇನಾ ನಾಯಕರಿಗೆ ಹೆಚ್ಚು ಹೆಚ್ಚು ಉಪಯುಕ್ತವಾಗತೊಡಗಿದ್ದವು. ಅಗ್ರ ಖಂಡಾಂತರ ನೀತಿಯು ಅವರಿಗೆ ತಮ್ಮ ಇಚ್ಚೆಗೆ ತಕ್ಕಂತೆ ತಮ್ಮ ಕೈಗಾರಿಕೆಗಳಿಗೆ ವಸ್ತುಗಳನ್ನು ಪೂರೈಸುವಂತಿದ್ದಿತು. ಆದ್ದರಿಂದ ಮುಂದಿನ ಹೆಜ್ಜೆಗೆ ಹಾದಿ ಸುಗಮವಾಗಿತ್ತು. 1940ರ ವೇಳೆಗೆ ದೇಶದ ಒಳಗೆ ಮತ್ತು ಹೊರಗೆ ನೇರ ಕ್ರಮವು ದೇಶವನ್ನು ರಾಷ್ಟ್ರೀಯವಾದಿಗಳು ಮತ್ತು ಸೈನಿಕ ವ್ಯಕ್ತಿಗಳ ನೀತಿಗೆ ಒಳಪಡಿಸಿತು. ಸೈನಿಕ ವ್ಯಕ್ತಿಗಳ ಪ್ರಾರಂಭಿಸಿದ ಅಪಾಯಕಾರಿ ಆಟವು ಅದುವರೆಗೆ ಯಶಸ್ವಿಯಾಯಿತು.

## 155.9 ಸಾರಾಂಶ

1918-19ನೇ ವರ್ಷಗಳಲ್ಲಿ ಮೊದಲನೆ ಮಹಾಯುದ್ಧವು ಶಾಂತಿಗೆ ಅವಕಾಶ ನೀಡಿದ್ದರಿಂದ ಒಂದು ಹೊಸ ಪ್ರಬಲ ರಾಷ್ಟ್ರವಾಗಿ ಜಪಾನ್ ಪೂರ್ವ ಏಷ್ಯಾದಲ್ಲಿ ಕಾಣಿಸಿಕೊಂಡಿತು. ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಅದರ ಅಭಿಪ್ರಾಯಗಳು, ವರ್ಸೇಲ್ಸ್ ಸಮ್ಮೇಳನ ಮತ್ತು ವಾಷಿಂಗ್‌ಟನ್ ಸಮ್ಮೇಳನಗಳಲ್ಲಿ ವ್ಯಕ್ತವಾದವು. ಆದರೆ ಆಂತರಿಕ ವ್ಯವಹಾರಗಳಲ್ಲಿ ಮುಖ್ಯವಾಗಿ ರಾಜಕೀಯ ಮತ್ತು ಸಾಮಾಜಿಕ ವಿಕಾಸದಲ್ಲಿ ಬೆಳವಣಿಗೆಯ ವಿಷಯಗಳಲ್ಲಿ ಜಪಾನಿನ ಮುಂದಿನ ಕ್ರಮಗಳು ಊಹಾತೀತವಾಗಿದ್ದವು. ಕೈಗಾರಿಕೀಕರಣವು ಜಪಾನಿನಲ್ಲಿ ಒಂದು ಹೊಸ ಸಮಾಜವನ್ನು ಹುಟ್ಟುಹಾಕಿತು. ಅದು ಆಧುನೀಕತೆ, ಪ್ರಖ್ಯಾತಿ ಮತ್ತು ಬಹಶಃ ಪ್ರಜಾಸತ್ತಾತ್ಮಕ ಸರ್ಕಾರದ ಕಡೆಗೆ ಮುಂದುವರಿಯುತ್ತಿದ್ದ ಹೊಸ ರಾಜಕೀಯ ನಾಯಕತ್ವದ ನೆರಳಿನಂತಿದ್ದಿತು. ಇದಕ್ಕಿಂತಲೂ ಹೆಚ್ಚಾಗಿ ಹಳೆಯ ಅಧಿಕಾಕ ವ್ಯವಸ್ಥೆಯ ಕೇಂದ್ರಬಿಂದುವಾಗಿದ್ದ ಜನರ್ೋಮರಣ ಹೊಂದಿದ ನಂತರ ಅವನಿಗೆ ಸರಿಸಮನಾದ ವ್ಯಕ್ತಿತ್ವದ ಉತ್ತಾರಾಧಿಕಾರಿ ಆ ಜಾಗವನ್ನು ತುಂಬಲಿಲ್ಲ, ಯಮಕಾಟ ಮತ್ತು ಮತ್ಸುಕೋಟ ವೃದ್ಧರಾಗಿದ್ದರು. ಪರಿಣಾಮವಾಗಿ 1918ರಲ್ಲಿ ಸೈನಿಕ ವ್ಯಕ್ತಿ ತೆರಾಚಿಯ ಮಂತ್ರಿಮಂಡಲದ ಪತನ ಮತ್ತು ಒಬ್ಬ ಸೇನಾಧಿಕಾರಿ ಮತ್ತು ಸೀಯುಕೈ ಪಕ್ಷದ ಅಧ್ಯಕ್ಷ ಹರಾನನ್ನು ಸರ್ಕಾರದ ಮುಖಂಡನನ್ನಾಗಿ ಆಯ್ಕೆ ಮಾಡಿದ್ದುದನ್ನು ಪ್ರಗತಿಪರರು ಹೊಸ ರಾಜಕೀಯ ಯುಗದ ಉದಯವೆಂದು ಪ್ರಶಂಸಿಸಿದ್ದರು.

ಜಪಾನ್ ಆರ್ಥಿಕ ರಂಗದಲ್ಲಿ ಪ್ರಗತಿಯನ್ನು ಮಾಡಿದ್ದರೂ ಅದು ಬಹಳ ಕಾಲ ಉಳಿಯಲಿಲ್ಲ. 1914ರಿಂದ 1927ರ ನಡುವೆ ಜಪಾನ್ ಏಳಿಗೆಯ ಕಾಲವನ್ನು ಕಂಡಿತು ಆದರೆ 1927ರಲ್ಲಿ ಅದಕ್ಕೆ ಗ್ರಹಣ ತಗುಲಿತು. 20ನೇ ಶತಮಾನದ 30ರ ದಶಕದಲ್ಲಿ ಇಡೀ ಪ್ರಪಂಚವೇ ಆರ್ಥಿಕ ಸಂಕಟವನ್ನು ಎದುರಿಸುತ್ತಿದ್ದು, ಜಪಾನ್ ಅದಕ್ಕೆ ಹೊರತಾಗಿರಲಿಲ್ಲ.

ಅಲ್ಲದೆ ಈ ಘಟಕದಲ್ಲಿ ನಾವು ಪಕ್ಷಗಳ ಹೊರಗಿನ ಶಕ್ತಿಗಳು ವಹಿಸಿದ ಮಹತ್ವದ ಪಾತ್ರದಿಂದ ಜಪಾನಿನಲ್ಲಿ ಪಕ್ಷ ವ್ಯವಸ್ಥೆ ಯಶಸ್ವಿಯಾಗಲಿಲ್ಲ. ಇದರಲ್ಲಿ ವ್ಯಾಪಾರಸ್ಥರು, ಸೈನಿಕ ವ್ಯಕ್ತಿಗಳು ಮತ್ತು ಪ್ರತಿಷ್ಠಿತ ವ್ಯಕ್ತಿಗಳು ಮುಂತಾದವರು ಸೇರಿದ್ದರು. ಜಪಾನಿನಲ್ಲಿಮಂತ್ರಿಮಂಡಲಗಳ ಅನಿಶ್ಚಿತ ಪರಿಸ್ಥಿತಿಯಿದ್ದಿತು. ಮಂತ್ರಿ ಮಂಡಲಗಳ ಅವಧಿ ಅತ್ಯಲ್ಪವಾಗಿತ್ತು. ಮಂತ್ರಿಮಂಡಲಗಳು ಮತ್ತು ದೇಶದ ರಾಜಕೀಯ ಜೀವನದ ಮೇಲೆ ಸೈನ್ಯದ ಹಿಡಿತದಿಂದಾಗಿ ಸಂಕಷ್ಟಗಳು ಮತ್ತಷ್ಟು ಹೆಚ್ಚಿದವು.

## 155.10 ನಿಮ್ಮ ಪ್ರಗತಿಯ ಪರಿಶೀಲನೆ

**I** ಕೆಳಗಿನ ಹೇಳಿಕೆಗಳನ್ನು ಓದಿ ಸರಿ(✓) ಅಥವಾ ತಪ್ಪು(X)ಗಳನ್ನು ಗುರುತಿಸಿ.

1. ಯೊಶಿಹಿಟೊ ಚಕ್ರವರ್ತಿ ಹಿರೊಹಿಟೊನ ಉತ್ತರಾಧಿಕಾರಿಯಾದನು. ( )
2. ಹರ ಸಕಾಶಿ1918ರಲ್ಲಿ ಚೀನಾದ ಪ್ರಧಾನ ಮಂತ್ರಿಯಾದನು ( )
3. 1925ರಲ್ಲಿ ಸಾರ್ವತ್ರಿಕ
4. ಕೆನ್‌ಸೀಕೈ ಪಕ್ಷವು 1927ರವರೆಗೂ ಜಪಾನಿನಲ್ಲಿ ಅಧಿಕಾರದಲ್ಲಿ ಮುಂದುವರಿಯಿತು.
5. ಸೀಯುಕೈ ಪಕ್ಷದ ಬೇರನ್ ತನಾಕ ಜಪಾನಿನ ಪ್ರಧಾನ ಮಂತ್ರಿಯಾದನು.

**II** ಕೆಳಗಿನವುಗಳ ಬಗ್ಗೆ ಐದು ಸಾಲುಗಳನ್ನು ಬರೆಯಿರಿ.

1. ಜೈಬತ್ಸು.
2. ಚೆರ್ರಿ ಸೊಸೈಟಿ
3. 1935ರ ತಟಸ್ಥತೆಯ ಕಾಯಿದೆ

4. ಆಕ್ರಮಣ ವಿರೋಧಿ ಒಪ್ಪಂದ(Ante Comintern pact)

**III** ಇವುಗಳ ಬಗ್ಗೆ ಎರಡು ಪುಟಗಳನ್ನು ಬರೆಯಿರಿ

1. ಎರಡು ಮಹಾಯುದ್ಧಗಳ ನಡುವೆ ಜಪಾನಿನ ಆರ್ಥಿಕ ಬದಲಾವಣೆಗಳನ್ನು ಚರ್ಚಿಸಿ.
2. ಜಪಾನಿನಲ್ಲಿ ಪಕ್ಷ ವ್ಯವಸ್ಥೆಯ ವಿಫಲತೆಗೆ ಕಾರಣಗಳೇನು?
3. 1918ರಲ್ಲಿ ನಂತರ ಜಪಾನಿನ ಆಂತರಿಕ ನೀತಿಯನ್ನು ವಿವರಿಸಿ.

## 155.11 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು


1. K.S.Latourette East. : A Short History of the Far
2. Clyde and Buss : The Far East.
3. William Barry : Modern Japan.


ಇಂಗ್ಲಿಷ್ ಮೂಲ: ಎಸ್. ಮೀರ್ ಸಮಿವುಲ್ಲ.

ಅನುವಾದ : ಕೆ.ಬಿ.ಚಂದ್ರ.

# ಘಟಕ- 156

## ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಜಪಾನಿನ ವಿದೇಶಾಂಗ ನೀತಿ.

ರಚನೆ

156.0 ಉದ್ದೇಶಗಳು

156.1 ಪೀಠಿಕೆ

156.2 1919ರ ವರ್ಸೇಲ್ಸ್ ಸಮ್ಮೇಳನದಲ್ಲಿ ಜಪಾನ್

156.3 ವಾಷಿಂಗ್‌ಟನ್ ಸಮ್ಮೇಳನ, 1921-22

156.4 ಮಂಚುಕೊ ಸ್ಥಾಪನೆ.

156.5 ಜರ್ಮನಿ ಮತ್ತು ರಷ್ಯಗಳೊಂದಿಗೆ ಜಪಾನಿನ ಸಂಬಂಧ

156.6 ಎರಡನೇ ಚೀನಾ-ಜಪಾನ್ ಯುದ್ಧ

156.7 ಜಪಾನ್ ಮತ್ತು ರಾಷ್ಟ್ರಗಳ ಒಕ್ಕೂಟ ಸಂಘ

156.8 ಜಪಾನ್ ಮತ್ತು ಅಮೆರಿಕಾ

156.9 ಸಾರಾಂಶ

156.10 ನಿಮ್ಮ ಪ್ರಗತಿ ಪರೀಕ್ಷಿಸಿ

156.11 ಅಧ್ಯಯನಕ್ಕೆ ಗ್ರಂಥಗಳು

## 156.0 ಉದ್ದೇಶಗಳು

ಈ ಘಟಕವು 1918ರಿಂದ ಜಪಾನಿನ ವಿದೇಶಾಂಗ ನೀತಿಯ ಮೇಲೆ ಬೆಳಕು ಚೆಲ್ಲುವ ಉದ್ದೇಶವನ್ನು ಹೊಂದಿದೆ. ಜಪಾನಿನ ವಿದೇಶಾಂಗ ನೀತಿಯನ್ನು ಸಾಂಪ್ರಾದಾಯಿಕ ಸಾಮ್ರಾಜ್ಯದ ಹಿತಾಸಕ್ತಿಗಿಂತಲೂ ಆರ್ಥಿಕ ಹಿತಾಸಕ್ತಿಯೊಂದಿಗೆ ಗುರುಸಲಾಗಿದೆ. ಮೊದಲನೆ ಮಹಾಯುದ್ಧವು ಜಪಾನನ್ನು ಪ್ರಬಲ ರಾಷ್ಟ್ರಗಳ ಸಹವಾಸಕ್ಕೆ ದೂಡಿದುದಲ್ಲದೆ ಪೂರ್ವದ ರಾಜಕೀಯಕ್ಕೆ ಬೇಕಾದ ಆರ್ಥಿಕ ಮತ್ತು ರಾಜಕೀಯ ಶಕ್ತಿಯನ್ನು ಭೌತಚಿಕವಾಗಿ ಹೆಚ್ಚಿಸಿತು ಈ ಘಟಕವನ್ನು ಅಭ್ಯಸಿಸಿದ ನಂತರ ನೀವು ಕೆಳಕಂಡ ಅಂಶಗಳನ್ನು ತಿಳಿದುಕೊಳ್ಳುವಂತಾಗಬೇಕು.

* ಮೊದಲನೆ ಮಹಾಯುದ್ಧ ಕಾಲದಲ್ಲಿ ಜಪಾನ್ ಹೇಗೆ ಚೀನಾಕ್ಕೆ ಸಂಬಂಧಿಸಿದಂತೆ ಆಕ್ರಮಣಕಾರಿ ನೀತಿಯನ್ನು ಅನುಸರಿಸಿತು ಎಂಬ ಬಗ್ಗೆ

* ವಾಷಿಂಗ್‌ಟನ್ ಸಮ್ಮೇಳನವನ್ನು ಸೇರಿ ಪಾಶ್ಚಿಮಾತ್ಯ ಸಾಮ್ರಾಜ್ಯಷಾಹಿ ರಾಷ್ಟ್ರಗಳಿಂದ ಗಳಿಸಿದ ಅನೇಕ ರಿಯಾಯಿತಿಗಳ ಬಗ್ಗೆ.

* ವಾಷಿಂಗ್‌ಟನ್ ಸಮ್ಮೇಳನದ ನಂತರ ಜಪಾನ್ ಉಳಿಸಿಕೊಳ್ಳಲು ಪ್ರಯತ್ನಿಸಿದರೂ ಅಮೆರಿಕಾದೊಂದಿಗೆ ಸ್ನೇಹ ಸಂಬಂಧಗಳನ್ನು ಉಳಿಸಿಕೊಳ್ಳಲು ಆಗದಿದ್ದುದು.

* ಜಪಾನ್ ಹೇಗೆ ತನ್ನ ಆಕ್ರಮಣಕಾರಿ ನೀತಿಯನ್ನು ಮುಂದುವರಿಸಿತು ಮತ್ತು ರಾಷ್ಟ್ರಗಳ ಒಕ್ಕೂಟ ಸಂಘದೊಂದಿಗೆ ಅದರ ಸಂಬಂಧಗಳ ಬಗ್ಗೆ

## 156.1 ಪೀಠಿಕೆ

ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಜಪಾನ್ ಪ್ರಮಾಣ ಪೂರ್ವಕವಾಗಿಯೇ ಆಕ್ರಮಣಕಾರಿ ನೀತಿಯನ್ನು ಅನುಸರಿಸಿದಂತೆ ಕಂಡುಬಂದಿತು. ಅದರ ವಿದೇಶಾಂಗ ನೀತಿಯನ್ನು ಸಾಂಪ್ರದಾಯಿಕ ಸಾಮ್ರಾಜಕ್ಕಿಂತಲೂ ಅಸಾಂಪ್ರದಾಯಿಕ ಸೈನಿಕ ವಿಸ್ತರಣೆಗಿಂತಲೂ ಆರ್ಥಿಕ ವಿಸ್ತರಣೆಯೊಂದಿಗೆ ಗುರುತಿಸಲಾಗಿದೆ. ಜಪಾನ್ ರಷ್ಯಾದೊಂದಿಗೆ ತನ್ನ ಸಂಬಂದಗಳನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಿತು. 1922ರ ಕೊನೆಯಲ್ಲಿ ಜಪಾನಿನ ಕಡೆಯ ಸೇನಾ ಪಡೆಗಳು ಸೈಬೀರಿಯಾದ ಮುಖ್ಯಭೂಮಿಯನ್ನು ತ್ಯಜಿಸಿದವು. ಜಪಾನ್ ಮತ್ತು ರಷ್ಯಾಗಳೆರಡರ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳು ಕ್ರಾಂತಿ ಮತ್ತು ಮಧ್ಯಪ್ರದೇಶಗಳಿಂದ ಉಂಟಾಗಿದ್ದ ಅರಾಜಿಕತೆಯನ್ನು ಕೊನೆಗೊಳಿಸುವುದನ್ನು ಬೇಡಿದವು. ಪರಿಣಾಮವಾಗಿ ಜನವರಿ 20, 1925ರಲ್ಲಿ ಎರಡು ದೇಶಗಳ ನಡುವೆ ಸಂಬಂಧಗಳನ್ನು ಪುನರ್ ಸ್ಥಾಪಿಸುವ ಒಂದು ಒಪ್ಪಂದಕ್ಕೆ ಸಹಿ ಬಿದ್ದಿತು.

1918-1931ರ ಅವದಿಮು ಚೀನಾ-ಜಪಾನ್ ವ್ಯವಹಾರಗಳು ಉತ್ತಮ ಭವಿಷ್ಯದಿಂದ ಕೂಡಿದ್ದಿತು. ಜಪಾನಿನ ವಿದೇಶಾಂಗ ನೀತಿಯು ಬೇರೆನ್ ಶಿದೆಹರಾ ಖಿಜಾರೋ ಎಂಬುವವನ ತತ್ವಜ್ಞಾನದಿಂದ ರಂಗು ಪಡೆದಿದ್ದಿತು. ಜಪಾನಿಗೆ ತನ್ನ ಹಣಕಾಸಿನ ಹಿತಾಸಕ್ತಿ ಗಮನಾರ್ಹವಾಗಿದ್ದಿ ಮತ್ತು ತನ್ನ ಜನರು ಅಧಿಕ ಸಂಖ್ಯೆಯಲ್ಲಿದ್ದ ಕ್ಷಾಂಟುಂಗ್ ಪ್ರದೇಶಕ್ಕೆ 1928ರಲ್ಲಿ ತನ್ನ ಪಡೆಗಳನ್ನು ಕಳುಹಿಸಿತು ಮತ್ತು ಸೇನಾ ಬಲಗಳನ್ನು ವಿಸ್ತರಿಸಲು ಹಾಗೂ ಚೀನಾ ಮತ್ತು ಪೆಸಿಫಿಕ್‌ಗಳಲ್ಲಿ ತನ್ನ ಪ್ರಾಬಲ್ಯವನ್ನು ಪ್ರದರ್ಶಿಸಲು ಅವಕಾಶವನ್ನು ಕಲ್ಪಿಸಿತು. ಈ ಯುದ್ಧದಿಂದ ಅವರ ಕೈಗಾರಿಕಾ ಉತ್ಪಾದನೆ ದ್ವಿಗುಣಗೊಂಡಿತು. 1914ಕ್ಕೆ ಮೊದಲು ಜಪಾನಿನ ಆರ್ಥಿಕ ವ್ಯವಸ್ಥೆ ದುರವಸ್ಥೆಯಲ್ಲಿತ್ತು (ಹೊರೆಯಿಂದ ತುಂಬಿತು). ಮೊದಲನೆ ಮಹಾಯುದ್ಧದ ಆರಂಭವು ಜಪಾನಿಗೆ ದೇವರೇ ಕಳುಹಿಸಿದ ವರದಂತಿದ್ದು ಜಪಾನಿನ ವಸ್ತುಗಳಿಗೆ ಬೆಲೆಯ ಬಗ್ಗೆ ತಕರಾರಿಲ್ಲದೆ ಮಿತ್ರ ರಾಷ್ಟ್ರಗಳಿಂದ ಅಪಾರ ಬೇಡಿಕೆಯ ಮಹಾಪೂರವೇ ಉಂಟಾಯಿತು, ಜಪಾನ್ ವಸ್ತುಗಳಿಗೆ ಬಾರಿಬೇಡಿಕೆಯಿದ್ದಿತು. ಪರಿಣಾಮವಾಗಿ ರಫ್ತು ಹೆಚ್ಚಿತು. ಜಪಾನ್ ಸಾಲಗಾರ ರಾಷ್ಟ್ರದ ಸ್ಥಾನದಿಂದ ಸಾಲಕೊರುವ ರಾಷ್ಟ್ರವಾಗಿ ಇದ್ದಕ್ಕಿದ್ದಂತೆ ಬದಲಾಯಿತು. ಅಲ್ಲದೆ ಜಪಾನ್ ರಾಷ್ಟ್ರಗಳ ಒಕ್ಕೂಟ ಸಂಘದ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವವನ್ನು ಪಡೆಯಿತು.

## 156.3 ವಾಷಿಂಗ್‌ಟನ್ ಸಮ್ಮೇಳನ - 1921-22

ಮೊದಲನೆ ಮಹಾಯುದ್ಧದ ಅಂತ್ಯವು ಪ್ರಪಂಚದಲ್ಲಿ ಪ್ರಬಲ ರಾಷ್ಟ್ರಗಳ ಸಂಬಂಧದಲ್ಲಿ ಬಾರೀ ಬದಲಾವಣೆಯನ್ನುಂಟು ಮಾಡಿತು. ಇಂಗ್ಲೆಂಡ್, ಅಮೆರಿಕಾ ಮತ್ತು ಜಪಾನ್‌ಗಳು ದೂರಪ್ರಾಚ್ಯದಲ್ಲಿ ಮೂರು ಪ್ರಬಲ ಶಕ್ತಿಗಳಾಗಿ ಉಳಿದುಕೊಂಡವು. ಯುದ್ಧದಲ್ಲಿ ಸೋತ್ ಜರ್ಮನಿ ತನ್ನ ಪೂರ್ವದ ಪ್ರದೇಶಗಳನ್ನು ಜಪಾನಿಗೆ ನೀಡುವ ಮೂಲಕ ಅವುಗಳನ್ನು ಕಳೆದೆಕೊಂಡಿತು. ಖಂಡಾಂತರ ರಾಜಕೀಯದಲ್ಲಿ ಸಂಪೂರ್ಣವಾಗಿ ಮುಳುಗಿ ಹೋಗಿದ್ದ ಫ್ರಾನ್ಸ್ ದೂರಪ್ರಾಚ್ಯದಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಲು ಸಾಧ್ಯವಾಗಲಿಲ್ಲ. ಕಮ್ಯುನಿಸ್ಟ್ ರಷ್ಯಾವು ಬಂಡವಾಳಶಾಹಿಗಳೊಂದಿಗೆ ವಿಷಯಸ್ಥಿತಿಯಲ್ಲಿದ್ದು ತನ್ನಲ್ಲಿ ರಕ್ಷಣೆ ಪುನರ್‌ಸಂಘಟನೆಯಲ್ಲಿ ಬಿಡುವಿಲ್ಲದಂತಾಗಿತ್ತು. ಚೀನಾ ಇನ್ನೂ ದುರ್ಬಲ ಮತ್ತು ಮಹತ್ವವಿಲ್ಲದ್ದಾಗಿದ್ದು ಆ ಭಾಗದ ರಾಜಕೀಯದ ಮೇಲೆ ಪ್ರಭಾವ ಬೀರುವ ಸಾಮರ್ಥ್ಯ ಅದಕ್ಕಿರಲಿಲ್ಲ. ಪ್ಯಾರಿಸ್ ಶಾಂತಿ ಸಮ್ಮೇಳನವು ದೂರಪ್ರಾಚ್ಯಕ್ಕೆ ಕೇವಲ ಮಧ್ಯಂತರವಾಗಿತ್ತು. ಅದು ದೂರ ಪ್ರಾಚ್ಯ ಮತ್ತು ಫೆಸಿಫಿಕ್ ಪ್ರದೇಶಗಳ ಪ್ರಮುಖ ಸಮಸ್ಯೆಗಳನ್ನು ಸಂಬಂಧಪಟ್ಟವರು ತೃಪ್ತಿಪಡುವಂತೆ ಬಗೆಹರಿಸಲಿಲ್ಲ. ಬಗೆಹರಿಯದ ವಲಸೆ ಸಮಸ್ಯೆಯಿಂದಾಗಿ ಜಪಾನ್ ಮತ್ತು ಅಮೆರಿಕಾಗಳ ನಡುವಿನ ಸಂಬಂಧಗಳು ಹೆಚ್ಚು ಹೆಚ್ಚು ಹದಗೆಡತೊಡಗಿದ್ದವು. ನೌಕಾಬಲವನ್ನು ಹೆಚ್ಚಿಸಿಕೊಳ್ಳಲು ನಡೆಯುತ್ತಿದ್ದ ಸ್ಪರ್ಧೆಯು ಪ್ರಮುಖ ಪೂರ್ವದ ರಾಷ್ಟ್ರಗಳ ನಡುವಿನ ಸಂಬಂಧವನ್ನು ಮತ್ತಷ್ಟು ಜಟಿಲಗೊಳಿಸಿತು.

**ಅಮೆರಿಕಾ - ಜಪಾನ್ ಹಗೆತನ**

ಪೂರ್ವದಲ್ಲಿ ಅಮೆರಿಕಾ ಮತ್ತು ಜಪಾನ್‌ಗಳ ನಡುವಿನ ಹಗೆತನವು ಶಾಂತಿಗೆ ತೀವ್ರ ದಕ್ಕೆಯುಂಟು ಮಾಡಿತು. ಅಮೆರಿಕಾವು ಜಪಾನಿನ ಚೀನಾದ ಪ್ರಾದೇಶಿಕ ಸಮಗ್ರತೆಯ ಉಲ್ಲಂಘನೆಯನ್ನು ವಿರೋಧಿಸಿತು ಮತ್ತು ಮುಕ್ತದ್ವಾರ ನೀತಿಯನ್ನು ಪ್ರತಿಪಾದಿಸಿತು. ಲಾನ್ಸಿಂಗ್ -ಇಶೀ ಒಪ್ಪಂದವು ಅಸ್ವಾಭಾವಿಕ ಸನ್ನಿವೇಶಗಳಲ್ಲಿ ಏರ್ಪಟ್ಟಿದ್ದಿತು. ಅದು ಅನಿಶ್ಚಿತವಾಗಿದ್ದು ಉಭಯ ಕಡೆಗಳೂ ತಮ್ಮ ಅನುಕೂಲೆ ಮತ್ತು ಹಿತಾಸಕ್ತಿಗೆ ತಕ್ಕಂತೆ ಅರ್ಥೈಸಿಕೊಂಡವು. ಅಮೆರಿಕಾ ಸರ್ಕಾರವು ಒಪ್ಪಂದವನ್ನು ಅತ್ಯಂತ ಧುರದೃಷ್ಟಕರ ಒಪ್ಪಂದವೆಂದು ಪರಿಗಣಿಸಿತು ಮತ್ತು ಯುದ್ಧದ ಮುಕ್ತಾಯದೊಂದಿಗೆ ಅದು ಕೊನೆಗೊಂಡಿತು. ಶಾಂತಿ ಆದರೂ ಮೇ 1928ರಲ್ಲಿ ಚೀನಾ-ಜಪಾನ್ ಒಪ್ಪಂದಕ್ಕೆ ಅನುಗುಣವಾಗಿ ಜಪಾನಿನ ಪಡೆಗಳನ್ನು ಕ್ಷಾಂಟುಂಗಿನ ರಾಜಧಾನಿ ಟ್ಸಿನಾನ್‌ನಿಂದ ಹಿಂತೆಗೆದುಕೊಳ್ಳಲಾಯಿತು. ಅದು ಪ್ರಜಾಪ್ರಭುತ್ವ ಮತ್ತು ಉಧಾರವಾದಗಳು ಜಯಗಳಿಸಿದ ಕಾಲದಂತೆ ಕಂಡುಬಂದಿತು. ಜಪಾನಿನಲ್ಲಿಯೇ ರಾಜಕೀಯ ಉಧಾರವಾದ ಕಾಣಿಸಿಕೊಂಡಿತು. ಚೀನಾದೊಂದಿಗೆ ಜಪಾನಿನ ಮೃದು ನೀತಿ ಆಂತರೀಕ ಲಾಭದೊಂದಿಗೆ ಸ್ಥಿರವಾಗಿದ್ದಿತು.

ರಾಷ್ಟ್ರಗಳ ಒಕ್ಕೂಟ ಸಂಘದ ಸದಸ್ಯನಾಗಿ ಜಪಾನ್ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿತು. ಜಪಾನಿನ ಅನೇಕ ಸಮರ್ಥ ಆಡಳಿತಗಾರರು, ನ್ಯಾಯವಾದಿಗಳು, ರಾಜತಾಂತ್ರಿಕರು ಮತ್ತು ಆರಕ್ಷಕರು ರಾಷ್ಟ್ರಗಳ ಒಕ್ಕೂಟ ಸಂಸ್ಥೆಯೊಂದಿಗೆ ಕೆಲಸ ಮಾಡಿದರು. ಅಂತರರಾಷ್ಟ್ರೀಯ ವ್ಯಾಜ್ಯಗಳ ಇತ್ಯಾರ್ಥ ಮತ್ತು ತೀರ್ಪಿನಲ್ಲಿಯೂ ಜಪಾನ್ ಸಕ್ರಿಯ ಪಾತ್ರ ವಹಿಸಿದ್ದಿತು.

ಹೀಗೆ 1922ರಿಂದ 1931ರ ವರೆಗೆ ಜಪಾನಿನ ವಿದೇಶಾಂಗ ನೀತಿಯು ಇತರ ವಿಶ್ವದ ಪ್ರಬಲ ರಾಷ್ಟ್ರಗಳೊಂದಿಗೆ ಹೊಲಿಸಿದಾಗ ಅನುಕೂಲಕರವಾಗಿದ್ದಿತು.

## 156.2 ವರ್ಸೇಲ್ಸ್ ಸಮ್ಮೇಳನದಲ್ಲಿ ಜಪಾನ್ (1919)

ವರ್ಸೇಲ್ಸ್ ಸಮ್ಮೇಳನದಲ್ಲಿ (1919) ಜಪಾನ್ ಪ್ರಮುಖ ಐದು ದೇಶಗಳಲ್ಲಿ ಒಂದರ ಸ್ಥಾನವನ್ನು ಪಡೆದಿದ್ದಿತು. ಅರ್ಧ ಶತಮಾನದಿಂದಲೂ ಅಂತರ ರಾಷ್ಟ್ರೀಯ ರಾಜಕೀಯದಲ್ಲಿ ತಾನು ಯಾವ ಸ್ಥಾನಕ್ಕಾಗಿ ಹೋರಾಡುತ್ತಿದ್ದಿತೋ ಆ ಸ್ಥಾನವನ್ನು ಅದು ಕಡೆಗೂ ಗಳಿಸಿತು. ಅದು 19ನೇ ಶತಮಾನದ ಮಧ್ಯಭಾಗದಲ್ಲಿ ವಿದೇಶೀ ಆಕ್ರಮಣದ ಹಾವಳಿಯಿಂದ ಅಸಹಾಯವಾದಂತೆ ಕಂಡು ಬರುತ್ತಿದ್ದ ಪುಟ್ಟ ಹಾಗೂ ದುರ್ಬಲ ದೇಶವಾಗಿ ಬಹಳ ಕಾಲ ಉಳಿಯಲಿಲ್ಲ. ಮಿಜಿ ಆಡಳಿತಗಾರರಿ ತಮ್ಮ ಕೆಲಸವನ್ನು ಉತ್ತಮವಾಗಿಯೇ ನಿರ್ವಹಿಸಿದ್ದರು.

ವರ್ಸೇಲ್ಸ್‌ನಲ್ಲಿ ಜಪಾನಿನ ಪ್ರತಿನಿಧಿಗಳು ತನ್ನ ನೇರ ಹಿತಾಸಕ್ತಿಯ ಸ್ಥಾನಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಮುಖ್ಯವಾಗಿ ಪೂರ್ವಏಷ್ಯಾ ಮತ್ತು ಪೆಸಿಫಿಕ್ ಪ್ರದೇಶದಲ್ಲಿ ಜಪಾನಿನ ಹಿತಾಸಕ್ತಿಗಳನ್ನು ಪಡೆದುಕೊಳ್ಳುವ ಹಾಗೂ ಜಪಾನಿನ ಸಮಾನಾಂತರ

ಸ್ಥಾನಮಾನದ ಬೇಡಿಕೆಗಳಿಗೆ ಸಮ್ಮೇಳನ ಕಿವುಡಾಯಿತು. ಆದರೆ ಅದಕ್ಕಿಂತಲೂ ಹೆಚ್ಚಿನ ಮಹತ್ವದ ಲಾಭಗಳನ್ನು ಜಪಾನಿಗೆ ನೀಡಲಾಯಿತು. ಶ್ಲಾಂಟುಂಗ್‌ನಲ್ಲಿ ಜರ್ಮನಿಯ ಆಸ್ತಿ ಪಾಸ್ತಿಗಳ ಮೇಲೆ ಒಡೆತನ, ಪೆಸಿಫಿಕ್ ಕನಲ್ಲಿ ಭೂಮಧ್ಯರೇಖೆಯ ಉತ್ತರಕ್ಕಿದ ಜರ್ಮನಿಯ ಹಳೆಯ ದ್ವೀಪ - ಮರಿನಾ, ಕರೋಲಿನ್ಸ್ ಮಾರ್ಷಲ್ ದ್ವೀಪ ಸಮುದಾಯದ ಮೇಲಿನ ಆಡಳಿತ ಉಸ್ತುವಾರಿಯ ಹಕ್ಕು (ಮ್ಯಾಂಡೇಟ್) ಎಮತ್ತು ರಾಷ್ಟ್ರಗಳ ಒಕ್ಕೂಟ ಸಂಘದ ಭದ್ರತಾ ಸಮಿತಿಯ ಐದು ಖಾಯಂ ಸದಸ್ಯ ಸ್ಥಾನಗಳಲ್ಲಿ ಒಂದು ಅವುಗಳಲ್ಲಿ ಸೇರಿದ್ದವು. ಹೀಗೆ ಏಷ್ಯಾಖಂಡ ಮತ್ತು ಪೆಸಿಫಿಕ್ ತೀರ ಪ್ರದೇಶದಲ್ಲಿ ಜಪಾನಿನ ಸ್ಥಾನವನ್ನು ಭದ್ರವಾಗಿ ಸ್ಥಾಪಿಸಲಾಯಿತು ಮತ್ತು ಕಡೇಪಕ್ಷ ಅಧಿಕೃತವಾಗಿ ಜಪಾನ್ ವಿಶ್ವದ ಪ್ರಬಲ ಶಕ್ತಿಗಳಲ್ಲೊಂದೆದು ಪರಿಗಣಿಸಲಾಯಿತು(ಗುರುತಿಸಲಾಯಿತು)

ಮೊದಲನೆ ಮಹಾಯುದ್ಧದಿಂದ ದೊರೆತ ಅವಕಾಶದಿಂದಲೇ ಜಪಾನನ್ನು ಹೊಸ ಸ್ಥಾನಕ್ಕೆರಿಸಿತು. ಯುದ್ಧವು ಜಪಾನಿಗೆ ತನ್ನ ಆರ್ಥಿಕ-ವ್ಯವಸ್ಥೆ ಸಮ್ಮೇಳನದಲ್ಲಿ ಜಪಾನಿನ ಆಕಾಂಕ್ಷೆಗಳು ಮತ್ತು ಬೇಡಿಕೆಗಳಿಗೆ ಅಮೆರಿಕಾದ ವಿರೋದವು ಪ್ರಬಲವಾಗಿತ್ತು. ಜಪಾನಿನ ತ್ವರಿತವಾದ ಪ್ರಾಬಲ್ಯದಿಂದ ಅಮೆರಿಕಾ ಅಸಮಧಾನಗೊಂಡಿತು. ಹವಾಯ್ ಮತ್ತು ಫಿಲಿಪ್ಪೀನ್ಸ್‌ಗಳ ಸ್ವಾಧೀನವು ಅಮೆರಿಕಾಕ್ಕೆ ಗಮನಾರ್ಹ ಪ್ರಾದೇಶಿಕ ನೆಲೆಯನ್ನು ಒದಗಿಸಿತು. ಈ ನೆಲೆಗಳಿಂದ ಅದು ಚೀನಾದ ವಿಶಾಲ ಮೂರು ಕಟ್ಟೆಯನ್ನು ಪ್ರವೇಶಿಸಲು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಸಾಧ್ಯವಾಯಿತು. ಅಮೆರಿಕಾದಲ್ಲಿದ್ದ ಜಪಾನಿನ ವಲಸಿಗರ ಮೇಲೆ ಅಮೆರಿಕಾ ವಿಧಿಸಿದ ನಿರ್ಬಂಧಗಳು ಮತ್ತಷ್ಟು ಕಹಿಯನ್ನುಂಟು ಮಾಡಿತು. ಜಪಾನಿನ ವಿಸ್ತರಣೆಗೆ ತಡೆಹಾಕಲು ಸಮ್ಮೇಳನವೊಂದನ್ನು ಕರೆಯುವುದು ಅತ್ಯಗತ್ಯವೆಂದು ಭಾವಿಸಿತು.

ವಾಷಿಂಗ್‌ಟನ್ ಸಮ್ಮೇಳನ

ವಾಷಿಂಗ್‌ಟನ್ ಸಮ್ಮೇಳನವು 1921ರ ಚಳಿಗಾಲದಲ್ಲಿ ಅಮೆರಿಕಾದ ವಾಷಿಂಗ್‌ಟನ್‌ನಲ್ಲಿ ನಡೆಯಿತು. ಬ್ರಿಟನ್, ಫ್ರಾನ್ಸ್, ಜಪಾನ್, ಚೀನಾ, ಬೆಲ್ಜಿಯಂ, ಇಟಲಿ, ನೆದರ್‌ಲ್ಯಾಂಡ್ಸ್, ಪೋರ್ಚುಗಲ್ ಮತ್ತು ಅಮೆರಿಕಾಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದವು. ಈ ಸಮ್ಮೇಳನವು ಜಪಾನ್ ಮತ್ತು ಅಮೆರಿಕಾಗಳ ನಡುವೆ ಮಾತ್ರವಲ್ಲದೆ ಜಪಾನ್ ಮತ್ತು ಚೀನಾಗಳ ನಡುವಿನ ತಿಕ್ಕಾಟಕ್ಕೂ ಕಾರಣವಾಗಿ ಅನೇಕ ಪ್ರಚಲಿತ ಕಾರಣಗಳನ್ನು ತಾತ್ಕಾಲಿಕವಾಗಿ ನಿವಾರಿಸಿತು. 1918ರಲ್ಲಿ ಘರ್ಷಣೆಗಳು ಕೊನೆಗೊಂಡ ನಂತರ ನೌಕಾ ಪೈಪೋಟಿ ಆರಂಭವಾಗಿದ್ದಿತು. ಅಮೆರಿಕಾ ತನ್ನ ನೌಕಾಬಲವು ಬ್ರಿಟನ್ನಿನ ನೌಕಾಬಲಕ್ಕೆ ಸಮಾನವಾಗಿರುವಂತೆ ಮಾಡುವ ಒಂದು ಕಾರ್ಯಕ್ರಮವನ್ನು ರೂಪಿಸಿತು. ಅಲ್ಲದೆ ಜಪಾನ್ ಸಹ 1915ರಿಂದಲೂ ಅಂತಹ ಒಂದು ಮಹತ್ವಾಕಾಂಕ್ಷೆಯ ಯೋಜನೆಯನ್ನು ಹೊಂದಿದ್ದಿತು.

ವಾಷಿಂಗ್‌ಟನ್ ಸಮ್ಮೇಳನದಲ್ಲಿ ಅಮೆರಿಕಾ ಪ್ರಮುಖ ನೌಕಾಗಳಲ್ಲಿ ಒಂದು ಪ್ರಮಾಣವನ್ನು ಏರ್ಪಡಿಸಲು ಪ್ರಸ್ತಾಪವನ್ನು ಮುಂದಿಟ್ಟಿತು. ಐದು:ಐದು:ಮೂರರ ಪ್ರಮಾಣವನ್ನು ನಿಗದಿಪಡಿಸಲಾಯಿತು. ಎಂದರೆ ಪ್ರಪಂಚದ ಮೂರು ಪ್ರಮುಖ ರಾಷ್ಟ್ರಗಳ ನೌಕೆಗಳ ಅನುಪಾತವು ಅಮೆರಿಕಾ ಮತ್ತು ಬ್ರಿಟನ್ನಿನ ಐದು ಮುಖ್ಯ ನೌಕೆಗಳು ಮತ್ತು ಜಪಾನಿನ ಮೂರು ಮುಖ್ಯ ನೌಕೆಗಳ ಪ್ರಮಾಣದಲ್ಲಿರಬೇಕಾಗಿತ್ತು. ಜಪಾನಿಯರು 10:10:7ರ ಪ್ರಮಾಣಕ್ಕೆ ಒತ್ತಾಯಿಸಿದರು. ಆದರೆ ಅಮೆರಿಕಾ ತನ್ನ ಪಶ್ಚಿಮ ಕರಾವಳಿ ಮತ್ತು ಹವಾಯ್ ದ್ವೀಪಗಳ ಹೊರತಾಗಿ ಅಮೆರಿಕಾ ಮತ್ತು ಬ್ರಿಟನ್‌ಗಳ ಪೆಸಿಫಿಕ್ ಪ್ರದೇಶದಲ್ಲಿನ ಸ್ಥಳಗಳನ್ನು ಕೋಟೆಗಳಿಂದ ಭದ್ರಪಡಿಸುವುದಿಲ್ಲವೆಂಬ ಭರವಸೆಯನ್ನು ನೀಡಿದ್ದರಿಂದ ಜಪಾನ್ ತನ್ನ ಒತ್ತಾಯವನ್ನು ಕೈಬಿಟ್ಟಿತು. ಅಮೆರಿಕಾ ಮತ್ತು ಬ್ರಿಟನ್‌ಗಳ ಕಡೆಯಿಂದ ಈ ಪ್ರತಿಜ್ಞೆಯು ಅವುಗಳಲ್ಲಿ ಯಾವುದಾದರೊಂದು ಒಂಟಿಯಾಗಿ ಜಪಾನಿನ ಮೇಲೆ ದಾಳಿ ಮಾಡುವ ಸಾಧ್ಯತೆಯನ್ನು ಇಲ್ಲದಂತೆ ಮಾಡಿತು. ಹೀಗೆ ಜಪಾನ್ ತನ್ನ ನೌಕಾಪಡೆಯ ಉನ್ನತ ಹುದ್ದೆಯ ಅಧಿಕಾರಿಗಳ ವಿರೋಧವಿದ್ದಾಗ್ಯೂ 5:5:3:ರ ಪ್ರಮಾಣವನ್ನು ಒಪ್ಪಿಕೊಂಡಿತು. ಚೀನಾದೊಂದಿಗೆ ಮಾಡಿಕೊಂಡ ಪ್ರತ್ಯೇಕ ಒಪ್ಪಂದದಿಂದ ಅವುಗಳ ಷರತ್ತುಗಳನ್ನು ವಾಷಿಂಗ್‌ಟನ್‌ನಲ್ಲಿಯೇ ರೂಪಿಸಲಾಗಿದ್ದು, ಜಪಾನ್ ಪ್ರಾಯೋಗಿಕವಾಗಿ ತನ್ನ ಆರ್ಥಿಕ ಪ್ರಾಬಲ್ಯವನ್ನು ಉಳಿಸಿಕೊಂಡು ಶ್ಲಾಂಟುಂಗ್ ಪ್ರಾಂತವನ್ನು ಚೀನಾಕ್ಕೆ ಹಿಂದಿರುಗಿಸಿತು. ಈ ಒಪ್ಪಂದವು ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದವನ್ನು ಕೊನೆಗೊಳಿಸಿತು.

ವಾಷಿಂಗ್‌ಟನ್ ಸಮ್ಮೇಳಲದ ಮುಖ್ಯ ಉದ್ಧೇಶಗಳೆಂದರೆ

1 ಪ್ರಮುಖ ರಾಷ್ಟ್ರಗಳ ನೌಕಾ ವ್ಯವಸ್ಥೆಯ ಮಿತಿಯ ಬಗ್ಗೆ ಒಂದು ಒಪ್ಪಂದಕ್ಕೆ ಬರುವುದು.2 ಭವಿಷ್ಯದಲ್ಲಿ ಯುದ್ಧಕ್ಕೆ ಕಾರಣಗಳು ಇಲ್ಲದಂತೆ ಮಾಡುವ ರೀತಿಯಲ್ಲಿ ಪೂರ್ವಏಷ್ಯಾದ ಸಮಸ್ಯೆಗಳನ್ನು ಪರಿಗಣಿಸುವುದು ಮತ್ತು ಬಗೆಹರಿಸುವುದು.

ವಾಷಿಂಗ್‌ಟನ್ ಸಮ್ಮೇಳನವು ಏರ್ಪಡಿಸಿದ ಸಂತೋದಾಯಕ ಸಂಬಂಧಗಳು ಬಹಳ ಕಾಲ ಉಳಿಯಲಿಲ್ಲ. ಈ ಸಮ್ಮೇಳನದ ಪರಿಣಾಮವಾಗಿ ಪೆಸಿಫಿಕ್ ಪ್ರದೇಶದಲ್ಲಿ ಯುದ್ಧ ಸಾಧ್ಯತೆಗಳು ಬಹುಮಟ್ಟಿಗೆ ಕಡಿಮೆಯಾದವು. ಆದರೆ ಜಪಾನಿನ ನೌಕಾಬಲ ಪರಿಣತರ ಅಭಿಪ್ರಾಯದಲ್ಲಿ ನೌಕಾ ಪ್ರಮಾಣವನ್ನು ಸ್ವೀಕರಿಸಿ ದಿನದಿಂದಲೇ ಯುದ್ಧ ಪ್ರಾರಂಭವಾಯಿತು. ವಾಷಿಂಗ್‌ಟನ್ ಸಮ್ಮೇಳನವು ನ್ಯಾಯಸಮ್ಮತ ವಿಧಾನಗಳ ಮೂಲಕ ಜಪಾನ್ ಗಳಿಸುದುದನ್ನು ಕಸಿದುಕೊಂಡಿತೆಂಬುದು ವ್ಯಾಪಕವಾದ ನಂಬಿಕೆಯಾಗಿತು. ಆದ್ದರಿಂದ ಅಮೆರಿಕಾದ ವಿರುದ್ಧ ಜಪಾನ್ ಹಗೆತನವನ್ನು ಸಾಧಿಸುವುದನ್ನು ಮುಂದುವರಿಸಿತು.

## 156.4 ಮಂಚುಕೊ ಸ್ಥಾಪನೆ.

ಚೀನಾದಲ್ಲಿ ಅಂತರ್ಯುದ್ಧ ತೀವ್ರವಾಗುತ್ತಿರುವಂತೆಯೇ ಪರಿಸ್ಥಿತಿಯನ್ನು ಮಂಚೂರಿಯಾದ ಶಾಂತಿಯುತ ಶೋಷಣೆಗೆ ಬಳಸಿಕೊಳ್ಳಲಾಗಿದ್ದಿತು. 1928ರಲ್ಲಿ ಯುದ್ಧದ ದೊರೆ ಚಾಂಗನನ್ನು ಜಪಾನೀ ಸೈನ್ಯ ಕೊಲೆ ಮಾಡಿತು. 'ದಿ ಯಂಗ್ ಮಾರ್ಷಲ್' ಎಂದು ಕರೆಯಲಾಗಿದ್ದ ಚಾಂಗನ ಮಗ ಪ್ರಬಲ ಜಪಾನಿನ ವಿರೋಧಿಯಾದನು. 1929ರಲ್ಲಿ ಅವನು ಚಿಯಾಂಗ್ ಕೈಶೆಕ್‌ನೊಂದಿಗೆ ಸೇರಿಕೊಂಡನು ಮತ್ತು ಅದರೊಂದಿಗೆ ಚೀನಿಯರು ಜಪಾನಿನಿಂದ ಮಂಚೂರಿಯಾವನ್ನು ಬಿಡುಗಡೆಗೊಳಿಸುವ ಕಾರ್ಯದಲ್ಲಿ ನಿರತರಾದರು.

ಚೀನಾ ಮತ್ತು ಜಪಾನ್‌ಗಳ ನಡುವಿನ ಸಂಬಂದಗಳ ಕ್ಷೀಣಿಸತೊಡಗಿದ್ದವು. ಜಪಾನ್ ಮತ್ತು ಚೀನಾದ ಸೈನಿಕ ಅಧಿಕಾರಿಗಳು ಒಬ್ಬರನ್ನೊಬ್ಬರು ಬೀದಿಗಳಲ್ಲಿ ಬಹಿರಂಗವಾಗಿ ಅವಹೇಳನ ಮಾಡತೊಡಗಿದರು ಮತ್ತು ಉದ್ವಿಘ್ನತೆ ಹೆಚ್ಚುತ್ತಿದ್ದಿತು. ಇದೇ ಸಮಯದಲ್ಲಿ ಘಟನೆಯೊಂದು ಜರುಗಿತು. ಪಶ್ಚಿಮ ಮಂಚೂರಿಯಾದ ಪ್ರವಾಸದಲ್ಲಿದ್ದ ನಕುಮಾರ ಎಂಬ ಜಪಾನಿನ ಕೃಷಿ ಪರಿಣತನನ್ನು ಗೂಢಚಾರನೆಂದು ಭಾವಿಸಿ ಚೀನಿಯರು ಗುಂಡಿಕ್ಕಿ ಕೊಂದರು. ತಕ್ಷಣವೇ ಜಪಾನಿನ ಅಧಿಕಾರಿಗಳು ಕ್ರಮಕ್ಕೆ ಆಗ್ರಸಿದರು. ಕೆಲವೇ ವಾರಗಳಲ್ಲಿ ಮಂಚೂರಿಯಾಕ್ಕೆ ತಮ್ಮ ಪಡೆಗಳನ್ನು ಕಳುಹಿಸಿ ಮುಕ್‌ದೇನ್ ಸಮೀಪದ ದಕ್ಷಿಣ ಮಂಚೂರಿಯಾ ರೈಲುಮಾರ್ಗಗಳನ್ನು ಸ್ಫೋಟಗೊಳಿಸಿದರು ಮತ್ತು ಮಂಚೂರಿಯಾವನ್ನು ಆಕ್ರಮಿಸಿಕೊಂಡರು. 1932ರ ವಸಂತಕಾಲದಲ್ಲಿ ಜಪಾನಿಯರು ಮಂಚೂರಿಯಾದ ಸ್ವಾತಂತ್ರವನ್ನು ಘೋಷಿಸಿ ಮಂಚುಕೊ ಎಂದು ಕರೆಯಲಾದ ಹೊಸ ಸರ್ಕಾರವನ್ನು ಸ್ಥಾಪಿಸಿದರು. ಕಡೆಯ ಮಂಚೂ ದೊರೆ ಹೆನ್ರಿ ಪು-ಯಿ ಯನ್ನು ಸಿಂಹಾಸನದ ಮೇಲೆ ಕೂರಿಸಲಾಯಿತು. 1934ರಲ್ಲಿ ಈ ಹೊಸ ರಾಜ್ಯವು ಸಾಮ್ರಾಜ್ಯವೆಂಬ ಬಿರುದನ್ನು ಪಡೆಯಿತು. ಜಪಾನಿನ ಸಲಹೆಗಾರರೊಂದಿಗೆ ನಿಕಟ ಹೊಂದಾಣಿಕೆ ಮಾಡಿಕೊಂಡು ಮಂಚೂರಿಯಾದ ಆಡಳಿತದಲ್ಲಿ ಅವರು ಪ್ರಮುಖವಾದರು.

ಮಂಚೂರಿಯಾ ನಷ್ಟವಾದುದನ್ನು ಚೀನಾ ತಕ್ಷಣವೇ ಒಪ್ಪಿಕೊಳ್ಳಲಿಲ್ಲ. ಅದು ತನ್ನ ಸಮಸ್ಯೆಯನ್ನು ರಾಷ್ಟ್ರಗಳ ಒಕ್ಕೂಟ ಸಂಸ್ಥೆಗೆ ಕೊಂಡೊಯ್ದಿತು. ರಾಷ್ಟ್ರಗಳ ಒಕ್ಕೂಟ ಸಂಘವು ಜಪಾನಿನ ಆಕ್ರಮಣವನ್ನು ಖಂಡಿಸಿತು ಮತ್ತು ಮಂಚೂರಿಯಾವನ್ನು ಚೀನಾಕ್ಕೆ ಬಿಟ್ಟುಕೊಡುವಂತೆ ಶಿಫಾರಸು ಮಾಡಿತು. ಇದನ್ನು ಪ್ರತಿಭಟಿಸಿ ಜಪಾನ್ ತಾನು ಹೆಮ್ಮೆಯಿಂದ ಸೇರಿದ್ದ ರಾಷ್ಟ್ರಗಳ ಒಕ್ಕೂಟ ಸಂಘದಿಂದ ತಕ್ಷಣವೇ ಹೊರಬಂದಿತು. ಅಂತರರಾಷ್ಟ್ರೀಯತೆಯ ಕೋಟೆಯ ಮೊದಲು ಉಲ್ಲಂಘನೆ ಇದಾಗಿದ್ದಿತು. ಜಪಾನ್ ಆರಂಭಿಸಿದ ಆಟವನ್ನು ನಾಜಿ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಗಳ ರಾಷ್ಟ್ರಗಳ ಒಕ್ಕೂಟ ಸಂಸ್ಥೆಯೊಂದಿಗೆ ವ್ಯವಹರಿಸುವಲ್ಲಿ ಮುಂದೆ ಜಪಾನಿನ್ನ ಉದಾಹರಣೆಯನ್ನು ಅನುಸರಿಸಲಿದ್ದವು., 1935ರಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಜಪಾನ್ ವಾಷಿಂಗ್‌ಟನ್ ಒಪ್ಪಂದದ 5:5:3ರ ನೌಕಾ ಪ್ರಮಾಣದ ಷರತ್ತನ್ನು ಮುರಿದು ತನ್ನ ನೌಕಾಬಲವನ್ನು ಹೆಚ್ಚಿಸಿಕೊಳ್ಳಲು ಪ್ರಾರಂಭಿಸಿತು

## 156.5 ಜರ್ಮನಿ ಮತ್ತು ರಷ್ಯಾಗಳೊಂದಿಗೆ ಜಪಾನಿನ ಸಂಬಂಧ

### ಜರ್ಮನಿಯೊಂದಿಗೆ ಜಪಾನಿನ ಸಂಬಂಧ

ಹೊರ ಮಂಗೋಲಿಯಾದ ವಿಷಯದಲ್ಲಿ ರಷ್ಯಾದೊಂದಿಗೆ ಜಪಾನಿನ ಸಂಬಂಧಗಳು ಹದಗೆಟ್ಟುವು ಮತ್ತು 1930ರ ನೌಕಾ ಒಪ್ಪಂದಗಳ ರದ್ದತಿಯು ಜಪಾನ್ ಮತ್ತು ಇಂಗ್ಲೆಂಡ್ ಹಾಗೂ ಅಮೆರಿಕಾಗಳ ನಡುವೆ ಬಿರುಕನ್ನು ಹೆಚ್ಚಿಸಿದವು. ಹೆಚ್ಚಾಗುತ್ತಿದ್ದ ಏಕಾಂಗಿತನ ಮತ್ತು ರಾಜಕೀಯ ಮಿತ್ರನಿಗಾಗಿ ಶೋಧನೆಗಳು ಜಪಾನನ್ನು ಜರ್ಮನಿಗೆ ಹತ್ತಿರವಾಗುವಂತೆ ಮಾಡಿದವು ಮತ್ತು 1936ರಲ್ಲಿ ಅದು ನಾಜಿ ಜರ್ಮನಿಯೊಂದಿಗೆ ಆಕ್ರಮಣ ವಿಕೋ ಒಪ್ಪಂದಕ್ಕೆ (Anti- Comintern pact) ಸಹಿಹಾಕಿತು. ಈ ಒಪ್ಪಂದದಿಂದ

ಅವು ಸಮತಾವಾದ ಸಿದ್ಧಾಂತವನ್ನು ಹತ್ತಿಕ್ಕಲು ಒಪ್ಪಿದವು. ಇಡಲಿಯಾ ಈ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ (ನವಂಬರ್,1937)ಅದನ್ನು ಆಕ್ರಮಣಕಾರಿ ಚಟುವಟಿಕೆಗಳ ವಿರುದ್ಧ ತ್ರಿಪಕ್ಷೀಯ ಒಪ್ಪಂದವನ್ನಾಗಿ ಮಾರ್ಪಡಿಸಿದವು. ಆಕ್ರಮಣ ವಿರೋಧಿ ಒಪ್ಪಂದವು ರೋಮ್-ಬರ್ಲಿನ್-ಟೋಕಿಯೋ ಶತ್ರುಕೂಟಕ್ಕೆ ದಾರಿ ಮಾಡಿಕೊಟ್ಟಿತು.

ಜಪಾನಿನ ಹಿಟ್ಲರನ ಏಳಿಗೆಗೆ ಮೊದಲು ಜರ್ಮನಿನ್ನಸಂಬಂಧಗಳಲ್ಲಿ ಒಂದು ಗುರಿಯಿರಲಿಲ್ಲ. ವಾಸ್ತವವಾಗಿ ಕೈಸರನ ಜರ್ಮನಿಯು ಜಪಾನನ್ನು ಶಿಕ್ಷೆಗೆ ಗುರಿಪಡಿಸಿದ್ದಿತು. ಮತ್ತು ಬಿಳಿಯರ ದೇಶಗಳನ್ನು 'ಅಪವಿತ್ರಬುದ್ಧ' ಮತ್ತು ಹಳದಿ ಅನಿಷ್ಟವನ್ನು ಸೋಲಿಸುವಂತೆ ಕರೆನೀಡಿತು. ಯೂದ್ಧೋತ್ತರ ಚಿತ್ರಣವು ಜರ್ಮನಿ- ಜಪಾನ್ ಸಂಬಂಧಗಳನ್ನು ಬದಲಾಯಿಸಿತು. 1935ರಲ್ಲಿ ಪೂರ್ವದ ದೇಶಗಳೊಂದಿಗೆ ಸಂಬಂಧಗಳನ್ನು ಬೆಸೆಯಲಾಯಿತು. ಏಪ್ರಿಲ್, 1935ರಲ್ಲಿ ಬರ್ಲಿನ್ ಮಂಚುಕೋ ಸರ್ಕಾರದೊಂದಿಗೆ ಒಂದು ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಿತು. ಜಪಾನಿನ ಸೈನೆ ಮತ್ತು ನೌಕಾ ನಿಯೋಗಗಳು ಜರ್ಮನಿಗೆ ಬೇಟಿ ನೀಡಿದವು. ಜರ್ಮನಿಯು ನೌಕೆಗಳು ಮತ್ತು ಪರಂಗಿ ದಳಗಳಿಗೆ ದೂರವನ್ನು ನಿರ್ಧರಿಸುವ ಯಂತ್ರಗಳನ್ನು ತಯಾರಿಸುವ ಕಾರ್ಖಾನೆಯನ್ನು ಟೋಕಿಯೋದಲ್ಲಿ ಸ್ಥಾಪಿಸಿತು. ಎರಡೂ ದೇಶಗಳ ನಡುವೆ ಆರ್ಥಿಕ ಮತ್ತು ಸೈನಿಕ ಸಹಕಾರಗಳು ರಾಜಕೀಯ ಸೌಹಾರ್ದತೆಗೆ ಪೀಠಿಕೆಯಾಗಿದ್ದವು. ಈ ಮೇಲೆ ಉಲ್ಲೇಖಿಸಿದ ಆಕ್ರಮಣ ವಿರೋಧಿ ಒಡಂಬಡಿಕೆಯು ಈ ಸಹಕಾರದ ಫಲವಾಗಿದ್ದಿತು. ಒಡಂಬಡಿಕೆಯು ಬಾಲ್ಶೆವಿಕ್ ಹಾವಳಿಯ ವಿರುದ್ಧವಾಗಿತ್ತು ಮತ್ತು ಎಲ್ಲಾ ಕಮುನಿಸ್ಟ್ ಪ್ರಯತ್ನಗಳನ್ನು ತಡೆಗಟ್ಟಲು ಸಹಕಾರವನ್ನು ಏರ್ಪಡಿಸಿತು. ಇಂಗ್ಲೆಂಡನ್ನು ಬೇರ್ಪಡಿಸುವ ಉದ್ದೇಶ ಅದಕ್ಕಿರಲಿಲ್ಲ ಎಂಬುದಾಗಿ ಸಾಮಾನ್ಯ ವಿದೇಶಾಂಗ ಕಚೇರಿ ಭರವಸೆ ನೀಡಿತು.

ಈ ಒಡಂಬಡಿಕೆಯನ್ನು ಮಿಶ್ರ ಭಾವನೆಗಳಿಂದ ಸ್ವೀಕರಿಸಲಾಯಿತು. ಸೆಪ್ಟಂಬರ್, 27, 1940ರಂದು ಜರ್ಮನಿ, ಇಟಲಿ ಮತ್ತು ಜಪ್ಪಾನ್‌ಗಳು ಪ್ರಜಾಪ್ರಭುತ್ವ ರಾಷ್ಟ್ರಗಳ ವಿರುದ್ಧ ಏಕದಳ ರಾಜ್ಯಗಳ ಗುಂಪನ್ನು ಪ್ರವೇಶಿಸಿದಾಗ ಪ್ರಕರಣವು ಅಂತಿಮವಾಗಿ ಸ್ಪಷ್ಟವಾಯಿತು. ಜಪಾನಿನ ವಿದೇಶಾಂಗ ಸಚಿವ ಮತ್ತುವೋಕನು ಒಡಂಬಡಿಕೆಗೆ ಅಮೇರಿಕಾದ ದ್ವೇಷ ಪ್ರತಿಕ್ರಿಯೆಗೆ ಶೋಕವನ್ನು ವ್ಯಕ್ತಪಡಿಸಿದನು ಮತ್ತು ಬೃಹತ್ 'ಹೊಸ ವ್ಯವಸ್ಥೆ' ಯನ್ನು ರೂಪಿಸಲು ಶತ್ರು ರಾಷ್ಟ್ರಗಳ ಕೂಟವನ್ನು ಸೇರುವಂತೆ ವಾಷಿಂಗ್‌ಟನ್‌ಗೆ ಆಹ್ವಾನವನ್ನು ನೀಡಿದರು. ಈ ಹೊಸ ವ್ಯವಸ್ಥೆಯನ್ನು ಜಪಾನ್, ಜರ್ಮನಿ, ಇಟಲಿ ಮತ್ತು ಅಮೇರಿಕಾಗಳ ಹತೋಟಿಯಲ್ಲಿ ನಾಲ್ಕು ವಲಯಗಳಾಗಿ ವಿಗಂಡಿಸಲು ಸಲಹೆ ಮಾಡಲಾಯಿತು.

ರಷ್ಯಾದೊಂದಿಗೆ ಜಪಾನಿನ ಸಂಬಂಧ

ಬಾಲ್ಶೆವಿಕ್ ರಷ್ಯಾದ ಏಳಿಗೆಯ ಕಾಲದಿಂದಲೂ ರಷ್ಯಾದೊಂದಿಗೆ ಜಪಾನಿನ ಸಂಬಂಧಗಳು ಎಂದಿಗೂ ಮಧುರವಾಗಿರಲಿಲ್ಲ. ವರ್ಷಗಳುರುಳಿದಂತೆ ಸರಿಯಾಗಿ ಗುರಿತಿಸಿದ ಗಡಿಗಳ ವಿವಾದದ ಬಗ್ಗೆ ವ್ಯಾಜ್ಯ ಮತ್ತು ಮೀನುಗಾರಿಕೆಯ ಹಕ್ಕುಗಳು ಅಥವಾ ಇತರ ಸಣ್ಣಪುಟ್ಟ ಕಿರಿಕಿರಿಗಳು ಎರಡೂ ದೇಶಗಳನ್ನು ದೂರ ಮಾಡಿದ್ದವು. ಆದಾಗ್ಯೂ ಜಪಾನ್ 1923ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಮಾನ್ಯತೆ ನೀಡಿತಾದರೂ, ಅದೇ ವರ್ಷ ಜಪಾನಿನ ಕಮ್ಯುನಿಸ್ಟ್ ಪಕ್ಷವನ್ನು ಹತ್ತಿಕ್ಕಲಾಯಿತು. ಮತ್ತು ಸೋವಿಯತ್‌ನ ಕಾರ್ಮಿಕ ನಿಯೋಗಗಳಿಗೆ ಟೋಕಿಯೋದ ಪ್ರವೇಶವನ್ನು ನಿರಾಕರಿಸಲಾಯಿತು. ಜಪಾನಿನ ಸರ್ಕಾರವು ರಷ್ಯಾದ ಪ್ರತಿನಿಧಿಗಳು ತನ್ನ ಸಾಮ್ರಾಜ್ಯದಲ್ಲಿ ಅಧಿಕೃತ ಕೆಲಸಕಾರ್ಯಗಳಲ್ಲಿ ಮಾತ್ರವೇ ತೊಡಗಿರಬೇಕೆಂದು ಸ್ಪಷ್ಟಪಡಿಸಿತು. 1931ರ ಮಂಚೂರಿಯಾದ ಬಿಕ್ಕಟ್ಟಿನ ಸಮಯದಲ್ಲಿ ಸೋವಿಯತ್‌ಒಕ್ಕೂಟವು ತಟಸ್ಥವಾಗಿ ಉಳಿಯಿತು. ಎರಡು ವರ್ಷಗಳ ಶಾಂತಿಯ ನಂತರ ಪತ್ರಿಕೆಗಳು ಮತ್ತು ರಾಜತಾಂತ್ರಿಕರು ಉತ್ತರ ಮಂಚೂರಿಯಾದ ರೈಲ್ವೇ ಕಂಪನಿಯ ಆರು ಸೋವಿಯತ್ ನೌಕರರನ್ನು ಜಪಾನಿಯರು ಬಂಧಿಸಿದಾಗ ಹಗೆತನವನ್ನುಪ್ರದರ್ಶಿಸಿದವು. ಆದಾಗ್ಯೂ ಈ ಮೊದಲು ಮಾಸ್ಕೋದಲ್ಲಿ ರಾಯಭಾರಿಯಾಗಿ ಸೇವೆ ಸಲ್ಲಿಲಿದ್ದ ಜಪಾನಿನ ವಿದೇಶಾಂಗ ಸಚಿವ ಹಿರೊಹಿಟೊ ರಷ್ಯಾ ಒಡೆತನದ ಉತ್ತರ ಮಂಚೂರಿಯಾ ರೈಲು ಮಾರ್ಗವನ್ನು ಜಪಾನಿಗೆ 170,000,000 ಯೆನ್‌ಗಳಿಗೆ ಮಾರಾಟ ಮಾಡಿರುವ ಮೂಲಕ ಉದ್ವಿಗ್ನತೆಯನ್ನು ತೊಡೆದುಹಾಕಿದನು. ಇದು ಉದ್ವಿಘ್ನತೆಯನ್ನು ಕಡಿಮೆ ಮಾಡಿತಾದರೂ ಅನೇಕ ಬಗೆಹರಿಯದ ಸಮಸ್ಯೆಗಳು ಅವುಗಳ ಸಂಬಂಧಗಳನ್ನು ಕಾರುವುದನ್ನು ಮುಂದುವರಿಯುವಂತೆ ಮಾಡಿದವು. ಎರಡು ಗಂಭೀರ ಗಡಿಗಳ ಘರ್ಷಣೆಗಳು, ಒಂದು 1938ರಲ್ಲಿ ಸೈಬೀರಿಯಾದ ಮಂಚುಕೋವನ್ ಗಡಿಯ ಪಕ್ಕದ ಚಾಂಗ್‌ಕುಫೆಂಗ್ ಬೆಟ್ಟದಲ್ಲಿ ಮತ್ತು ಎರಡನೆಯದು 1939ರಲ್ಲಿ ಮಂಗೋಲಿಯ-ಸೈಬೀರಿಯಾ ಗಡಿಯ ಗುಂಟ ನೊಮೂನ್‌ಹನ್‌ನಲ್ಲಿ, ತನ್ನ ಪೂರ್ವದ ಒಡೆತನಗಳನ್ನು ಭದ್ರವಾಗಿ ಉಳಿಸಿಕೊಳ್ಳು ರಷ್ಯಾದ ನಿರ್ಧಾರವನ್ನು ಸ್ಪಷ್ಟಪಡಿಸಿದವು. ಸೋವಿಯತ್- ಜರ್ಮನ್ ಅನಾಕ್ರಮಣ ಒಡಂಬಡಿಕೆಯು ರಷ್ಯಾ-ಜಪಾನ್ ಸಂಬಂದಗಳ

ಮೇಲೆ ಪ್ರಭಾವ ಬೀರಿದವು. ಏಪ್ರಿಲ್ 13, 1941ರಂದು ಎರಡೂ ದೇಶಗಳು ಐದು ವರ್ಷಗಳ ತಟಸ್ಥತತೆಯ ಒಡಂಬಡಿಕೆಗೆ ಸಹಿಹಾಕಿದವು. ಈ ಒಡಂಬಡಿಕೆಯು ಮಂಚುಕೋ ಮತ್ತು ಅದರ ಪ್ರಾದೇಶಿಕ ಸಮಗ್ರತೆಗೆ ರಷ್ಯಾದ ಮಾನ್ಯತೆಯನ್ನು ದೊರಕಿಸಿಕೊಟ್ಟರೆ ಜಪಾನ್ ಹೊರ ಮಂಗೋಲಿಯದ ಜನರಾ ಗಣರಾಜ್ಯದಲ್ಲಿ ಸೋವಿಯ ಒಕ್ಕೂಟದ ಸ್ಥಾನವನ್ನು ಗೌರವಿಸುವ ಭರವಸೆಯನ್ನು ನೀಡಿತು. ಈ ಒಡಂಬಡಿಕೆಯು ಜಪಾನ್ ಇಂಗ್ಲೆಂಡ್ ಅಥವಾ ಅಮೆರಿಕಾದೊಂದಿಗೆ ಯುದ್ಧದಲ್ಲಿ ತೊಡಗಿದ್ದಾಗ ರಷ್ಯಾದ ಮಧ್ಯಪ್ರವೇಶದ ಉದ್ವಿಗ್ನತೆ ಮತ್ತು ಭಯದಿಂದ ಮುಕ್ತವಾಯಿತು.

## 156.6 ಎರಡನೇ ಚೀನಾ-ಜಪಾನ್ ಯುದ್ಧ

1936ರ ವರ್ಷದಾದ್ಯಂತ ಜಪಾನ್ ಹಿರೋಟ ಸಂಪುಟದ ಕಾರ್ಯಕ್ರಮವನ್ನು ಒಪ್ಪಿಕೊಳ್ಳವಂತೆ ನಾನ್‌ಕಿಂಗ್ ಸರ್ಕಾರದ ಮನವೊಲಿಸಲು ಮತ್ತೆ ಮತ್ತೆ ಪ್ರಯತ್ನಿಸಿತು. ಆದರೆ ಅದರ ಎಲ್ಲಾ ಪ್ರಯತ್ನಗಳು ವಿಫಲವಾದವು. ಈ ಕಾಲದಲ್ಲಿ ಚೀನಾದಲ್ಲಿ ರಾಷ್ಟ್ರೀಯ ಭಾವನೆಗಳು ಉತ್ತರದಲ್ಲಿ ಜಪಾನಿನ ಆಕ್ರಮಣದ ವಿರುದ್ಧ ಅತ್ಯಂತ ತೀವ್ರವಾಗಿದ್ದವು. ಚೀನಾದ ದೇಶಭಕ್ತರು ತಮ್ಮ ನೈರುತ್ಯ ಪ್ರಾಂತಗಳಲ್ಲಿ ಜಪಾನಿನ ಸಾಮ್ರಾಜ್ಯಷಾಹಿ ಧೋರಣೆಯನ್ನು ಸಹಿಸದಾದವು.

ಮಂಚೂರಿಯಾದಲ್ಲಿ, ಮಂಚುಕೋ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿದ ನಂತರ ಜಪಾನ್ ಚೀನಾದಲ್ಲಿ ವಿಸ್ತರಣೆಯ ನೀತಿಯನ್ನು ಅನುಸರಿಸಲು ಪ್ರಯತ್ನಿಸಿತು. ತಾನು ಗಳಿಸಿದುದರಿಂದಲೇ ತೃಪ್ತವಾಗದ ಜಪಾನ್ ಚೀನಾದ ಕಡೆಗೆ ವಿಸ್ತರಣಾ ನೀತಿಯನ್ನು ಮತ್ತಷ್ಟು ಮುಂದುವರಿಸಲು ಬಯಸಿತು.

ಜನವರಿ, 1933ರಲ್ಲಿ ಜಪಾನಿಯರು ಚೀನಾದ ವಿರುದ್ಧ ಸೈನಿಕ ಕಾರ್ಯಚರಣೆಗಳನ್ನು ಪುನರಾರಂಭಿಸಿದರು. ಅವರು ಒಳ ಮಂಗೋಲಿಯಾದಜೆ ಹೋಲನ್ನು ಅದು ಮಂಚುಕೋ ಪ್ರಾಂತದ ಭಾಗವೆಂಬ ಆಧಾರದ ಮೇಲೆ ಆಕ್ರಮಿಸಿಕೊಂಡರು. ಅವರು ಉತ್ತರ ಚೀನಾದ ಹೋಪೀ ಪ್ರಾಂತವನ್ನು ಪ್ರವೇಶಿಸಲು ಪ್ರಯತ್ನಿಸಿದರು. ಆದರೆ ಅಲ್ಲಿ ಚೀನಾದ ಪಡೆಗಳು ಪ್ರಬಲವಾದ ಪ್ರತಿಭಟನೆಯನ್ನು ನೀಡಿದವು. ಟ್ಯಾಂಗ್‌ನು ಶಾಂತಿ ಒಪ್ಪಂದದಿಂದ (ಮೇ, 31, 1933) ಹೋರಾಟ ಕೊನೆಗೊಂಡು, ಜಪಾನಿಗೆ ಗಣನೀಯ ಲಾಭವಾಯಿತು. ಈ ಒಪ್ಪಂದವು ಪೀಕಿಂಗ್-ಟೀನ್‌ಟ್ಸಿನ್ ಪ್ರದೇಶದಿಂದ ಬೃಹತ್ ಗೋಡೆಯ ಉತ್ತರದವರೆಗೂ ವಿಸ್ತರಿಸಿದ್ದ ಒಂದು ಸೇನಾರಹಿತ ವಲಯವನ್ನು ಸ್ಥಾಪಿಸಿತು. ಎಲ್ಲಾ ಚೀನಿ ಪಡೆಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕಾಯಿತು ಮತ್ತು ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಏರ್ಪಡಿಸುವ ಜವಾಬ್ದಾರಿಯನ್ನು ಜಪಾನಿನೊಂದಿಗೆ ಸ್ನೇಹದಿಂದಿದ್ದ ಪೋಲೀಸಿಗೆ ವಹಿಸಲಾಯಿತು. ಉತ್ತರ ಚೀನಾವನ್ನು ಆಕ್ರಮಿಸುವುದು ಜಪಾನಿಯರ ಉದ್ದೇಶವಾಗಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಜೂನ್, 1935ರ ವೇಳೆಗೆ ಚೀನೀಯರು ಒಳಮಂಗೋಲಿ.ಆ ಪ್ರಾಂತ್ರದ ಚಹರ್‌ನಿಂದ ತಮ್ಮ ಎಲ್ಲಾ ಪಡೆಗಳನ್ನು ಹಿಂತೆಗೆದುಕೊಳ್ಳಲು ಮತ್ತು ಆ ಪ್ರಾಂತದಲ್ಲಿ ಎಲ್ಲಾ ಚೀನೀ ಕಾರ್ಯಾಚರಣೆಗಳನ್ನು ಕೊನೆಗೊಳಿಲಸು ಒಪ್ಪುವಂತೆ ಮಾಡುವಲ್ಲಿ ಜಪಾನಿಯರ ಯಶಸ್ವಿಯಾದರು. 1937ರ ವೇಳೆಗೆ ಜಪಾನಿನ ಸೈನ್ಯವು ಚಹಾರ್ ಪ್ರಾಂತದ ಬಹುತೇಕ ಭಾಗಗಳ ಮೇಲೆ ತನ್ನ ಹತೋಟಿಯನ್ನು ಹೊಂದಿದ್ದಿತು. ಜಪಾನಿಯರನ್ನು ಪ್ರಾದೇಶಿಕ ಸರ್ಕಾರದ ಸೈನಿಕ ಮತ್ತು ನಾಗರೀಕ ಸಲಹೆಗಾರರನ್ನಾಗಿ ನೇಮಿಸಲಾಯಿತು.

1937ರ ಪ್ರಾರಂಭದಲ್ಲಿ ಚೀನಾದ ಜನರಲ್ಲಿ ತಲೆಯೆತ್ತುತ್ತಿದ್ದ ಭಾವನೆಯ ಅಲೆಯು ಚಿಯಾಂಗ್ ಕೈ ಶೈಕವನ್ನು ಚೀನೀ ಕಮ್ಯುನಿಸ್ಟರೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವಂತೆ ಒತ್ತಾಯಿಸಿತು. ಜೂನ್1937ರಲ್ಲಿ ಕುಮಿಂಟಾಂಗ್ ಸೈನ್ಯದ ಮುಖ್ಯಸ್ಥರು ಚಿಯಾಂಗ್‌ಕೈ ಷಕ್ ಮತ್ತು ಕಮ್ಯುನಿಸ್ಟ್‌ರು ಒಂದುಗೂಡುವ ಮೊದಲೇ ಧಾಳಿಮಾಡುವಂತೆ ಎಚ್ಚರಿಸಿದರು. ಪರಿಣಾಮವಾಗಿ, ಜುಲೈ7, 1937ರಂದು ರಾತ್ರಿ ಪೀಕಿಂಗ್‌ನ ಮಾರ್ಕೊ-ಪೋಲೋ ಸೇತುವೆಯ ಬಳಿ ಒಂದು ಘಟನೆ ನಡೆಯಿತು. ತನಗೆ ಯಾವುದೇ ನ್ಯಾಯಯುತ ಹಕ್ಕು ಇರದ ಪ್ರದೇಶದಲ್ಲಿ ಹಾನಿಕಾರಕ ಚಟುವಟಿಕೆಗಳಲ್ಲಿ ತೊಡಗಿದ್ದ ಜಪಾನಿ ಪಡೆ ಮತ್ತು ಚೀನಿ ಕಾವಲುಗಾರರ ನಡುವೆ ಗುಂಡಿನ ಚಕಮಕಿ ನಡೆಯಿತು. ಸ್ಥಳೀಯ ಜಪಾನೀ ಅಧಿಕಾರಿಗಳು ಅದನ್ನು ಪೂರ್ಣಪ್ರಮಾಣದ ಯುದ್ಧವನ್ನಾಗಿ ವಿಸ್ತರಿಸಲು ಅನುಮತಿ ನೀಡಿದರು. ಉತ್ತರ ಚೀನಾ ಯುದ್ಧರಂಗವಾಯಿತು. ಜುಲೈ27,ರಂದು ಜಪಾನಿಯರು ಪೀಕಿಂಗ್‌ನ ಮೇಲೆ ಹತೋಟಿಯನ್ನು ಪಡೆದರು. ಆಗಸ್ಟ್‌ನಲ್ಲಿ ಷಾಂಗೈನಲ್ಲಿ ಹೋರಾಟ ಪ್ರಾರಂಭವಾಯಿತು. ಜಪಾನಿನ ಸರ್ಕಾರವು ನಾನ್‌ಕಿಂಗ್ ಸರ್ಕಾರದೊಂದಿಗೆ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಳ್ಳಲು ಮಾತುಕತೆಗಳನ್ನು ಮುಂದುವರಿಸಿತು. ಆದರೆ ಅದರ ಷರತ್ತುಗಳನ್ನು ಚೀನಾ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ.

ಒಂದು ಪಟ್ಟಣದ ನಂತರ ಮತ್ತೊಂದು ಜಪಾನಿಯರ ವಶವಾದವು. ಈ ಹಂತದಲ್ಲಿ ಜಪಾನ್ ಎರಡನೇ ಮಹಾಯುದ್ಧವನ್ನು ಪ್ರವೇಶಿಸಿದ್ದರಿಂದ ಘರ್ಷಣೆಯು ವಿಶ್ವಸಮರದ ಸ್ವರೂಪವನ್ನು ತಾಳಿತು.

## 156.7 ಜಪಾನ್ ಮತ್ತು ರಾಷ್ಟ್ರಗಳ ಒಕ್ಕೂಟ ಸಂಘ

ರಾಷ್ಟ್ರಗಳ ಒಕ್ಕೂಟ ಸಂಘದ ಪ್ರಣಾಳಿಕೆಯಲ್ಲಿ ಜನಾಂಗ ಸಮಾನತೆಯ ತತ್ವವನ್ನು ಸೇರಿಸಲು ವಿಫಲವಾದ ನಂತರ ಜಪಾನ್ ಅದರ ಮೊಟ್ಟ ಮೊದಲ ಸದಸ್ಯನಾಗಿ ಮತ್ತು ಒಂದು ಪ್ರಬಲ ಶಕ್ತಿಯಾಗಿ, 1920ರಲ್ಲಿ ನಡೆದ ಎಲ್ಲಾ ಪ್ರಮುಖ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿತು. ಅದು ಒಕ್ಕೂಟ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಖಾಯಂ ಸ್ಥಾನವನ್ನು ಪಡೆಯಿತು. ಅದು ತನ್ನ ಪಾಲಿನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿತು ಮತ್ತು ಶಾಂತಿ ಪಾಲನೆಯಲ್ಲಿ ಭಾಗವಹಿಸಿತು. ಡ್ಯಾನ್‌ಜಿಕ ಮುಕ್ತ ಪಟ್ಟಣದ ಮೇಲೆ ಜಪಾನಿನ ಪ್ರತಿನಿಧಿ ಇಶೀಯ ವರದಿಯನ್ನು ನವೆಂಬರ್17, 1920ರಂದು ಒಕ್ಕೂಟ ಸಂಘ ಒಪ್ಪಿಕೊಂಡಿತು. ಅದೇ ರೀತಿ 1923ರ ಕೋರ್ಫು ಬಿಕ್ಕಟ್ಟಿನ ಸಮಯದಲ್ಲಿಯೂ ಜಪಾನಿನ ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರು. ಕಾಲದಿಂದ ಕಾಲಕ್ಕೆ ಜಪಾನಿನ ಪ್ರತಿನಧಿಗಳು ಒಕ್ಕೂಟ ಸಂಘದ ವಿವಿಧ ಅಂಗ ಸಂಸ್ಥೆಗಳಾದ ಕಾರ್ಯಾಲಯ, ಅಂತರ ರಾಷ್ಟ್ರೀಯ ನ್ಯಾಯಾಲಯ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಘಗಳೊಂದಿಗೆ ಸೇರಿದ್ದರು ಮತ್ತು ಉತ್ತಮವಾಗಿ ವರ್ತಿಸಿದರು.

1926ರ ವರೆಗೂ ವಿದೇಶಗಳಲ್ಲಿ ಜಪಾನಿನ ಸುಪ್ರಸಿದ್ಧ ಉದ್ಧಾರವಾದಿಯೆಂದು ಗುರುತಿಸಲಾಗಿದ್ದ ನಿಟೊಬೆ ಇನಾಜೋ ಅಧೀನ ಪ್ರಧಾನ ಕಾರ್ಯಾದರ್ಶಿಯಾಗಿ ಮತ್ತು ಅಂತರರಾಷ್ಟ್ರೀಯ ಕಚೇರಿ (ಬ್ಯೂರೋ)ಯ ನಿರ್ದೇಶಕನಾಗಿ ಸೇವೆ ಸಲ್ಲಿಸಿದನು. ಸಗಿಮುರ ಯೋಟರೊ. ಅಧೀನ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ರಾಜಕೀಯ ವಿಭಾಗದ ನಿರ್ದೇಶಕನಾಗಿ ಅವನ ಉತ್ತಾರಾಧಿಕಾರಿಯಾದನು. ಜಪಾನ್ ಸಂಧಾನಕರವಾಗಿ ಮತ್ತು ಅಂತರರಾಷ್ಟ್ರೀಯ ವ್ಯಾಜ್ಯಗಳ ತೀರ್ಪುಗಾರನಾಗಿಯೂ ಸಕ್ರಿಯ ಪಾತ್ರವಹಿಸಿತು.ಅದು1899 ಮತ್ತು 1907ರ ಹೇಗ್ ಶಾಂತಿ ಸಭೆಯ ಫಲವಾದ ಫೆಸಿಫಿಕ್ ಅಂತರರಾಷ್ಟ್ರೀಯ ವ್ಯಾಜ್ಯಗಳ ತೀರ್ಮಾನದ ಒಡಂಬಡಿಕೆಗೆ ಸಹಿ ಹಾಕಿದವರಲ್ಲಿ ಒಬ್ಬನಾಗಿದ್ದಿತು. ರಾಷ್ಟ್ರಗಳ ಒಕ್ಕೂಟ ಸಂಸ್ಥೆಯ ಅಡಿಯಲ್ಲಿ ಅಂತರರಾಷ್ಟ್ರೀಯ ತೀರ್ಪಿನ ತತ್ವವು ಹೊಸ ಜೀವವನ್ನು ಪಡೆಯಿತು. ಅಡಾಚಿ ಮಿನೀಚಿರೊನನ್ನು ಲೀಗ್ ಸಮಿತಿಯ ಸದಸ್ಯನನ್ನಾಗಿ ನೇಮಿಸಲಾಯಿತು ಮತ್ತು ಈ ಸಮಿತಿಯು ವಿಶ್ವನ್ಯಾಯಾಲಯವೆಂದು ಕರೆಯಲಾದ ಹೊಸ ಶಾಶ್ವತ ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ನಿಯಮಗಳನ್ನು ರೂಪಿಸಿತು. ಜಪಾನಿನ ಓಡ ಯೋರೊಜು ಎಂಬುವವನು ಈ ನ್ಯಾಯಲಯದ ಮೊಟ್ಟಮೊದಲ ಹನ್ನೊಂದು ನ್ಯಾಯಾಧೀಶರಲ್ಲಿಒಬ್ಬನಾಗಿದ್ದನು. ಅವನ ನಂತರ ಅಡಾಚಿ ಮಿನೀಚಿಕೊ ಅವನ ಉತ್ತರಾಧಿಕಾರಿಯಾದನು. ಅವನು ನ್ಯಾಯಾಲಯದ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದನು

## 156.8 ಜಪಾನ್ ಮತ್ತು ಅಮೆರಿಕಾ

ಮೊದಲಿಗೆ ಮಹಾಯುದ್ಧದ ನಂತರ ಅಮೆರಿಕಾ ಜಪಾನಿನ ಮುಂಸದಲ್ಲಿ ಒಂದು ಅತಿದೊಡ್ಡ ಮುಳ್ಳಾಗಿದ್ದಿತು. ವಾಷಿಂಗ್‌ಟನ್ ಸಮ್ಮೇಳನದಲ್ಲಿ ನಿಗದಿಪಡಿಸಲಾದ ನೌಕಾಬಲದ ಪ್ರಮಾಣ, 1924ರ ವಲಸೆ ಕಾಯಿದೆ, ಅಮೆರಿಕಾದ ಮುಕ್ತದ್ವಾರ ನೀತಿಯ ಪ್ರತಿಪಾದನೆ ಮತ್ತು ಚೀನಾದ ಸಮಗ್ರತೆಗಳು ಅಮೆರಿಕಾ ಜಪಾನಿನ ಸಂಬಂಧಗಳಲ್ಲಿ ಆಳವಾದ ಗೂಟವನ್ನು ನೆಟ್ಟವು. ಆಂಗ್ಲೋ- ಜಪಾನ್ ಮೈತ್ರಿ ಒಪ್ಪಂದವನ್ನು ರದ್ದು ಮಾಡಲು ಅಮೆರಿಕಾವೇ ಕಾರಣವಾಗಿದ್ದಿತು. ಮಂಚೂರಿಯಾದ ಮೇಲೆ ಜಪಾನಿನ ಆಕ್ರಮಣವು ಅಮೆರಿಕಾದಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಯಿತು. ಹಿರೋಟ-ಕಾರ್ಡೆಲ್ ಹಲ್‌ನ 1934ರಲ್ಲಿ ಮಾಡಿಕೊಳ್ಳಲಾದ ಟಿಪ್ಪಣಿಯ ಬದಲಾವಣೆಯು ಸ್ನೇಹ ಸಂಬಂಧದ ಪರಸ್ಪರ ಅಭಿಲಾಷೆಯನ್ನು ವ್ಯಕ್ತಪಡಿಸಿತು. ಆದರೆ ಅಮೆರಿಕಾದ ನೌಕಾ ಸಾಮರ್ಥ್ಯದ ಹೆಚ್ಚಳ ಮತ್ತು ಅಡ್ಮಿರಲ್ ಸ್ಟ್ಯಾನ್ಲೆಯ ಅಮೆರಿಕಾದ ನೌಕೆಗಳು ಶತ್ರುಗಳ ಸಮುದ್ರವನ್ನು ಪ್ರವೇಶಿಸುವ ಸಾಮರ್ಥ್ಯವನ್ನು ಹೊಂದಿವೆಯೆಂಬ ಘೋಷಣೆಯು ಜಪಾನಿನಲ್ಲಿ ದಿಗಿಲನ್ನು (ಗಾಬರಿ, ಭಯ) ಹುಟ್ಟಿಸಿತು. ಪೆಸಿಫಿಕ್‌ನಲ್ಲಿ ಅಮೆರಿಕಾದ ಸ್ಥಾನಮಾನಗಳು ಜಪಾನಿನಲ್ಲಿ ವ್ಯಾಪಾಕವಾದ ಚರ್ಚೆಯ ವಿಷಯವಾಯಿತು. ಜಪಾನಿನ ಸುದ್ದಿ ಮಾಧ್ಯಮವು ಹೊಸ ಬಗೆಯ ಅಮೆರಿಕಾದ ಸಾಮ್ರಾಜ್ಯಷಾಹಿವಾದದ ಏಳಿಗೆಯ ಬಗ್ಗೆ ಸುಳಿವು ನೀಡಿತು. ಅಘೋಷಿತ ಚೀನಾ-ಜಪಾನ್ ಯುದ್ಧವು ಜಪಾನ್ ಮತ್ತು ಅಮೆರಿಕಾ ಸಂಬಂಧಗಳ ಮೇಲೆ ಬಾರೀ ಒತ್ತಡವನ್ನು ಹೇರಿದ್ದವು. ಡಿಸೆಂಬರ್12,1937ರಂದು ನಡೆದ ಒಂದು ಗಂಭೀರ ಘಟನೆಯಲ್ಲಿ ಜಪಾನಿನ ನೌಕಾ ವಿಮಾನಗಳು ಯಾಂಗ್‌ಟ್ಸಿ

ನದಿಯಲ್ಲಿ ಕಾವಲು ತರ್ಕವ್ಯದಲ್ಲಿದ್ದ ಅಮೆರಿಕಾದ ಪನಯ್ ಎಂಬ ಬಂದೂಕು ದೋಣಿಯ ಮೇಲೆ ದಾಳಿ ಮಾಡಿ ಅದನ್ನು ಮುಳುಗಿಸಿತು. ಜಪಾನ್ ಕ್ಷಮಾಯಾಚನೆಯ ಪತ್ರವನ್ನು ಕಳುಹಿಸಿ ತಪ್ಪಿತಸ್ಥರನ್ನು ಶಿಕ್ಷಿಸುವ ಮತ್ತು ನಷ್ಟವನ್ನು ತುಂಬಿಕೊಡುವ ಭರವಸೆಯನ್ನು ನೀಡಿತಾದರೂ, ಅಮೆರಿಕಾ ಚೀನಾದಲ್ಲಿ ಜಪಾನಿನ ಆಕ್ರಮಣಕಾರಿ ನೀತಿಯನ್ನು ಖಚಿತವಾಗಿ ವಿರೋಧಿಸಿತು. ಅದು ಉಧಾರವಾದ ಸಾಲದ ಮೂಲಕ ಚಿಯಾಂಗ್ ಕೈ ಕ್ಷಿಕ್‌ನ ಸರ್ಕಾರಕ್ಕೆ ಸಹಾಯ ಮಾಡಿತು. 1938ರಲ್ಲಿ ಅಮೆರಿಕಾದ ವಿದೇಶಾಂಗ ಇಲಾಖೆಯು ವಿಮಾನಿಗಳ ತಯಾರಕರು ಮತ್ತು ಅನ್ವೇಷಕರನ್ನು ಜಪಾನಿಗೆ ತಮ್ಮ ವಸ್ತುಗಳನ್ನು ಕಳುಹಿಸದಂತೆ 'ನೈತಿಕ ತಡೆ'ಯನ್ನು ಕೈಗೊಳ್ಳುವಂತೆ ಕೇಳಿಕೊಂಡಿತು, ಅಧ್ಯಕ್ಷ ರೂಸ್‌ವೆಲ್ಟನೂ ಸೇರಿದಂತೆ ಅಮೆರಿಕಾದ ಆಡಳಿತಗಾರರು ಬೃಹತ್ ಅನಾಹುತನೊಂದನ್ನು ತಪ್ಪಿಸಲು ಶಾಂತಿ ಮತ್ತು ವಿಶ್ವಸ್ತ್ರೀಕರಣದ ವಿಷಯವನ್ನು ಪದೇ ಪದೇ ಪ್ರಸ್ತಾಪಿಸಿತೊಡಗಿದರು. ಜಪಾನಿನ ಪ್ರಧಾನಿ ಬರೋನ್ ಹಿರನುಮಾ ತನ್ನ ಭಾಷಣದಲ್ಲಿ ಸಂಧಾನದ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಒತ್ತು ನೀಡಿದನು. ಆದರೆ ತನ್ನ ಹಾದಿಯಿಂದ ಬದಲಾಗಲಿಲ್ಲ. ಮತ್ತು 'ಅಮೆರಿಕಾ ಹಾಗೂ ಇಂಗ್ಲೆಂಡ್‌ಗಳಲ್ಲಿ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ರಾಜನೀತಿ ತಂತ್ರಜ್ಞರಿರುವರೆಂದು' ಹೇಳಿದನು.

ಮಾಚ್ 27,1939ರಂದು ಅಮೆರಿಕಾದ ಸೆನೆಟ್ ದೇಶದ ಇತಿಹಾಸದಲ್ಲಿಯೇ ಅತಿ ದೊಡ್ಡ ಶಾಂತಿ ಕಾಲದ ಯುದ್ಧ ಇಲಾಖೆಯ ಅನುಮೋದನೆಗೆ ಸಹಮತ ವ್ಯಕ್ತಪಡಿಸಿತು. ಜುಲೈ26ರಂದು ಜಪಾನಿನೊಂದಿಗೆ ಮಾಡಿಕೊಳ್ಳಲಾಗಿದ್ದ 1911ರ ವಾಣಿಜ್ಯ ಮತ್ತು ನೌಕಾ ಸಂಚಾರ ಒಪ್ಪಂದವನ್ನು ತಿರಸ್ಕರಿಸಲಾಯಿತು. ಪೂರ್ವ ಏಷ್ಯಾದಲ್ಲಿ ಅಮೆರಿಕಾದ ಹಕ್ಕುಗಳನ್ನು ಉಲ್ಲಂಘಿಸದಂತೆ ಟೋಕಿಯೋಕ್ಕೆ ಇದ್ದ ಸ್ಪಷ್ಟ ಎಚ್ಚರಿಕೆಯಾಗಿದ್ದಿತು. 1939ರ ಅಕ್ಟೋಬರ್‌ನಿಂದ ಡಿಸೆಂಬರ್‌ನವರೆಗೆ ಅನೇಕ ನಿವಾರಣೆಯ ಮತ್ತು ಪರಿವರ್ತನೆಯ ಸಮ್ಮೇಳನಗಳು ಮತ್ತು ಪ್ರಯತ್ನಗಳು ನಡೆದವು. ಚೀನಾದಲ್ಲಿ ತೆರೆದ ಬಾಗಿಲು ನೀತಿಗೆ ಜಪಾನ್ ಭದ್ಧವಾಗಿರಬೇಕೆಂಬ ಅಮೆರಿಕಾದ ಒತ್ತಾಯವನ್ನು ಜಪಾನ್ ಗೌರವಿಸಲಿಲ್ಲ ಮತ್ತು ಅದನ್ನು ರಾಜನೀತಿ ನೈಪುಣ್ಯತೆಯ ಘೋರ ಕೊರತೆಯೆಂದು ವರ್ಣಿಸಿತು. ಆದಾಗ್ಯೂ ಎರಡೂ ದೇಶಗಳ ಪ್ರತಿನಿಧಿಗಳ ನಡುವೆ 1940ರ ಪ್ರಾರಂಭದಲ್ಲಿ ಮಾತುಕತೆಗಳು ನಡೆದವು ಆದರೆ ಯಾವುದೇ ಫಲಿತಾಂಷ ಸಾಧ್ಯವಾಗಲಿಲ್ಲ. ಜುಲೈ1940ರಲ್ಲಿ ಪರವಾನಗಿಯಡಿಯ ಹೊರತಾಗಿ ಜಪಾನಿಗೆ ಅನೇಕ ಸೂಕ್ಷ್ಮ ಯುದ್ಧ ವಸ್ತುಗಳ ರಫ್ತನ್ನು ನಿಶೇಧಿಸಲಾಯಿತು. ಜುಲೈ 1941ರಲ್ಲಿ ಅಮೆರಿಕಾದಲ್ಲಿದ್ದ ಜಪಾನಿನ ಆಸ್ತಿಪಾಸ್ತಿಗಳನ್ನು ತಡೆಹಿಡಿಯಲಾಯಿತು. ಕ್ರಮೇಣ ಈ ನಿರ್ಬಂಧಗಳು ಸಂಕುಚಿತಗೊಂಡವು ಮತ್ತು ನಂತರ ಪ್ರಾಯೋಗಿಕವಾಗಿ ಜಪಾನಿಗೆ ಅಮೆರಿಕಾದ ಸರಬರಾಜಿನ ಮಾರುಕಟ್ಟೆಯನ್ನು ಮುಚ್ಚಲಾಯಿತು. 1941ರ ವಸಂತ ಕಾಲದಲ್ಲಿ ಜಪಾನಿನ ದೇಶಭಕ್ತರು ಅಮೆರಿಕಾದ ವಿರಿದ್ಧ ಘರ್ಷಣೆಯನ್ನು ಬಹಳ ಕಾಲ ಮುಚ್ಚಿಡಲಿ ಸಾಧ್ಯವಾಗಲಿಲ್ಲ.

ವಾಷಿಂಗ್‌ಟನ್‌ನಿಂದ ಒಂದು ತಟಸ್ಥತೆ ಮತ್ತು ಅನಾಕ್ರಮಣ ಒಪ್ಪಂದವನ್ನು ಪಡೆಯುವ ಮತ್ತೊಂದು ಪ್ರಯತ್ನವನ್ನು ಟೋಕಿಯೋ ಮಾಡಿತಾದರೂ ಅಮೆರಿಕಾ ಮನಸ್ಸಿಲ್ಲದವನಂತೆ ಮತ್ತು ಉಧಾಸೀನವಾಗಿ ಉಳಿಯಿತು. ಅಕ್ಟೋಬರ್, 1941ರಲ್ಲಿ ಜಪಾನಿನ ಪ್ರಧಾನಿ ಟೋಜೋ ಸುದ್ದಿ ಮಾಧ್ಯಮಾಗಳ ಬೆಂಬಲದಿಂದ ಪೆಸಿಫಿಕ್‌ನಲ್ಲಿ 'ಸಂಪೂರ್ಣ ಯುದ್ಧ'ಕ್ಕೆ ಸಿದ್ಧನಾದನು. ಅಮೆರಿಕಾದ ಬದಲಾಗದ ಧೋರಣೆಯನ್ನು ಟೋಕಿಯೋ ಸಹಿಸಲಿಲ್ಲ ಮತ್ತು ತನ್ನ ತಾಳ್ಮೆಯನ್ನು ಕಳೆದುಕೊಂಡಿತು. ಅದು 'ಅತಿ ಮುಖ್ಯವಾದ ಬಿಕ್ಕಟ್ಟಿನ' ಬಗ್ಗೆ ಪ್ರಸ್ತಾಪಿಸಿತು ಮತ್ತು ಡಿಸೆಂಬರ್ 1941ರ ಪ್ರಾರಂಭದಲ್ಲಿ ಪರ್ಲ್ ಹಾರ್ಬರ್‌ನ ಮೇಲೆ ಧಾಳಿ ಮಾಡಿತು.

## 156.9 ಸಾರಾಂಶ

ಈ ಘಟಕದಲ್ಲಿ ನಾವು ಚೀನಾದಲ್ಲಿ ಜಪಾನಿನ ಸ್ಥಾನ ಮತ್ತು ಪ್ಯಾರಿಸ್ ಶಾಂತಿ ಸಭೆಯಲ್ಲಿ ಮಿತ್ರರಾಷ್ಟ್ರಗಳು ಅದರ ಆಕ್ರಮಣಕಾರಿ ನೀತಿಯನ್ನು ಮಾನ್ಯ ಮಾಡಿದುದರ ಬಗ್ಗೆ ಅಧ್ಯಾಯನ ಮಾಡಿದೆವು. ಏಷ್ಯಾದ ಬಹುತೇಕ ರಾಷ್ಟ್ರಗಳು ಪಾಶ್ಚಿಮಾತ್ಯ ಪ್ರಾಬಲ್ಯಕ್ಕೆ ಮತ್ತಷ್ಟು ಬಲಿಯಾಗುತ್ತಿರುವಾಗ ಜಪಾನ್ ಅಕೆ-ವಸಾಹತುಷಾಹಿ ಸ್ಥಾನದಿಂದ ಪ್ರಬಲ ರಾಷ್ಟ್ರದ ಮಟ್ಟಕ್ಕೇರಿದುದು ಅದ್ಭುತ ಯಶಸ್ಸಿನ ಕಥೆಯಾಗಿದ್ದಿತು. ಮೊದಲನೆ ಮಹಾಯುದ್ಧ ಆರಂಭವಾದಾಗ ಜಪಾನಿನ ವಿದೇಶಾಂಗ ನೀತಿಯು ಪರೀಕ್ಷೆಗೆ ಗುರಿಯಾಯಿತು. ಜಪಾನ್ ತಟಸ್ಥವಾಗಿರಬೇಕೆಂದು ಹೆಚ್ಚಿನ ಒತ್ತಾಯವಿದ್ದಿತು. ಕೆಲವರು ಜಪಾನ್ ಯುದ್ಧದಲ್ಲಿ ರಷ್ಯದೊಂದೆಗೆ ಸೇರಬೇಕೆಂದು ಒತ್ತಾಯ ಪಡಿಸಿದರು. ಆದರೆ ಜಪಾನ್ ಜರ್ಮನಿಯ ವಿರುದ್ಧ ಇಂಗ್ಲೆಂಡಿನೊಂದಿಗೆ ಯುದ್ಧದಲ್ಲಿ ಸೇರುವ ಸೂಕ್ತ ನಿರ್ಧಾರವನ್ನು ಸೂಕ್ತ ಸಮಯದಲ್ಲಿ ಕೈಗೊಂಡನು. ಮೊದಲನೆ ಮಹಾಯುದ್ಧವು ಜಪಾನಿಗೆ ದೇವರೇ ಕಳುಹಿಸಿದ ಉಡುಗೊರೆಯಾಗಿದ್ದು ತನ್ನ ವಿಸ್ತರಣಾ ನೀತಿಯನ್ನು ಅನುಸರಿಸಲು ಅವಕಾಶವನ್ನು ಕಲ್ಪಿಸಿತು. ಯುದ್ಧ ಕೊನೆಗೊಂಡಾಗ ಜಪಾನ್ ಏಷ್ಯಾದ ಅತ್ಯಂತ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಿತು.

ಯುದ್ಧದ ಕಾಲದಲ್ಲಿ ಜಪಾನ್ ತನ್ನ ವಿದೇಶಾಂಗ ವ್ಯವಹಾರಗಳಲ್ಲಿ ಆಕ್ರಮಣಕಾಗಿ ನೀತಿಯನ್ನು ಅನುಸರಿಸಿತು. ಆದರೆ ವಾಷಿಂಗ್‌ಟನ್ ಸಮ್ಮೇಳನದಲ್ಲಿ ಅಮೆರಿಕಾ ಅದಕ್ಕೆ ಕಡಿಮೆ ಪ್ರಮುಖ ನೌಕೆಗಳ ಪ್ರಮಾಣವನ್ನು ನೀಡುವ ಮೂಲಕ ಮತ್ತು ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದಕ್ಕೆ ನಾಜೂಕಿನ ಶವಸಂಸ್ಕಾರದ ಮೂಲಕ ಜಪಾನನ್ನು ತಡೆಯಿತು.

ಜಪಾನ್ ಹೇಗೆ ಚೀನಾದ ಬಗ್ಗೆ ಅತ್ಯಂತ ಆಕ್ರಮಣಕಾರಿ ನೀತಿಯನ್ನು ಅನುಸರಿಸಿತೆಂಬುದನ್ನು ನಾವು ತಿಳಿದುಕೊಳ್ಳಲು ಸಾಧ್ಯವಾಗಿದೆ. ಚೀನಾದೊಂದಿಗೆ ತನ್ನ ಭೌಗೋಳಿಕ ಸಾಮೀಪ್ಯದ ಅನುಕೂಲವನ್ನು ಜಪಾನ್ ಪಡೆಯಿತು. ಅದು ಮಂಚೂರಿಯಾವನ್ನು ಪ್ರತ್ಯೇಕ ರಾಜ್ಯವೆಂದು ಘೋಷಿಸಿತು. 1937ರಲ್ಲಿ ಎರಡನೇ ಚೀನಾ-ಜಪಾನ್ ಯುದ್ಧವನ್ನು ಮಾಡಿದ ಜಪಾನ್ ಚೀನಾವನ್ನು ಸೋಲಿಸಿತು ಮತ್ತು ಚೀನಾದ ಕಡೆಗೆ ತನ್ನ ವಿಸ್ತರಣಾ ನೀತಿಯನ್ನು ಅನುಸರಿಸಿವುದನ್ನು ಮುಂದುವರಿಸಿತು. ಈ ರೀತಾಯಾಗಿ ಜಪಾನ್ ಎಂದಿಗೂ ಸಂಧಾನದ ಅಥವಾ ಮೈತ್ರಿಯ ನೀತಿಯನ್ನು ಅನುಸರಿಲಲಿಲ್ಲ.

ಅಲ್ಲದೆ ಮಂಚೂರಿಯಾ, ಕೊರಿಯಾ ಮತ್ತು ಚೀನಾಗಳ ಪ್ರಶ್ನೆಯ ವಿಚಾರದಲ್ಲಿ ಜಪಾನ್ ರಷ್ಯಾದೊಂದಿಗೆ ಸ್ನೇಹ ಸಂಬಂಧಗಳನ್ನು ಹೊಂದಿರಲಿಲ್ಲವೆಂಬುದನ್ನು ತಿಳಿದೆವು. ವಾಷಿಂಗ್‌ಟನ್ ಸಮ್ಮೇಳನದ ನಂತರ ಅಮೆರಿಕಾದೊಂದಿಗೆ ಜಪಾನಿನ ಸಂಬಂಧಗಳು ಸೌಹಾರ್ದಯುತವಾಗಿ ಉಳಿಯಲಿಲ್ಲ. ಅಮೆರಿಕಾ ಚಿಯಾಂಗ್ ಕೈ ಶೆಕ್‌ನನ್ನು ಜಪಾನಿನ ವಿರಿದ್ಧ ಪ್ರೋತ್ಸಾಹಿಸುತ್ತಾ ಬಂದಿತ್ತು. ಆದರೆ ಜಪಾನ್ ಯಾವಾಗಲೂ ಅಮೇರಿಕಾದೊಂದಿಗೆ ಸೌಹಾರ್ದಸಂಬಂಧಗಳುನ್ನು ಹೊಂದಲು ಅಪಾರ ಆಸಕ್ತಿಯನ್ನು ತೋರಿಸಿತು ಆದರೆ ಅದು ತನ್ನ ಪ್ರಯತ್ನದಲ್ಲಿ ವಿಫಲವಾಯಿತು. ಒಂದು ಕಡೆ ಜಪಾನ್ ಒಂದು ಪುಟ್ಟ ರಾಜ್ಯದಿಂದ ಪ್ರಮುಖ ವಿಶ್ವ ಶಕ್ತಿಯಾಗಿ ಹೊರಹೊಮ್ಮಿತು. ಇದು ಕೆಲವು ಪ್ರಮುಖ ವಿಶ್ವದ ರಾಷ್ಟ್ರಗಳಿಗೆ ಅಪಾರ ಕಿರಿಕಿರಿಯುಂಟುಮಾಡಿತು. ಈ ರಾಷ್ಟ್ರಗಳು ಜಪಾನನ್ನು ಕೆಲವು ಮಿತಿಯಲ್ಲಿಡಲು ಆಸಕ್ತಿಯನ್ನು ಹೊಂದಿದ್ದವು ಮತ್ತು ಅದರಲ್ಲಿ ಯಶಸ್ವಿಯೂ ಆದವು.

## 156.10 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

**I ಇವುಗಳಲ್ಲಿ ಪ್ರತಿಯೊಂದಕ್ಕೂ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1) ಫು-ಯಿ

2) ನ್ಯೂ ಆರ್ಡರ್(ನವ ಆರ್ಥಿಕ ವ್ಯವಸ್ಥೆ)

3) ತಟಸ್ಥತೆಯ ಒಡಂಬಡಿಕೆ

4) ನಿಟೋಬೆ ಇನಾಜೋ

**II** ಎ ಮತ್ತು ಬಿ ಗಳನ್ನು ಹೊಂದಿಸಿ ಬರೆಯಿರಿ.

| | ಎ | ಬಿ |
|---|---|---|
| 1) | ವರ್ಸೈಲ್ಸ್ ಸಮ್ಮೇಳನ | 1931 |
| 2) | ವಾಷಿಂಗ್‌ಟನ್ ಸಮ್ಮೇಳನ | 1921 - 2 |
| 3) | ಮಂಚೂರಿಯಾ ಪ್ರಕರಣ | 1919 |
| 4) | ಎರಡನೇ ಚೀನಾ-ಜಪಾನ್ ಯುದ್ಧ | 1937 |

III ಇವುಗಳಗೆ ಎರಡು ಪುಟಗಳಷ್ಟು ಉತ್ತರ ಬರೆಯಿರಿ

1. ವಾಷಿಂಗ್‌ಟನ್ ಸಮ್ಮೇಳನದ ಬಗ್ಗೆ ಟಿಪ್ಪಣಿ ಬರೆಯಿರಿ.

2. 1922ರಿಂದ 1931ರ ವರೆಗಿನ ಜಪಾನಿನ ವಿದೇಶಾಂಗ ನೀತಿಯನ್ನು ವಿವರಿಸಿ.

3 1937ರ ಚೀನಾ ಜಪಾನ್ ಯುದ್ಧದ ಮುಖ್ಯ ಘಟನೆಗಳು ಮತ್ತು ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

## 156.11 ಅಧ್ಯಯನಕ್ಕೆ ಗ್ರಂಥಗಳು


1. Storny : History of Modern Japan

2. William Barry : Modern Japan

3. Borton, Huge and other: Japan between East West.


ಇಂಗ್ಲಿಷ್ ಮೂಲ: ಎಸ್. ಮೀರ್ ಸಮಿವುಲ್ಲ.

ಅನುವಾದ : ಕೆ.ಬಿ.ಚಂದ್ರ.

## ಟಿಪ್ಪಣಿಗಳು

# ಘಟಕ -157

## ಚೀನಾ ಜಪಾನ್ ಸಂಬಂಧಗಳು, 1931ರ ವರೆಗೆ

**ರಚನೆ**

157.0 ಉದ್ದೇಶಗಳು

157.1 ಪೀಠಿಕೆ

157.2 ಚೀನಾ-ಜಪಾನಿನ ಪ್ರಾರಂಭದ ಸಂಬಂಧಗಳು

157.3 ಚೀನಾ -ಜಪಾನ್ ಘರ್ಷಣೆಗಳು 1894ರಿಂದ 1905ರ ರವರೆಗೆ

157.4 ಚೀನಾ- ಜಪಾನ್ ಸಂಬಂಧಗಳು 1905ರಿಂದ 1922ರ ವರೆಗೆ

157.4.1. ಮೊದಲನೆ ಮಹಾಯುದ್ಧದಲ್ಲಿ ಜಪಾನ್

157.4.2. ಇಪ್ಪತ್ತೊಂದು ಬೇಡಿಕೆಗಳು -1915

157.5 ಚೀನಾ-ಜಪಾನ್ ಸಂಬಂಧಗಳು 1922ರಿಂದ 1931ರವರೆಗೆ

157.6 1931ರ ಮಂಚೂರಿಯಾ ಬಿಕ್ಕಟ್ಟು.

157.7 ರಾಷ್ಟ್ರಗಳ ಒಕ್ಕೂಟ ಸಂಘದಲ್ಲಿ ಚೀನಾ ಮತ್ತು ಜಪಾನ್

157.8 ಸಾರಾಂಶ

157.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

157.10 ಅಧ್ಯಯನಕ್ಕೆ ಗ್ರಂಥಗಳು

## 157.0 ಉದ್ದೇಶಗಳು

1930 ರವರೆಗಿನ ಚೀನಾ- ಜಪಾನ್ ಸಂಬಂಧಗಳನ್ನು ಕುರಿತು ಚರ್ಚಿಸುವುದು ಈ ಘಟಕದ ಬಹುಮುಖ್ಯ ಉದ್ದೇಶವಾಗಿದೆ. ಚೀನಾ ಮತ್ತು ಜಪಾನ್‌ಗಳ ನಡುವೆ ಘರ್ಷಣೆಗೆ ಕೊರಿಯಾ ಮುಖ್ಯ ಕಾರಣವಾಗಿತ್ತು. ಸಂಬಂಧಗಳು ಹದಗೆಡಲು ಜಪಾನಿನ ಪ್ರಾದೇಶಿಕ ವಿಸ್ತರಣೆ ಪ್ರಮುಖ ಕಾರಣವಾಗಿತ್ತು. ಚೀನಾ- ಜಪಾನ್ ಸಂಬಂಧಗಳ ಇತಿಹಾಸದ ಪ್ರಮುಖ ಹಂತಗಳೆಂದರೆ.

i) 1894- 95 ಚೀನಾ- ಜಪಾನ್ ಯುದ್ಧ

ii) ಮೊದಲನೆ ಮಹಾಯುದ್ಧ (1914- 1918)

iii) ಚೀನಾದೊಂದಿಗೆ ಜಪಾನಿನ ಸ್ನೇಹ ಸಂಬಂಧಗಳು(1920-1931)

iv) ಮಂಚೂರಿಯಾದ ಮೇಲೆ ಜಪಾನಿನ ಆಕ್ರಮಣ(1931)

ಈ ಘಟಕವನ್ನು ಅಭ್ಯಸಿಸಿದ ನಂತರ ನೀವು ಇವುಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗಬೇಕು

* ಕೊರಿಯಾದ ಸಮಸ್ಯೆಯು ಹೇಗೆ 1894-95ರಲ್ಲಿ ಚೀನಾ ಮತ್ತು ಜಪಾನ್‌ಗಳ ನಡುವೆ ಸೈನಿಕ ಘರ್ಷಣೆಗಳಿಗೆ ಪ್ರಮುಖ ಕಾರಣವಾಯಿತು.
* ಚೀನಾ ಒತ್ತಾಯ ಪೂರ್ವಕವಾಗಿ ಜಪಾನಿನ ಚಟುವಟಿಕೆಗಳಿಗೆ ತನ್ನ ಬಾಗಿಲನ್ನು ತೆರೆಯಿತು.
* 1910ರಲ್ಲಿ ಜಪಾನ್ ಕೊರಿಯಾವನ್ನು ಸ್ವಾಧೀನಪಡಿಸಿಕೊಂಡಿತು ಮತ್ತು ಅದು ಜಪಾನಿನ ವಸಾಹತುವಾಗಿ ಉಳಿಯಿತು.
* ಜಪಾನ್ ಚೀನಾಕ್ಕೆ ಇಪ್ಪತ್ತೊಂದು ಬೇಡಿಕೆಗಳನ್ನು ಸಲ್ಲಿಸಿತು ಮತ್ತು ಅವುಗಳಲ್ಲಿ ಕೆಲವನ್ನು ಒಪ್ಪಿಕೊಳ್ಳುವಂತೆ ಚೀನಾವನ್ನು ಬಲವಂತಪಡಿಸಲಾಯಿತು.
* ಮೊದಲನೆ ಮಹಾಯುದ್ಧದ ಕೊನೆಯಲ್ಲಿ ಜಪಾನ್ ಆರ್ಥಿಕವಾಗಿ ಒಂದು ಸಾಲ ಕೊಡುವ ರಾಷ್ಟ್ರವಾಯಿತು ಮತ್ತು ಏಷ್ಯಾದ ಅತ್ಯಂಕ ಪ್ರಬಲ ರಾಷ್ಟ್ರವಾಯಿತು.
* ಸೆಪ್ಟಂಬರ್, 1931ರ ಮಂಚೂರಿಯೂ ಪ್ರಕರಣ ಚೀನಾದಲ್ಲಿ ಜಪಾನಿನ ವಸಾಹತೀಕರಣದ ಮುಂದಿನ ಹಂತವನ್ನು ಆರಂಭಿಸಿತು.

## 157.1 ಪೀಠಿಕೆ

1931ರ ವರೆಗಿನ ಚೀನಾ -ಜಪಾನ್ ಸಂಬಂಧಗಳ ಐತಿಹಾಸಿಕ ಬೆಳವಣಿಗೆಯನ್ನು ಚಿತ್ರಿಸುವುದು ಈ ಪಾಠದ ಮುಖ್ಯ ಗುರಿಯಾಗಿದೆ. ನಮ್ಮೆಲ್ಲರಿಗೂ ತಿಳಿದಿರುವಂತೆ ಸುಮಾರು ನೂರು ವರ್ಷಗಳ ಕಾಲ ಚೀನಾ ಅನೇಕ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಜಂಟೀ ಪ್ರಾಬಲ್ಯಕ್ಕೊಳಪಟ್ಟಿದ್ದ ಅರೆ ವಸಾಹತು ರಾಷ್ಟ್ರವಾಗಿತ್ತು. ಸಾಮ್ರಾಜ್ಯಶಾಹಿಯ ವಿರುದ್ಧ ಚೀನಿಯರ ಹೋರಾಟ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಘರ್ಷಣೆಯಿಂದಾಗಿ ಚೀನಾ ಅರೆ ಸ್ವಾತಂತ್ರದ ಸ್ಥಾನವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಮೊದಲನೆ ಮಹಾಯುದ್ಧವು ಚೀನಾದ ಮೇಲೆ ಪ್ರಾಬಲ್ಯವನ್ನು ಸ್ಥಾಪಿಸಲು ಜಪಾನಿಗೆ ವಿಶೇಷ ಅವಕಾಶವನ್ನು ನೀಡಿತು. ಆದರೆ ಜಪಾನಿನ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ ಚೀನೀಯರ ಹೋರಾಟ ಮತ್ತು ಇತರ ಸಾಮ್ರಾಜ್ಯಶಾಹಿ ಶಕ್ತಿಗಳ ಮಧ್ಯಪ್ರವೇಶದಿಂದ ಜಪಾನಿಗೆ ಚೀನಾದ ಶರಣಾಗತಿಯ ಒಪ್ಪಂದ ಮತ್ತು ಇಪ್ಪತ್ತೊಂದು ಬೇಡಿಕೆಗಳಿಗೆ ದೇಶದ್ರೋಹಿ ಯುವಾನ್ ಷಿಕ್ವಾಮ್ ಹಾಕಿದ ಸಹಿ ಬೆಲೆಯನ್ನು ಕಳೆದುಕೊಂಡವು. 1922ರಲ್ಲಿ ವಾಷಿಂಗ್‌ಟನಲ್ಲಿ ಅಮೆರಿಕಾ ಕರೆದಿದ್ದ ಒಂಭತ್ತು ರಾಷ್ಟ್ರಗಳ ಸಭೆಯಲ್ಲಿ ಮಾಡಿಕೊಳ್ಳಲಾದ ಒಪ್ಪಂದಿಂದ ಚೀನಾವನ್ನು ಮತ್ತೊಮ್ಮೆ ಅನೇಕ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಜಂಟಿ ಪ್ರಾಬಲ್ಯಕ್ಕೆ ಒಳಪಡಿಸಲಾಯಿತು. ಆದರೆ ಬಹಳ

ಮೊದಲೇ ಪರಿಸ್ಥಿತಿ ಬದಲಾಯಿತು. ಸೆಪ್ಟಂಬರ್ 18, 1931ರ ಘಡನೆಯು ಚೀನಾದಲ್ಲಿ ಜಪಾನಿನ ವಸಾಹತು ಸ್ಥಾಪನೆಯ ಹಂತವನ್ನು ಆರಂಭಿಸಿತು. ಜಪಾನಿನ ಆಕ್ರಮಣವು ತಕ್ಷಣಕ್ಕೆ (ತಾತ್ಕಾಲಿಕವಾಗಿ) ನಾಲ್ಕು ಈಶಾನ್ಯ ರಾಜ್ಯಗಳಿಗೆ ಸೀಮಿತವಾಗಿದ್ದರಿಂದ ಕೆಲವು ಜನರು ಜಪಾನಿನ ಸಾಮ್ರಾಜ್ಯ ವಿಸ್ತರಣೆ ಮುಂದುವರಿಯುವುದಿಲ್ಲವಂದು ಅಭಿಪ್ರಾಯಪಟ್ಟರು. ಆದರೆ ಮುಂದಿನ ವಿಷಯಗಳು ಬೇರೆಯೇ ಆಗಿದ್ದವು. ಜಪಾನಿನ ಸಾಮ್ರಾಜ್ಯಷಾಹಿವಾದಿಗಳು ಈಗಾಗಲೇ ಚೀನಾದ ಬೃಹತ್ ಗೋಡೆಯನ್ನು ಬೇದಿಸಿ ದಕ್ಷಿಣದಾಚೆಗೆ ಇಡೀ ಚೀನಾವನ್ನು ಆಕ್ರಮಿಸಿಕೊಳ್ಳವ ಉದ್ಧೇಶವನ್ನು ಪ್ರದರ್ಶಿಸಿದ್ದರು. ಅವರು ಇಡೀ ಚೀನಾವನ್ನು ಅನೇಕ ಸಾಮ್ರಾಜ್ಯಷಾಹಿ ರಾಷ್ಟ್ರಗಳು ಹಂಚಿಕೊಂಡಿದ್ದ ಅರೆ ವಸಾಹತು ಸ್ಥಿತಿಯಿಂದ ಜಪಾನಿನ ಏಕಸ್ವಾಮ್ಯಕ್ಕೊಳಪಟ್ಟ ವಸಾಹತುವನ್ನಾಗಿ ಪರಿವರ್ತಿಸಲು ಬಯಸಿದರು.

## 157.2. ಚೀನಾ- ಜಪಾನಿನ ಪ್ರಾರಂಭದ ಸಂಬಂಧಗಳು

ಬಹಳ ಹಿಂದಿನಿಂದಲೂ ಚೀನಾ ಒಂದು ಬಹುದೊಡ್ಡ ಮತ್ತು ಪ್ರಬಲ ರಾಷ್ಟ್ರವಾಗಿತ್ತು. ಅದು ಜಪಾನಿಗಿಂತಲೂ ಅಪಾರವಾದ ಜನಸಂಖ್ಯೆ ಪ್ರದೇಶ ಮತ್ತು ಪ್ರಭಾವಿತ ವಲಯವನ್ನು ಹೊಂದಿದ್ದಿತು. ಜಪಾನನ್ನು ಒಂದು ಕೀಳು ದರ್ಜೆಯ ದೇಶವೆಂದು ಪರಿಗಣಿಸಲಾಗಿತು. ಆದರೆ 19ನೇ ಸತಮಾನದ ದ್ವಿತಿಯ ಭಾಗದಲ್ಲಿ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಯಿತು. ಜಪಾನ್ ಪಾಶ್ಚಿಮಾತ್ಯ ಯುದ್ಧ ವಿಧಾನಗಳು ಮತ್ತು ತಂತ್ರಗಳನ್ನು ಬಳಸಲು ಪ್ರಾರಂಭಿಸಿ 19ನೇ ಶತಮಾನದ ಪ್ರಾರಂಭದಲ್ಲಿ ಚೀನಾಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿದ್ದಿತು. ಯೂರೋಪಿನ ರಾಷ್ಟ್ರಗಳೊಂದಿಗೆ ಚೀನಾ ಅಸಮಾನತೆಯ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದ ಸಮಯದಲ್ಲಿಯೇ ಜಪಾನೇ ಗೌರವಯುತ ಷರತ್ತುಗಳ ಮೇಲೆ ಯೂರೋಪಿಯನ್ನರಿಗೆ ರಿಯಾಯಿತಿಗಳನ್ನು ನೀಡಿತು. 1871ರಲ್ಲಿ ಜಪಾನ್ ಚೀನಾದೊಂದಿಗೆ ಮಾಡಿಕೊಂಡ ಒಂದು ಒಪ್ಪಂದದಂತೆ ಜಪಾನಿಗೆ ಕೆಲವು ವಾಣಿಜ್ಯ ರಿಯಾಯಿತಿಗಳನ್ನು ನೀಡಲು ಚೀನಾ ಒಪ್ಪಿತು.

ನಂತರ ಜಪಾನ್ ಕೊರಿಯಾದ ಮೇಲೆ ಹತೋಟಿಯನ್ನು ಪಡೆಯಲು ಬಯಸಿತು. ಆದರೆ ರಷ್ಯಾ ಸಹ ಕೊರಿಯಾದಲ್ಲಿ ಆಸಕ್ತಿಯನ್ನು ತೊರಿಸಿದಾಗ ಪರಿಸ್ಥಿತಿ ಗಂಭೀರವಾಯಿತು. ಜಪಾನ್ ಕೊರಿಯಾದಲ್ಲಿ ತನ್ನ ಹೆಚ್ಚುತ್ತಿದ್ದ ಜನಸಂಖ್ಯೆಯನ್ನು ನೆಲೆಗೊಳಿಸಲು ಆಲೋಚಿಸಿತು. ಲೂಚೂ ದ್ವೀಪಗಳ ಮೇಲಿನ ಅಧಿಕಾರ ವ್ಯಾಪ್ತಿಯ ಬಗ್ಗೆ ಎರಡು ದೇಶಗಳ ನಡುವೆ ತಿಕ್ಕಾಟ ಪ್ರಾರಂಭವಾಯಿತು. ಆದರೆ ಬ್ರಿಟನ್ನಿನ ಮಧ್ಯಪ್ರವೇಶದಿಂದ ನಿಜವಾದ ಘರ್ಷಣೆಯನ್ನು ತಪ್ಪಿಸಲಾಯಿತು. ಈ ಘಟನೆಯಿಂದ ಚೀನಾದ ರಾಜತಂತ್ರಜ್ಞರು ಚೀನಾದಲ್ಲಿ ಜಪಾನಿನ ಅಭಿಲಾಷೆಗಳನ್ನು ಅರ್ಥಮಾಡಿಕೊಂಡರು. 19ನೇ ಶತಮಾನದ ವ್ಯಾಪಾರ ದಲ್ಲಿ ಕೊರಿಯಾ, ಚೀನಾ ಮತ್ತು ಜಪಾನ್‌ಗಳೆರಡಕ್ಕೂ ವಿಶೇಷ ಪ್ರಾಮುಖ್ಯತೆಯುಳ್ಳದಾಗಿದ್ದಿತು. ವಿಶೇಷವಾಃ ಕೊರಿಯಾದಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ರಷ್ಯಾ ಆಸಕ್ತಿಯನ್ನು ತೋರಿಸಲು ಪ್ರಾರಂಭಿಸಿದ್ದು ಜಪಾನನ್ನು ಚಿಂತೆಗೆ ಗುರಿ ಮಾಡಿತು. ಹೀಗೆ ಜಪಾನ್ ಚೀನಾ ಮತ್ತು ರಷ್ಯಾ, ಕೊರಿಯಾದ ಮೇಲೆ ಕಣ್ಣು ಹಾಗಿದ್ದಿವು. ಬಹುಶಃ ಜಪಾನ್ ಪ್ರಬಲ ರಾಷ್ಟ್ರವಾಗಿದ್ದ ರಷ್ಯಾದ ಪ್ರಭಾವಕ್ಕೊಳ್ಳಪಟ್ಟ ಕೊರಿಯಾಕ್ಕಿರಲೂ ಸ್ವತಂತ್ರ ಕೊರಿಯಾವನ್ನು ಅಪೇಕ್ಷಿಸಿತು. ಇದನ್ನು ಸಾಧಿಸಲು ಜಪಾನ್ ಕೊರಿಯಾದೊಂದಿಗೆ ಕಿಂಗ್‌ವಾ(1876) ಒಪ್ಪಂದವೆಂಬ ಒಂದು ಪ್ರತ್ಯೇಕ ಒಪ್ಪಂದವನ್ನು ಮಾಡಿಕೊಂಡು ಕೊರಿಯಾದಲ್ಲಿ ತನ್ನ ಪ್ರದೇಶದಾಚೆಗಿನ ಹಕ್ಕುಗಳನ್ನು ಪಡೆಯಿತು.

ಕೊರಿಯಾದ ವ್ಯವಹಾರಗಳಲ್ಲಿ ಜಪಾನ್ ಮತ್ತು ರಷ್ಯಾಗಳ ಹಿತಾಸಕ್ತಿಗಳ ಬೆಳವಣಿಗೆಯಿಂದ, ಕೊರಿಯಾ ಚೀನಾದ ಕೈತಪ್ಪಿ ಹೋಗುವ ಪರಿಸ್ಥಿತಿಯುಂಟಾಯಿತು. ಕೊರಿಯಾ ಮೇಲೆ ತನ್ನ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಲು ಚೀನಾ ಹೆಚ್ಚಿನ ಆಸಕ್ತಿ ತೋರದಿದ್ದುದೂ ಇದಕ್ಕೆ ಕಾರಣವಾಯಿತು. ಕೊರಿಯಾದ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕದಿರುವ ನೀತಿಯನ್ನು ಅನುಸರಿಸುವುದನ್ನು ಚೀನಾ ಮುಂದುವರಿಸಿತು. ಆದರೆ ಈಗ ಕೊರಿಯಾದ ವ್ಯವಹಾರಗಳಲ್ಲಿ ಪರಿಣಾಮಕಾರಿಯಾದ ಆಸಕ್ತಿ ವಹಿಸದಿರುವ ತನ್ನ ತಪ್ಪನ್ನು ಅರಿತುಕೊಂಡಿತು. ತಕ್ಷಣವೇ ಜಪಾನ್ ಕೊರಿಯಾನ್ನರನ್ನು ಚೀನಾದ ವಿರುದ್ಧ ಪ್ರಚೋದಿಸಲು ಪ್ರಾರಂಭಿಸಿತು. ಆದರೆ ಇದಕ್ಕೆ ಪ್ರತಿಯಾಗಿ ಚೀನೀಯರು ಜಪಾನಿಯರ ಚಟುವಟಿಕೆಳನ್ನು ವಿರೊಧಿಸುವಂತೆ ಕೊರಿಯಾನ್ನರನ್ನು ಮನವೊಲಿಸಿದರು ಮತ್ತು ಅವರು ಕೊರಿಯಾನ್ನರಿಗೆ ಸಕ್ರಿಯ ಬೆಂಬಲ ನೀಡಿದರು. ಆದರೆ ಪ್ರಗತಿಪರರು ಕೊರಿಯಾದಲ್ಲಿ ಜಪಾನಿನ ಮಾದರಿಯ ಸುಧಾರಣೆಗಳನ್ನು ಜಾರಿಗೆ ತರುವಂತೆ ಮತ್ತು ಅಗತ್ಯವಾದರೆ ಜಪಾನಿಯರನ್ನು ಕೊರಿಯಾಕ್ಕೆ ಆಹ್ವಾನಿಸುವಂತೆ ಒತ್ತಾಯಿಸಿದರು.

ಕೊರಿಯಾದಲ್ಲಿ ಶಾಂತಿ ನೆಲೆಸುವುದನ್ನು ನೋಡಲು ಜಪಾನಿಗೆ ಆಸಕ್ತಿಯಿರಲಿಲ್ಲ. ಆದ್ದರಿಂದ ಅದು ಕೊರಿಯಾದಲ್ಲಿ ಸಮಸ್ಯೆಗಳನ್ನು ಸೃಷ್ಟಿಸಲು ಪ್ರಾರಂಭಿಸಿತು. ಚೀನಾ ಮತ್ತು ಜಪಾನ್‌ಗಳ ನಡುವೆ ಯುದ್ಧ ಅನಿವಾರ್ಯವಾಯಿತು. ಅದರೆ ಅವರಲ್ಲಿ ಯಾರೂ ಯುದ್ಧಕ್ಕೆ ಸಿದ್ಧರಾಗಿಲಿಲ್ಲ. ಯುದ್ಧವನ್ನು ತಡೆಯಲು ಜಪಾನಿನ ರಾಜತಂತ್ರಜ್ಞನಾದ ಇಟೊ ಚೀನಾದೊಂದಿಗೆ ಯಾವುದಾದರೂ ಒಂದು ಒಪ್ಪಂದಕ್ಕೆ ಬರಲು ಪೀಕಿಂಗಿಗೆ ಹೋದನು. ಏಪ್ರಿಲ್ 18, 1885ರಂದು ಲಿ ಹುಂಗ್ ಚಂಗ್ ಮತ್ತು ಕೌಂಟ್ ಇಟೋನ ನಡುವೆ ಲಿ-ಇಟೋ ಒಡಂಬಡಿಕೆ ಏರ್ಪಟ್ಟಿತು. ಅದರಂತೆ ಚೀನಾಕ್ಕೆ ಕೊರಿಯಾದಲ್ಲಿ ವಿಶೇಶ ಹಕ್ಕುಗಳಿರಲಿಲ್ಲ ಮತ್ತು ಕೊರಿಯಾದಲ್ಲಿ ಚೀನಾದ ಸ್ವತಂತ್ರ ಕ್ರಮವನ್ನು ನಿರ್ಬಂಧಿಸಲಾಯಿತು. ಈಗ ಜಪಾನ್ ರಾಜತಾಂತ್ರಿಕವಾಗಿ ಮತ್ತು ತಾಂತ್ರಿಕವಾಗಿ ಅಪಾರ ಮುಂದಿದ್ದಿತು. ಚೀನಾ ಅತ್ಯಂತ ಅನಾನುಕೂಲಕರ ಸ್ಥಿತಿಯಲ್ಲಿಯೂ ಇದ್ದಿತು.

## 157.3 ಚೀನಾ-ಜಪಾನ್ ಘರ್ಷಣೆಗಳು 1894 ರಿಂದ 1905

1895ರವರೆಗೆ ಚೀನಾ-ಜಪಾನ್ ಸಂಬಂಧಗಳು ಕೊರಿಯಾದ ಸುತ್ತಲೂ ಹೆಣೆದುಕೊಂಡಿದ್ದವೆಂದು ಸುಲಭವಾಗಿ ಹೇಳಬಹುದು. ಕೊರಿಯಾ. ಚೀನಾ ಮತ್ತು ಜಪಾನ್‌ಗಳ ನಡುವೆ ವಿವಾದದ ವಸ್ತುವಾಗಿದ್ದು ಅಂತಿಮವಾಗಿ ಯುದ್ಧಕ್ಕೆ ಕಾರಣವಾಯಿತು ಮತ್ತು ಷಿಮನೋಸಕಿ ಒಪ್ಪಂದವು ಯುದ್ಧವನ್ನು ಕೊನೆಗೊಳಿಸಿತು. ಈ ಒಪ್ಪಂದವು ಜಪಾನಿನ ಘನತೆಯನ್ನು ಬಹಳವಾಗಿ ಹೆಚ್ಚಿಸಿತು ಮತ್ತು ಚೀನಾದ ಸ್ಥಾನವನ್ನು ಕೆಳಗಿಳಿಸಿತು.

1894ರಲ್ಲಿ ಕೊರಿಯಾ, ಜಪಾನ್ ಮತ್ತು ಚೀನಾಗಳಿಗೆ ಮಾತ್ರವೇ ಸಂಬಂದಿಸಿದ ಪ್ರಶ್ನೆಯಾಗಿರಲಿಲ್ಲ. ಅದು ಈಗಾಗಲೇ "ಒಂದು ಬಗೆಯ ಯೂರೋಪಿನ ರಾಷ್ಟ್ರಗಳ ಹಗೆತನದ ಮತ್ತು ದೂರದ ಏಷ್ಯಾದ ಶತ್ರುತ್ವದ ಕೇಂದ್ರ ಬಿಂದುವಾಗಿತ್ತು". ರಷ್ಯಾನ್ನರು ಕೊರಿಯಾದಲ್ಲಿ ಒಂದು ಮಂಜುಗಡ್ಡೆ ರಹಿತ ಬಂದರನ್ನು ಬಯಸಿದ್ದರು ಮತ್ತು ಬ್ರಿಟಿಷರು ಅದು ದೊರಕದಂತೆ ಮಾಡಲು ಧೃಡನಿರ್ಧಾರ ಮಾಡಿದ್ದರು. ಈ ಐರೋಪ್ಯ ರಾಷ್ಟ್ರಳ ಹಗೆತನದ ವಿರುದ್ಧ 1894ರ ಜಪಾನಿಯರ ನೀತಿಯನ್ನು ಆರಂಭಿಸಲಾಯಿತು. 1894ರ ವೇಳೆಗೆ ಕೊರಿಯಾದಲ್ಲಿ ಜಪಾನಿನ ರಾಜಕೀಯ ಸ್ಥಾನ ದುರ್ಬಲವಾಗಿತ್ತು. ಆದರೆ ಅದರ ಆರ್ಥಿಕ ಸ್ಥಾನ ಏಕಪ್ರಕಾರವಾಗಿ ಬಲವಾಗತೊಡಗಿತ್ತು (ಬೆಳೆಯತೊಡಗಿತು). ಕೊರಿಯಾದ ಶೇ. 90ರಷ್ಟು ವಿದೇಶೀ ವ್ಯಾಪಾರ ಜಪಾನಿನೊಂದಿತ್ತು. ಚೀನಾ, ಜಪಾನಿನ ಆರ್ಥಿಕ ಮುನ್ನಡೆಯನ್ನು ಎದುರಿಸಲು ಪ್ರಯತ್ನಿಸಿತು. ರಷ್ಯಾ ಟ್ರಾನ್ಸ್- ಸೈಬೀರಿಯಾ ರೈಲು ಮಾರ್ಗವನ್ನು ನಿರ್ಮಿಸತೊಡಗಿತು. ಇದನ್ನು ಯಾರೋಪಿನಲ್ಲಿ ಒಂದು ಪ್ರಮುಖ ಘಟನೆಯೆಂದು ನೋಡತೊಡಗಲಾಯಿತು ಮತ್ತು ಚೀನಾ ಹಾಗೂ ಜಪಾನ್‌ಗಳು ಇದರಿಂದ ಬೆದರಿಕೆಗೊಳಗಾದವು. ಹೀಗೆ ಕೊರಿಯಾ ಒಂದು ಯೂರೋಸಿಯನ್ನರ ಸಮಸ್ಯೆಯಾಯಿತು.

ಮೂಲತಃ ಕೊರಿಯಾದ ಧಾರ್ಮಿಕ ಪಂಗಡವಾದ ಟಾಂಗ್ ಹಾಘ್ ( ಪೂರ್ವದ ಕಲಿಕಾ ಸಮಾಜ) ರಾಜಕೀಯ ರೂಪವನ್ನು ಪಡೆದುಕೊಂಡಿತು. ರಾಜಕೀಯ ತುಳಿತಕ್ಕೊಳಗಾದವರನ್ನು ಅದು ತನ್ನ ಸದಸ್ಯರನ್ನಾಗಿ ಮಾಡಿಕೊಂಡಿತು ಮತ್ತು ವಿದೇಶೀ ವಿರೋಧಿ ಹಾಗೂ ಕ್ರೈಸ್ತ ವಿರೋಧಿ ಕಾರ್ಯಕ್ರಮವನ್ನು ಅಳವಡಿಸಿಕೊಂಡಿತು. ಪರಿಣಾಮವಾಗಿ ದಂಗೆಯುಂಟಾಯಿತು. ಗಲಭೆಗಳನ್ನು ಹತ್ತಿಕ್ಕಲು ಕೊರಿಯಾದ ಸರ್ಕಾರ ಸೇನೆಯನ್ನು ಕಳುಹಿಸಿತು ಆದರೆ ಸೋಲನ್ನನುಭವಿಸಿತು. ಸೈನ್ಯದ ಸಹಾಯವನ್ನು ನೀಡುವಂತೆ ಕೊರಿಯಾ ಚೀನಾಕ್ಕೆ ಮನವಿ ಮಾಡಿಕೊಂಡಿತು. ಚೀನಾ ಪ್ರಾಮಾಣಿಕವಾಗಿ ಜುಲೈ1894ರಲ್ಲಿ ತನ್ನ ಪಡೆಗಳನ್ನು ಕೊರಿಯಾಕ್ಕೆ ಕಳುಹಿಸಿಕೊಟ್ಟಿತು. ಜಪಾನ್ ಹೊಸ ಅಪಾಯದ ಕಡೆಗೆ ತನ್ನ ಕಣ್ಣು ತೆರೆಯಿತು. ಆದೂ ಸಹ ಗಂಭೀರ ಪರಿಸ್ಥಿತಿ ಉದ್ಭವಿಸಬಾರದೆಂಬ ಮನವಿಯ ಮೇರೆಗೆ ತನ್ನ ಪಡೆಗಳನ್ನು ಕೊರಿಯಾಕ್ಕೆ ಕಳುಹಿಸಿತು. ಚೀನಾದ ಮತ್ತು ಜಪಾನಿನ ಪಡೆಗಳು ಕೊರಿಯಾಕ್ಕೆ ಬರುವ ಹೊತ್ತಿಗಾಗಲೇ ಕೊರಿಯಾನ್ನರು ದಂಗೆಯನ್ನು ಅಡಗಿಸಿದ್ದರು. ಈಗ ಕೊರಿಯಾದಲ್ಲಿ ಹಣಕಾಸಿನ ಆಡಳಿತದ ಮತ್ತು ಸೈನಿಕ ಸುಧಾರಣೆಗಳನ್ನು ಜಾರಿಗೆ ತರಲು ಚೀನಾ-ಜಪಾನ್ ಜಂಟಿ ಕ್ರಮಕ್ಕೆ ಜಪಾನ್ ಸಲಹೆ ಮಾಡಿತು. ಕೊರಿಯಾದ ಆಂತರಿಕ ಆಡಳಿತದಲ್ಲಿ ತಾನು ತಲೆ ಹಾಕುವುದಿಲ್ಲವೆಂದು ಚೀನಾ ಉತ್ತರಿಸಿತು ಮತ್ತು ಹಾಗೆ ಮಾಡಲು ಜಪಾನಿಗೂ ಹಕ್ಕಿಲ್ಲವೆಂದು ಹೇಳಿತು. ಕೊರಿಯಾ ಚೀನಾದ ಅಧೀನ ರಾಜ್ಯವೇ ಎಂಬ ಬಗ್ಗೆ ಘೋಷಣೆಯನ್ನು ಹೊರಡಿಸುವಂತೆ ಜಪಾನ್ ಕೊರಿಯಾ ಸರ್ಕಾರವನ್ನು ಒತ್ತಾಯಿಸಿತು. ಇದಕ್ಕೆ ಕೊರಿಯಾದ ಉತ್ತರ ತೃಪ್ತಿಕರವಾಗಿಲ್ಲದಿದ್ದುದರಿಂದ, ಜಪಾನಿನ ಪಡೆಗಳು ಕೊರಿಯಾದ ರಾಜನನ್ನು ಬಂಧಿಸಿ ಚೀನಾದ ಪಡೆಗಳನ್ನು ಕೊರಿಯಾದಿಂದ ಹೊರ ಹಾಕುವಂತೆ ಆಜ್ಞಾಪಿಸಿದವು. ಹೀಗೆ ಚೀನಾ- ಜಪಾನ್ ಯುದ್ಧ ಆರಂಭವಾಯಿತು. ಈ ಯುದ್ಧದಲ್ಲಿ ಚೀನಾ ಸೋತು ಹೋಯಿತು ಮತ್ತು ಏಪ್ರಿಲ್ 17, 1895ರಂದು ಏರ್ಪಟ್ಟ ಷಿಮನೋಸಕಿ ಒಪ್ಪಂದದಿಂದ ಯುದ್ಧ ಕೊನೆಗೊಂಡಿತು.

ಈ ಒಪ್ಪಂದದಿಂದ ಚೀನಾ ಕೊರಿಯಾದ ಸಂಪೂರ್ಣ ಸ್ವಾತಂತ್ರವನ್ನು ಮಾನ್ಯ ಮಾಡಬೇಕಾಯಿತು. ಚೀನಾ ದಕ್ಷಿಣ ಮಂಚೂರಿಯಾದಲ್ಲಿ ಪೆಸ್ಕಡೋರಸ್ ಮತ್ತು ಲಿಯೋತುಂಗ್ ಪರ್ಯಾಯ ದ್ವೀಪವನ್ನು ಜಪಾನಿಗೆ ಬಿಟ್ಟುಕೊಡಬೇಕಾಯಿತು. ಅಲ್ಲದೇ ಚೀನಾ ಜಪಾನಿಗೆ ಅಪಾರ ಮೊತ್ತದ ಯುದ್ಧ ಪರಿಹಾರವನ್ನು ಕೊಡಬೇಕಾಯಿತು. ಆದರೆ ಮೂರು ರಾಷ್ಟ್ರಗಳಿಂದ ರಷ್ಯಾ ಫ್ರಾನ್ಸ್ ಮತ್ತು ಜರ್ಮನಿಗಳು ಜಪಾನಿಗೆ ಈ ಪ್ರತಿಫಲವನನು ಅನುಭವಿಸಲು ಬಿಡಲಿಲ್ಲ. ಅವು ಲಿಯೋತುಂಗ್ ಪರ್ಯಾಯ ದ್ವೀಪ ಮತ್ತು ಪೋರ್ಟ್ ಆರ್ಥರನ್ನು ಚೀನಾಕ್ಕೆ ಹಿಂದಿರುಗಿಸುವಂತೆ ಜಪಾನನ್ನು ಒತ್ತಾಯಿಸಿದ್ದವು. ಜಪಾನ್ ಯುದ್ಧದಿಂದ ಸಂಪೂರ್ಣವಾಗಿ ಬಲಹೀನವಾಗಿದ್ದಿರಿಂದ ಅವುಗಳ ಒತ್ತಾಡಕ್ಕೆ ಮಣಿಯಬೇಕಾಯಿತು. ಈ ಮೂರು ರಾಷ್ಟ್ರಗಳ ವಿರುದ್ಧ ಸೇಡುತೀರಿಸಿಕೊಳ್ಳಲು ಜಪಾನ್ ಇಂಗ್ಲೆಂಡ್‌ನೊಂದಿಗೆ 1902ರ ಆಂಗ್ಲೋ- ಜಪಾನ್ ಮೈತ್ರಿ ಒಪ್ಪಂದವನ್ನು ಮಾಡಿಕೊಂಡಿತು. ಈ ಮೈತ್ರಿಯು ಜಪಾನಿನ ಪ್ರತಿಷ್ಠೆಯನ್ನು ಹೆಚ್ಚಿಸುಮ ಮೂಲಕ ಅದು ವಿಸ್ತರಣಾ ನೀತಿಯನ್ನು ಮುಂದುವರಿಸಲು ಸಹಾಯಕವಾಯಿತು.

## 157.4 ಚೀನಾ-ಜಪಾನ್ ಸಂಬಂಧಗಳು 1905 ರಿಂದ 1922ರ ವರೆಗೆ

1905ರ ಯುದ್ಧದ ನಂತರ ಚೀನಾ- ಜಪಾನ್ ಸಂಬಂಧಗಳು ಕ್ರಮೇಣ ಹದಗೆಟ್ಟವು. ಜಪಾನ್ ಸಾಮ್ರಾಜ್ಯ ವಿಸ್ತರಣೆಯ ಮತ್ತು ಸಾಮ್ರಾಜ್ಯಷಾಹಿ ಶೋಷಣೆಯ ನೀತಿಯನ್ನು ಅನುಸರಿಸಿತು. ಪರಿಣಾಮವಾಗಿ ಜಪಾನ್ ಮಂಚೂರಿಯಾವನ್ನು ವಶಪಡಿಸಿಕೊಂಡಿತು ಮತ್ತು ಆ ದೇಶದಲ್ಲಿ ಒಂದು ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿತು. ಆದರೆ ಚೀನಾ ಅಧೀನ ಸ್ಥಾನವನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಪರಿಣಾಮವಾಗಿ ಜಪಾನ್ ಕಠಿಣ ಸಮಯವನ್ನು ಎದುರಿಸಬೇಕಾಯಿತು. ಅಂತಿಮವಾಗಿ, ಚೀನಾ, ಜಪಾನ್ ಘರ್ಷಣೆ ಸ್ಥಳೀಯ ವ್ಯವಹಾರಗಳಲ್ಲಿ ವಿಶ್ವದ ರಾಷ್ಟ್ರಗಳ ಭಾಗವಹಿಸುವಿಕೆಯ ಒಂದು ಭಾಗವಾಗಿ ಎರಡನೇ ಮಹಾಯುದ್ಧದವರೆಗೂ ಮುಂದುವರಿಯಿತು.

1905ರಲ್ಲಿ ಪೂರ್ವದಲ್ಲಿ ಜಪಾನ್ ಪ್ರಬಲ ರಾಷ್ಟ್ರವಾಗಿ ಬೆಳೆದುದು ಖರ್ಚಿವಾಯಿತು. ಪಾಶ್ಚಿಮಾತ್ಯ ಸಾಮ್ರಾಜ್ಯಷಾಹಿವಾದಿಗಳು ಮತ್ತು ಬರೆಯುತ್ತಿದ್ದ ವ್ಯಾಪಾರ ಮತ್ತು ವಾಣಿಜ್ಯಗಳ ಅಗತ್ಯದಿಂದ ಜಪಾನ್ ಪೂರ್ವದಲ್ಲಿ ಪ್ರಾಮುಖ್ಯತೆಗೆ ಬಂದಿತು. ಇದರೊಂದಿಗೆ ಚೀನಾಗ ಮೇಲೆ ಪ್ರಾಬಲ್ಯವನ್ನು ಸ್ಥಾಪಿಸುವ ಅದರ ಪ್ರಯತ್ನಗಳು ಹೆಚ್ಚಿದವು. 1905ರಿಂದ 1922ರವರೆಗಿನ ಕಾಲವು ಚೀನಾದ ಹದಗಿಟ್ಟ ಅಲ್ಲೋಲಕಲ್ಲೋಲ ವ್ಯವಸ್ಥೆಯ ಮೇಲೆ ಸವಾಗಿ ಮಾಡುವ ಜಪಾನಿನ ಪ್ರಯತ್ನಗಳ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಜಪಾನಿನ ಇಂತಹ ಆಕ್ರಮಣಕಾರಿ ಯೋಜನೆಗಳನ್ನು ತಡೆಯುವ ಪ್ರಬಲ ರಾಷ್ಟ್ರಗಳ ಪ್ರಯತ್ನದ ಕಾಲವಾಗಿತ್ತು.

ಚೀನಾದ ಅವಿಭಾಜ್ಯ ಭಾಗವಾಗಿದ್ದ ಮಂಚೂರಿಯಾ ಜಪಾನಿನ ಹಿತಾಸಕ್ತಿಯ ಎರಡನೇ ಬಹುದೊಡ್ಡ ಪ್ರದೇಶವಾಗಿತ್ತು. 1904-05ರ ರಷ್ಯ- ಜಪಾನ್ ಯುದ್ಧ ಆರಂಭವಾಗುವುದಕ್ಕೆ ಬಹಳ ಹಿಂದಿನಿಂದಲೇ ಜಪಾನ್ ಮಂಚೂರಿಯಾದ ಮೇಲೆ ದುರಾಸೆಯ ಕಣ್ಣಿಟ್ಟಿದ್ದಿತು. ಆದರೆ ಯುದ್ಧದ ನಂತರ ಮಂಚೂರಿಯಾದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಜಪಾನಿಗೆ ಅವಕಾಶ ದೊರೆಯಿತು. ಜಪಾನ್ ಪೋರ್ಟ್ಸ್‌ಮೌತ್ ಒಪ್ಪಂದದಲ್ಲಿ ಚೀನಾದ ಪ್ರದೇಶಿಕ ಸಮಗ್ರತೆಯನ್ನು ಗೌರವಿಸಿವ ಭರವಸೆಯನ್ನು ನೀಡಿತ್ತಾದರೂ ಅದು ತನ್ನ ಭರವಸೆಯನ್ನು ಉಳಿಸಿಕೊಳ್ಳಲಿಲ್ಲ. ಈ ಒಪ್ಪಂದದಲ್ಲಿ ಚೀನಾ ಒಪ್ಪಂದವನ್ನು ಅನುಮೋದಿಸಿದರೆ ದಕ್ಷಿಣ ಮಂಚೂರಿಯಾದಲ್ಲಿ ರೈಲು ಮಾರ್ಗವನ್ನು ನಿರ್ಮಿಸುವ ಹಕ್ಕನ್ನು ರಷ್ಯ ಜಪಾನಿಗೆ ವರ್ಗಾಯಿಸಲು ಅವಕಾಶ ಕಲ್ಪಿಸಲಾಗಿತ್ತು. ಪೋರ್ಟ್ಸ್ ಮತ್ ಒಪ್ಪಂದದ ನಂತರ ಜಪಾನ್ ದಕ್ಷಣ ಮಂಚೂರಿಯಾದಲ್ಲಿ ರೈಲು ಮಾರ್ಗವನ್ನು ನಿರ್ಮಿಸುವ ಬಗ್ಗೆ ಡಿಸೆಂಬರ್20, 1905ರಂದು ಚೀನಾದೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು.

ಜಪಾನಿನ ವಿದೇಶಾಂಗ ಮಂತ್ರಿ ಬರೂನ್ ಕೊಮಾರ ಪೀಕಿಂಗ್‌ನಲ್ಲಿ ಅಧ್ಯಕ್ಷ ಯುವಾನ್ ಷಿಕಾಯ್‌ನೊಂದಿಗೆ ಮಾತುಕತೆಗಳನ್ನು ನಡೆಸಿ ಅಂತಿಮವಾಗಿ ದಕ್ಷಿಣ ಮಂಚೂರಿಯಾದಲ್ಲಿ ರೈಲು ಮಾರ್ಗವನ್ನು ನಿರ್ಮಿಸುವ ಹಕ್ಕುನ್ನು ರಷ್ಯಾದಿಂದ ಜಪಾನಿಗೆ ಒರ್ಗಾಯಿಸಲು ಚೀನಾದ ಒಪ್ಪಿಗೆಯನ್ನು ಪಡೆದನು. ಹೆಚ್ಚುವರಿ ಒಪ್ಪಂದವೊಂದರ ಮೂಲಕ ಜಪಾನ್ ಚೀನಾದಿಂದ ಮತ್ತೊಂದು ಅನುಮತಿಯನ್ನು ಪಡೆಯಿತು. ಈ ಹೆಚ್ಚುವರಿ ಒಪ್ಪಿಗೆಯಂತೆ ಅದು ಚೀನಾದಿಂದ ಕ್ವಾಂಟುಂಗ್‌ನಿಂದ ಮುಖ್‌ದೇನೇವರೆಗಿನ ಸೈನಿಕ ರೈಲು ಮಾರ್ಗವನ್ನು ನಿರ್ವಹಿಸುವ ಹಕ್ಕನ್ನು ಪಡೆಯಿತು. ಇದು ಮಂಚೂರಿಯಾದ ಮೇಲೆ ತನ್ನ ಹಿಡಿತವನ್ನು ಬಲಪಡಿಸಿಕೊಳ್ಳಲು ಜಪಾನಿಗೆ ಸಾಕಷ್ಟು ಅವಕಾಶ ನೀಡಿತು. ಯಾಲೂ ನದಿಯ ಮೇಲಿನ ಸಂಮೃದ್ಧ ಅರಣ್ಯ ಸಂಪತ್ತನ್ನು ಶೋಕ್ಷಿಸಲು ಚೀನಾ-ಜಪಾನ್ ಸಹಕಾರವನ್ನು ಏರ್ಪಡಿಸಿಕೊಳ್ಳಲು ಅವಕಾಶ ನೀಡಲಾಯಿತು ಮತ್ತು ಆ ಮೂಲಕ ಲಾಭದಾಯಕ ಮರದ ದಿಮ್ಮಿಗಳ ಅನುಕೂಲಗಳನ್ನು ಪಡೆದುಕೊಂಡಿತು.

ಜಪಾನಿನ ಈ ಎಲ್ಲಾ ಲಾಭ ಸಂಪಾಧನೆಗಳು ಮಂಚೂರಿಯಾದ ಮೇಲೆ ತನ್ನ ಹಿಡಿತವನ್ನು ಬಲಪಡಿಸಲು ಅದಕ್ಕೆ ಸಹಾಯಕವಾದವು. ಚೀನಾದ ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸುವ ಸುಳ್ಳು ಭರವಸೆಯೊಂದಿಗೆ ಜಪಾನ್ ನಿಧಾನವಾಗಿ ಆದರೆ ನಿರಂತರವಾಗಿ ಚೀನಾವನ್ನು ಆ ಪ್ರದೇಶದಲ್ಲಿ ಪ್ರಾದೇಶಿಕವಾಗಿ ಮತ್ತು ಆರ್ಥಿಕವಾಗಿ ಶೋಷಿಸಿತು.

## 157.4.1 ಮೊದಲನೆ ಮಹಾಯುದ್ಧದಲ್ಲಿ ಜಪಾನ್

1914ರಲ್ಲಿ ಮೊದಲನೆ ಮಹಾಯುದ್ಧದ ಆರಂಭದೊಂದಿಗೆ ತನ್ನ ಸಾಮ್ರಾಜ್ಯಷಾಹಿ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಜಪಾನಿಗೆ ಒಂದು ಉತ್ತಮ ಅವಕಾಶ ಒದಗಿಬಂದಿತು. ಯೂರೋಪಿನ ರಾಷ್ಟ್ರಗಳು ಯುದ್ಧದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿದ್ದುದರಿಂದ ಉಂಟಾಗಿದ್ದ ಪರಿಸ್ಥಿತಿಯ ಪೂರ್ಣಲಾಭವನ್ನು ಜಪಾನ್ ಸಾಮಾನ್ಯವಾಗಿ ಪೂರ್ವಏಷ್ಯಾದಲ್ಲಿ ಮತ್ತು ವಿಶೇಷವಾಗಿ ಚೀನಾದಲ್ಲಿ ತನ್ನ ಅಧಿಕಾರವನ್ನು ವಿಸ್ತರಿಸಲು ಮತ್ತು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಬಳಸಿಕೊಂಡಿತು. ಆಗಸ್ಟ್ 23,1914ರಂದು ಜಪಾನ್ ಜರ್ಮನಿಯ ಮೇಲೆ ಯುದ್ಧವನ್ನು ಘೋಷಿಸಿತು. ತಕ್ಷಣವೇ ಮರಿಯನ್, ಕರೋಲಿನ ಮತ್ತು ಮಾರ್ಷಲ್ ದ್ವೀಪಗಳು ಸೇರಿದಂತೆ ಪೆಸಿಫಿಕ್ ಪ್ರದೇಶದ ಜಮರ್ನಿಯ ಸೊತ್ತುಗಳನ್ನು ವಶಪಡಿಸಿಕೊಳ್ಳಲು ಜಪಾನಿನ ಪಡೆಗಳನ್ನು ಕಳುಹಿಸಲಾಯಿತು. ನಂತರ ಕ್ಷಾಂಟುಂಗ್‌ನಲ್ಲಿ ಜರ್ಮನಿಯ ಸೋತ್ತುಗಳನ್ನು ವಶಪಡಿಸಿಕೊಳ್ಳಲು ಜಪಾನಿನ ಸೇನಾ ಪಡೆಗಳು ಚೀನಾಕ್ಕೆ ಬಂದಿಳಿದವು. ಟ್ಸಿಂಗ್ ಟಾವೋ ಬಂದರು ಮತ್ತು ಕಿಯಾಚೌ ಸೇರಿದಂತೆ ಕಿಯಾಚೌ ಸುತ್ತಲಿನ ಪ್ರದೇಶವನ್ನು ಜಪಾನ್ ವಶಪಡಿಸಿಕೊಳ್ಳುವ ಉದ್ದೇಶವನನು ಹೊಂದಿದ್ದಿತು. ಟ್ಸಿಂಗ್‌ಟಾಮವೋಟ್ಸಿನಾನ್ ರೈಲುಮಾರ್ಗವೂ ಸೇರಿದಂತೆ ಕ್ಷಾಂಟುಂಗ್‌ನಲ್ಲಿ ಜರ್ಮನಿಯ ಎಲ್ಲಾ ಆಸ್ತಿಪಾಸ್ತಿಗಳನ್ನು ಜಪಾನ್ ವಶಪಡಿಸಿಕೊಂಡಿತು. ಆದರೆ ಜಪಾನಿನ ಈ ಚಟುವಟಿಗೆಗಳಲ್ಲಿ ಚೀನಾ ಒಪ್ಪಲಿಲ್ಲ. ಟ್ಸಿಂಗ್‌ಟಾವೊ-ಟ್ಸಿನಾನ್ ರೈಲ್ವೆ ವಲಯದಿಂದ ಹಿಂದೆ ಸರಿಯುವಂತೆ ಚೀನಿಯು ಜಪಾನಿಯರನ್ನು ಕೇಳಿಕೊಂಡರು. ಜಪಾನ್ ಹಾಗೆ ಮಾಡಲು ನಿರಾಕರಿಸಿತು. ಹೀಗೆ ಜಪಾನ್ ಅಮೇರಿಕಾದ ತೆರೆದ ಬಾಗಿಲು ನೀತಿಯನ್ನು ಉಲ್ಲಂಘಿಸಿತು ಮತ್ತು ಚೀನಾದ ಪ್ರಾದೇಶಿಕ ಸಮಗ್ರತೆಗೆ ಧಕ್ಕೆಯುಂಟು ಮಾಡಿತು.

## 157.4.2. ಇಪ್ಪತ್ತೊಂದು ಬೇಡಿಕೆಗಳು, 1915

1915ರಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಬೃಹತ್ ಹೋರಾಟದ ಹಿಡಿತಕ್ಕೆ ಸಿಲುಕಿದ್ದವು ಮತ್ತು ಪೂರ್ವ ಏಷ್ಯಾದ ವ್ಯವಹಾರಗಳ ಕಡೆಗೆ ತಮ್ಮ ಗಮನವನ್ನು ಹರಿಸಲು ಸಾಧ್ಯವಾಗದಷ್ಟು ಯುದ್ಧದಲ್ಲಿ ತಲ್ಲೀನವಾಗಿದ್ದವು. ಜಪಾನಿನ ಸಾಮ್ರಾಜ್ಯಷಾಹಿ ನೀತಿಯು ತನ್ನ ಅತ್ಯಂತ ಕೆಟ್ಟ ರೀತಿಯಲ್ಲಿ ವ್ಯಕ್ತವಾಯಿತು. ಜನವರಿ, 18, 1915ರಂದು ಜಪಾನಿನ ಮಂತ್ರಿ ಹಿಯೊರಿಯು ಚೀನಾದ ಅಧ್ಯಕ್ಷ ಯುವಾನ್ ಷಿಕಾಯ್‌ನೊಂದಿಗೆ ಖಾಸಗಿ ಸಂದರ್ಶನವನ್ನು ಪಡೆದು ಪ್ರಸಿದ್ಧ ಇಪ್ಪತ್ತೊಂದು ಬೇಡಿಕೆಗಳನ್ನು ಮಂಡಿಸಿದನು. ಬೇಡಿಕೆಗಳ ಬಗ್ಗೆ ರಹಸ್ಯವನ್ನು ಕಾಪಾಡುವಂತೆ ಚೀನಾದ ಅಧ್ಯಕ್ಷನನ್ನು ಕೇಳಿಕೊಳ್ಳಲಾಯಿತು. ಬೇಡಿಕೆಗಳ ಬಗ್ಗೆ ಚರ್ಚೆಗೆ ಅವಕಾಶವಿಲ್ಲವೆಂದೂ ಮತ್ತು ಅವುಗಳನ್ನು ತಡಮಾಡದೆ ಸಂಪೂರ್ಣವಾಗಿ ಒಪ್ಪಿಕೊಳ್ಳವಂತೆ ಚೀನಾದ ಅಧ್ಯಕ್ಷನಿಗೆ ತಿಳಿಸಲಾಯಿತು. ಅಧ್ಯಕ್ಷ ಯುವಾನ್ ಷಿಕಾಯಿಯ ಮೇಲೆ ಸಾಧ್ಯವಾದ ಎಲ್ಲಾ ಒತ್ತಾಡವನ್ನು ಹೇರಲಾಯಿತು. ಮೊದಲನೆಯದಾಗಿ ಬೇಡಿಕೆಗಳು ಈಡೇರದಿದ್ದಲ್ಲಿ ಜಪಾನ್ ಸೇನಾ ಆಕ್ರಮಣವನ್ನು ನಡೆಸುವ ಸಾಧ್ಯತೆಗಳ ಬಗ್ಗೆ ನಿರಂತರವಾಗಿ ಒತ್ತಿ ಹೇಳಲಾಗಿದ್ದಿತು. ಎರಡನೆಯದಾಗಿ, ಜಪಾನಿನಲ್ಲಿ ಕೇಂದ್ರೀಕೃತವಾಗಿರುವ ಯುವಾನ್ ವಿರೋಧಿ ಶಕ್ತಿಗಳಿಗೆ ಅವನ ಆಳ್ವಿಕೆಯ ವಿರುದ್ಧ ತೊಂದರೆಯನ್ನು ಹುಟ್ಟುಹಾಕಲು ಎಲ್ಲಾ ನೆರವನ್ನು ಜಪಾನ್ ನೀಡುವುದೆಂದು ತಿಳಿಸಲಾಯಿತು. ಮೂರನೆಯದಾಗಿ. ಯುವಾನ್ ಜಪಾನಿನ ಬೇಡಿಕೆಗಳನ್ನು ಒಪ್ಪಿಕೊಂಡಲ್ಲಿ ಜಪಾನಿನ ಸರ್ಕಾರವು ಚೀನಾದಲ್ಲಿ ಯುವಾನನ ರಾಜಪ್ರಭುತ್ವವನ್ನು ಸ್ಥಾಪಿಸಲು ನೆರವು ನೀಡುವುದಾಗಿ ತಿಳಿಸಿತು. ಹೀಗೆ ಜಪಾನ್ ಚೀನಾದ ಅಸ್ತಿತ್ವ ಮತ್ತು ಯುವಾಮಮ ಆಳ್ವಿಕೆಗೆ ಬೆದರಿಕೆಯುಂಟುಮಾಡಿತು. ಇದೇ ವೇಳೆಗೆ ಯುವಾನನ ವೈಯಕ್ತಿಕ ಮತ್ತು ಕುಟುಂಬದ ಪ್ರತಿಷ್ಠೆಯನ್ನು ಹೆಚ್ಚಿಸಲು ಬೆಂಬಲ ನೀಡುವ ಆಮಿಷವನ್ನು ಒಡ್ಡಿತು, ಮೇ 7, 1915ರಂದು 24 ಘಂಟೆಗಳೊಂದಾಗಿ ಬೇಡಿಕೆಗಳನ್ನು ಒಪ್ಪಿಕೊಳ್ಳವಂತೆ ಚೀನಾಕ್ಕೆ ಅಂತಿಮ ಗಡುವನ್ನು ನೀಡಲಾಯಿತು. ಹೀಗೆ ಬಹುತೇಕ (ಬೆದರಿಕೆಯಿಂದಾಗಿ) ಬಂದೂಕದ ತುದಿಯಲ್ಲಿ ಚೀನಾ ಜಪಾನಿನ ಹೆಚ್ಚಿನ ಬೇಡಿಕೆಗಳನ್ನು ಒಪ್ಪಿಕೊಂಡಿತು.

ಜಪಾನ್ ಚಾಣಾಕ್ಷತನದಿಂದ ಬ್ರಿಟನ್, ಫ್ರಾನ್ಸ ಮತ್ತು ಇಟಲಿಗಳೊಂದಿಗೆ ಅನೇಕ ಒಪ್ಪಂದಗಳನ್ನು ಮಾಡಿಕೊಂಡಿತು. ಈ ಒಪ್ಪಂದಗಳ ಬಲದಿಂದ ಅದು ಕ್ಷಾಂಟುಂಗ್ ಮತ್ತು ಪೆಸಿಫಿಕ್ ದ್ವೀಪಗಳಲ್ಲಿ ಜರ್ಮನಿಯ ಎಲ್ಲಾ ಆಸ್ತಿಪಾಸ್ತಿಗಳ ಮೇಲೆ ತನ್ನ

ಹಕ್ಕನ್ನು ಮುಂದಿಟ್ಟಿತು. ಆದರೆ ಚೀನಾದಲ್ಲಿದ್ದ ಜರ್ಮನಿಯ ಎಲ್ಲಾ ಮೊದಲಿನ ಆಸ್ತಿಪಾಸ್ತಿಗಳನ್ನು ತಮಗೆ ಹಿಂದಿರುಗಿಸುವಂತೆ ಚೀನಾ ಶಾಂತಿ ಸಮ್ಮೇಳನದಲ್ಲಿ ಯೂರೋಪಿನ ರಾಷ್ಟ್ರಗಳಿಗೆ ಮನವಿ ಮಾಡಿಕೊಂಡಿತು. ಆದರೆ ಅಮೇರಿಕಾ ಸೇರಿದಂತೆ .ಯೂರೋಪಿನ ಎಲ್ಲಾ ರಾಷ್ಟ್ರಗಳು ಜಪಾನಿನ ಪಕ್ಕನ್ನು ಬೆಂಬಲಿಸಿದ್ದವು. ಜಪಾನನ್ನು ರಾಷ್ಟ್ರಗಳ ಒಕ್ಕೂಟ ಸಂಘದ ಭದ್ರತಾ ಸಮಿತಿಯ ಐದು ಖಾಯಂ ಸದಸ. ರಾಷ್ಟ್ರಗಳಲ್ಲಿ ಒಂದನ್ನಾಗಿ ಮಾಡಲಾಯಿತು. ಮತ್ತು ಅಧಿಕೃತವಾಗಿ ವಿಶ್ವದ ಒಂದು ಪ್ರಬಲ ರಾಷ್ಟ್ರವೆಂದು ಗುರುತಿಸಲಾಯಿತು.

ಚೀನಾ-ಜಪಾನ್ ಸಂಬಂಧಗಳಲ್ಲಿ ಮತ್ತೊಂದು ಪ್ರಮುಖ ಘಟನೆಯೆಂದರೆ 1922ರ ವಾಷಿಂಗ್‌ಟನ್ ಸಮ್ಮೇಳನ . ಈ ಸಮ್ಮೇಳನವನ್ನು ಅಮೇರಿಕಾದ ಅಪೇಕ್ಷೆಯ ಮೇರೆಗೆ ಮತ್ತು ಬ್ರಿಟನ್ನಿನ ಬೆಂಬಲದಿಂದ ಆಂಗ್ಲೋ-ಜಪಾನ್ ಮೈತ್ರಿ ಒಪ್ಪಂದದಿಂದ ಗೌರವಯುತವಾಗಿ ಹೊರಬರಲು ಕರೆಯಲಾಗಿತ್ತು. ವಾಷಿಂಗ್‌ಟನ್ ಸಮ್ಮೇಳನವು ಒಲ್ಲದ್ದ ಮನಸ್ಸಿನಲ್ಲಿ ಪೂರ್ವ ಏಷ್ಯಾದಲ್ಲಿ ಜಪಾನಿನ ಬಲವನ್ನು ಹೆಚ್ಚಿಸಿತು. ಸಮ್ಮೇಳನವು ನಿಗದಿಪಡಿಸಿದ ನೌಕಾ ಪ್ರಮಾಣದ ಜೊತೆಗೆ ತಮ್ಮ ಪೆಸಿಫಿಕ್ ದ್ವೀಪಗಳನ್ನು ಕೋಟೆಗಳಿಂದ ಭದ್ರಪಡಿಸುವುದಿಲ್ಲವೆಂಬ ಯೂರೋಪಿನ ರಾಷ್ಟ್ರಗಳ ಭರವಸೆ, ತನ್ನ ಸಾಮ್ರಾಜ್ಯಷಾಹಿ ಹಿತಾಸಕ್ತಿಗಳ ವಲಯದಲ್ಲಿ ಜಪಾನಿಗೆ ಪ್ರಬಲ ಸ್ಥಾನವನ್ನು ನೀಡಿತು.

## 157.5 ಚೀನಾ-ಜಪಾನ್ ಸಂಬಂಧಗಳು. 1922 ರಿಂದ 1931

ಜಪಾನ್ ಮತ್ತು ಸೋವಿಯತ್ ರಷ್ಯಗಳ ನಡುವೆ ಎಂದಿನ ರಾಜತಾಂತ್ರಿಕ ಸಂಬಂಧಗಳು ಪುನರ್ ಸ್ಥಾಪಿಸಲ್ಪಟ್ಟ ಕಾಲದಲ್ಲಿಯೇ ಚೀನಾ-ಜಪಾನಿನ ವ್ಯವಹಾರಗಳಲ್ಲಿಯೂ ಉತ್ತಮ ಭವಿಷ್ಯದ ಬೆಳವಣಿಗೆ ಕಂಡುಬಂಡಿತು. 1922-31ರ ದಶಕದ ಬಹು ಭಾಗದಲ್ಲಿ ಜಪಾನಿನ ವಿದೇಶಾಂಗ ನೀತಿಯು ವೃತ್ತಿಪರ ರಾಜತಂತ್ರಜ್ಞ ಬರೋನ್ ಷಿದೆಹರದ ವ್ಯಕ್ತಿತ್ವ ಮತ್ತು ತತ್ವಗಳಿಂದ ಪ್ರಭಾವಿತವಾಗಿತ್ತು. ಅವನು ರಾಷ್ಟ್ರಗಳ ಒಕ್ಕೂಟ ಸಂಘದ ಸದಸ್ಯತ್ವದ ಸಂಬಂಧದಲ್ಲಿ ಜಪಾನಿನ ವ್ಯಾಪಾರ ಮತ್ತು ಕೈಗಾರಿಕೆಯ ವಿಸ್ತರಣೆ ನೌಕಾ ಸಿದ್ಧತೆಯ ನಿರ್ಬಂಧ ಮತ್ತು ದಕ್ಷಿಣ ಮಂಚೂರಿಯಾದಲ್ಲಿ ಚೀನಾದ 'ಜೀವನ ರೇಖೆ'ಯೊಂದಿಗೆ ರಾಜಿ ಹಾಗೂ ಹೊಂದಾಣಿಕೆಯ ನೀತಿಯ ಅಭಿವೃದ್ಧಿ ಮುಂತಾದ ವಿಷಯಗಳ ವಕ್ತಾರನಾಗಿದ್ದನು. 1924ರಿಂದ 1927ರವರೆಗೆ ಮತ್ತು 1929ರಿಂದ 1931ರವರೆಗೆ ಅವನು ವಿದೇಶಾಂಗ ಮಂತ್ರಿಯಾಗಿದ್ದಾಗ, ಷಿದಹರನು ಸಾಮಾನ್ಯವಾಗಿ 'ಷಿದೆಪರನ ನೀತಿ' ಎಂದೇ ಪ್ರಸಿದ್ಧವಾಗಿದ್ದ ನೀತಿಯನ್ನು ಅನುಸರಿಸಿದನು. ಅವನು ಜನವರಿ 1927ರಲ್ಲಿ ಜಪಾನಿನ ಡಯಟ್‌ನ ಮುಂದೆ ತನ್ನ ನೀತಿಯನ್ನು ವಿವರಿಸಿದ್ದನು.

1. ಚೀನಾ ಸಾರ್ವಭೌಮಾಧಿಕಾರ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವುಸುವುದು
2. ಉಭಯ ದೇಶಗಳ ನಡುವೆ ಒಗಟ್ಟು ಮತ್ತು ಆರ್ಥಿಕ ಸಂಬಂಧಗಳ ಪುನರಾಂಭವನ್ನ ಪ್ರೋತ್ಸಾಹಿಸುವುದು.
3. ಚೀನಾದ ಜನತೆಯ ನ್ಯಾಯಯುತ ಬಯಕ್ಕೆಗಳನ್ನು ಸಹಾನುಭೂತಿಯಿಂದ ಮತ್ತು ಸಹಾಯಪೂರ್ವಕವಾಗಿ ಪರಿಣಿಸುವುದು .
4. ಪ್ರಸ್ತುತ ಸನ್ನಿವೇಶದಲ್ಲಿ ಚೀನಾದಲ್ಲಿ ಸಹನೆ ಮತ್ತು ಸಹಿಷ್ಣುತೆಯ ದೃಷ್ಟಿಕೋನವನ್ನು ಕಾಪಾಡುವುದು ಮತ್ತು ಜಪಾನಿನ ನ್ಯಾಯಯುತ ಹಾಗೂ ಅಗತ್ಯ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಸರ್ಕಾರದ ಮುಂದಿರುವ ಎಲ್ಲಾ ಸಮಂಜಸ ಮಾರ್ಗಗಳ ಮೂಲಕ ರಕ್ಷಿಸುವುದು. ಚೀನಾದ ಮಹತ್ವಾಕಾಂಕ್ಷೆಗಳನ್ನು ಜಪಾನಿನ ಹಿತಾಸಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುವುದು ಷಿದೆಪರನ ನೀತಿಯ ತಿರುಳಾಗಿದ್ದಿತು.

ವಿದೇಶಾಂದ ಕಚೇರಿಯಲ್ಲಿ ಷಿದೆಪರನ ಮೊದಲ ಅವಧಿಯ ಎರಡು ಸಂದರ್ಭಗಳಲ್ಲಿ, ಚೀನಾದಲ್ಲಿ ಜಪಾನಿನ ಹಿತಾಸಕ್ತಿಗಳ ರಕ್ಷಣೆಗೆ ಜಪಾನ್ ಸೇನಾಪಡೆಗಳನ್ನು ಬೆಳಸಲಿಲ್ಲ. 1925ರಲ್ಲಿ ಕುವೊಸುಂಗ್-ಲಿಂಗ್ ಎಂಬ ಕೆಳದರ್ಜೆಯ ಸೈನ್ಯಾಧಿಕಾರಿ ಮಂಚೂರಿಯಾದಲ್ಲಿ ಚೌಂಗೇ-ತ್ಸೋ-ಲಿನ್‌ನ ವಿರುದ್ಧ ದಂಗೆಯೆದ್ದಾಗ ಜಪಾನ್ ಮುಕದೇನ್ ಪ್ರದೇಶಕ್ಕೆ ಕೆಲವು ಪಡೆಗಳನ್ನು ಕಳುಹಿಸಿತು. ಪುನಃ ಏಪ್ರಿಲ್1927ರಲ್ಲಿ ಹ್ಯಾಂಕೋದಲ್ಲಿ ಜಪಾನಿನ ರಿಯಾಯಿತಿಗಳ (ಸವಲತ್ತುಗಳು) ಮೇಲೆ ದಾಳಿ ಮಾಡಿದ ಚೀನಾದ ಗುಂಪನ್ನು ತಡೆಯಲು ಜಪಾನಿನ ರಾಜತಾಂತ್ರಿಕ ಕಚೇರಿಯ ಮೇಲೆ ದಾಳಿ ಮಾಡಿ ಅನೇಕ ಜಪಾನಿಯಾರನ್ನು ಗಾಯಗೊಳಿಸಿದರೂ ಜಪಾನಿನ ನೌಕಾ ಪಡೆಗಳು ಮಾರ್ಚ್1927ರಲ್ಲಿ ನಾನ್‌ಕಿಂಗ್‌ನ ಮೇಲೆ ನಡೆದ ಆಂಗ್ಲೋ-ಅಮೆರಿಕಾ ಬಾಂಬ್ ದಾಳಿಯಲ್ಲಿ ಭಾಗವಹಿಸಲಿಲ್ಲ.

ಚೀನಾದಲ್ಲಿ ತೀವ್ರವಾಗುತ್ತಿದ್ದ ಅಂತರ್ಯುದ್ಧ ಮತ್ತು ವಿದೇಶಿ ವಿರೋಧಿ ನೀತಿಯ ಎದುರು ಷಿದೆಪರನು ಅನುಸರಿಸಿದ ದುರ್ಬಲ ನೀತಿಯು ಜಪಾನಿನ ಸೈನಿಕವಾದಿಗಳು ಮತ್ತು ಅಧಿಕಾರ ವರ್ಗ ಮತ್ತು ಕೆಲವು ವ್ಯಾಪಾಕಸ್ಥರ ತೀವ್ರ ವಿರೋಧಕ್ಕೆ ಕೀರಣವಾಯಿತು. ಈ ಮನೋಭಾವನೆಯು ವಿಶೇಷವಾಗಿ ಪ್ರಿವಿಕೌನ್ಸಿಲ್‌ನಲ್ಲಿ ಪ್ರಬಲವಾಗಿದ್ದು, ಚೀನಾದ ರಾಷ್ಟ್ರೀಯ ಚಳುವಳಿಯ ಅತ್ಯಂತ ಸಂಧಿಗ್ದ ಸಮಯದಲ್ಲಿ ಏಪ್ರಿಲ್ 1927ರಲ್ಲಿ ಮೊದಲ ವಾಕತ್‌ಸುಕಿ ಮಂತ್ರಿಮಂಡಳವನ್ನು ಬಲವಂತವಾಗಿ ರಾಜಿನಾಮೆ ನೀಡುವಂತೆ ಮಾಡುವ ಮೂಲಕ ತನಕ ಮತ್ತು ಸೀಯಾಕ್ಕೆ ಪಕ್ಷದ ದೃಡವಾದ ನೀತಿಗೆ ದಾರಿಮಾಡಿಕೊಟ್ಟಿತು.ನಂತರ ಸೈನ್ಯವನ್ನು ನಿಯಂತ್ರಿಸುವ ಸೈನಿಕ ವ್ಯಕ್ತಿ ತನಕನ ವಿಫಲತೆಯನ್ನು 'ಸಕಾರಾತ್ಮಕ ನೀತಿ'ಯೆಂದು ಕರೆಯಲಾಗಿದೆ. ಈ ಸಕಾರಾತ್ಮಕ ನೀತಿಯು ನಿಜವಾದ ಚೀನಾ ಮತ್ತು ಮಂಚೂರಿಯಾ ಹಾಗೂ ಪೂರ್ವ ಮಂಗೋಲಿಯಾಗಳ ನಡುವೆ ಜಪಾನ್ ಅಳವಡಿಸಿಕೊಳ್ಳಬಹುದಾದ ಭಿನ್ನ ದೋರಣೆಗಳನ್ನು ಒಳಗೊಂಡಿದೆ.

ತನಾಕನ ಅಧ್ಯಕ್ಷತೆಯಲ್ಲಿ, ಹಣಕಾಸು, ವಿದೇಶಾಂಗ, ನೌಕಾಬಲ ಮತ್ತು ಯುದ್ಧ ಇಲಾಖೆಗಳ ಪ್ರತಿನಿಧಿಗಳು, ರಕ್ಷಣೆ ದಳಗಳ ಮುಖ್ಯಸ್ಥರು, ಕುಮಿಂಟಾಗ್ ಸೇನಯ ದಂಡನಾಯಕ ಜಪಾನಿನಿ ಚೀನಾದ ರಾಯಬಾರಿ ಮತ್ತು ಚೀನಾದಲ್ಲಿನ ಮೂವರು ಮುಖ್ಯ ಸಲಹೆಗಾರರಿ ಭಾಗವಹಿಸಿದ್ದ ವಿದೇಶಾಂಗ ಇಲಾಖೆಯ ಕಚೇರಿಯಲ್ಲಿ ನಡೆದ ಸಮ್ಮೇಳನದಲ್ಲಿ ಸಕಾರಾತ್ಮಕ ನೀತಿಗೆ ಒಂದು ಖಚಿತ ರೂಪವನ್ನು ನೀಡಲಾಯಿತು. (ತನಾಕ ಮೆಮೋರಿಯಲ್ ), ಎಂದು ಕರೆಯಲಾದ, ತನಾಕನ ಸಮ್ಮೇಳನದಲ್ಲಿ ಕೈಗೊಳ್ಳಲಾದ ತೀರ್ಮಾನಗಳನ್ನೊಳಗೊಂಡ ದಾಖಲೆಯು 1929ರಲ್ಲಿ ಮೊದಲು ಪ್ರಕಟಿವಾಯಿತು ಮತ್ತು ನಂತರ 1931ರಲ್ಲಿ ಅನೇಕ ಬಾರಿ ಮರು ಮುದ್ರಣಗೊಂಡು ಜಪಾನಿನ ಪೂರ್ವಲೋಚಿತ ನೀತಿಗೆ ಸಾಕ್ಷಿಯಾಗಿ ವ್ಯಾಪಕವಾಗಿ ಹಂಚಲ್ಪಟ್ಟಿತು.

## 157.6 ಮಂಚೂರಿಯಾ ಬಿಕ್ಕಟ್ಟು, 1931

ಸೆಪ್ಟಂಬರ್ 1931ಕ್ಕೆ ಮೊದಲಿನ ಕಾಲು ಶತಮಾನದಲ್ಲಿ, ಚೀನಾದ ಉಳಿದ ಭಾಗದೊಂದಿಗೆ ಮಂಚೂರಿಯಾವನ್ನು ಬಂದಿಸಿದ್ದ ಗಂಟುಗಳು ಬಲಯುತವಾಗಿ ಬೆಳೆಯುತ್ತಿದ್ದ ಸಮಯದಲ್ಲಿಯೇ ಮಂಚೂರಿಯಾದಲ್ಲಿ ಜಪಾನಿನ ಹಿತಾಸಕ್ತಿಗಳಿಗೆ ಹೆಚ್ಚು ತೊಡಗಿದ್ದವು. ಮಂಚೂರಿಯಾನ್ನು ಚೀನಾದ ಒಂದು ಭಾಗವೆಂದು ಒಪ್ಪಿಕೊಳ್ಳಲಾಗಿದ್ದಿತು. ಆದರೆ ಅದು ಜಪಾನ್ ಪಡೆದುಕೊಂಡಿದ್ದಿ ಅಧವಾ ಅಸಾಧಾರಣ ಹಕ್ಕಿಗಳನ್ನು ಚಲಾಯಿಸುವ ಮೂಲಕ ಚೀನ ತನ್ನ ಸಾರ್ವಭೌಮತ್ವದ ಹಕ್ಕುಗಳನ್ನು ಚಲಾಯಿಸಲು ನಿರ್ಬಂಧವುಂಟು ಮಾಡುತ್ತಿದ್ದು, ಎರಡೂ ದೇಶಗಳ ನಡುವೆ ಘರ್ಷಣೆ ಒಂದು ಸ್ವಾಭಾವಿಕ ಪರಿಣಾಮವಾಗಿತ್ತು. ಕ ್ರ ವ ಿ ೦ ೀ ಣ ಮಂಚೂರಿಯ ಆಯಕಟ್ಟಿನ ದೃಷ್ಟಿಯಿಂದ ಮತ್ತು ಆರ್ಥಿಕವಾಗಿ ಅತ್ಯವಶ್ಯಕವೆಂಬ ಭಾವನೆ ಜಪಾನಿನಲ್ಲಿ ಬೆಳೆಯಿತು. ಅದು ಮಂಚೂರಿಯಾವನ್ನು ತನ್ನ ಮಾರುಕಟ್ಟೆಯನ್ನಾಗಿ ಮಾಡಿಕೊಳ್ಳುವುದು ಮಾತ್ರವಲ್ಲದೆ ಅದರ ಸಂಪನ್ಮೂಲಗಳನ್ನು ಬಳಸಿಕೊಳ್ಳಲೂ ಮತ್ತು ರಷ್ಯಾದ ಮುನ್ನಡೆಯನ್ನು ತಡೆಯಲು ಉಪಯೋಗಿಸಿಕೊಳ್ಳಲು ಭಾಯಿಸಿತ್ತು. ಮಂಚೂರಿಯಾವಿಲ್ಲದೆ ಜಪಾನಿನ ಆರ್ಥಿಕ ವ್ಯವಸ್ಥೆ ನಾಶವಾಗುವುದೆಂಬ ಅಭಿಪ್ರಾಯ ಹುಟ್ಟಿಕೊಂಡಿತು. ಈ ಪರಿಸ್ಥಿತಿಯ ಹಿನ್ನಲೆಯಲ್ಲಿ ಜಪಾನ್ ಆಕ್ರಮಣಕಾರಿ ನೀತಿಯನ್ನು ಅನುಸರಿಸಿತು ಮತ್ತು ಘರ್ಷಣೆಗಳು ನಡೆದು ಪ್ರತಿಯೊಂದು ಘರ್ಷಣೆಯೂ ಚೀನಾ ಮತ್ತು ಜಪಾನುಗಳ ನಡುವೆ ಉದ್ವಿಘ್ನ ಪರಿಸ್ಥಿತಿಯನ್ನು ಹುಟ್ಟುಹಾಕಿತು. ಸೆಪ್ಟಂಬರ್ 18, 1931ರಂದು ಮಂಚೂರಿಯಾದಲ್ಲಿ ಜಪಾನಿಗೆ ಸೇರಿದ್ದ ಒಂದು ರೈಲು ಮಾರ್ಗದ ಮೇಲೆ ಒಂದು ಬಾಂಬ್ ಆಸ್ಫೋಟಿಸಿತು. ಇದರಿಂದ ಹೆಚ್ಚಿನ ನಷ್ಟವಾಗದಿದರೂ ಗಂಭೀರ ಪರಿಣಾಮಗಳುಂಟಾದವು. ಮಂಚೂರಿಯಾವನ್ನು ಪ್ರವೇಶಿಸಿ ಆ ಪ್ರಾಂತದ ಅಸಮರ್ಥ ರಾಜ್ಯಪಾಲನನ್ನು ಶಿಕ್ಷಿಸುವಂತೆ ಜಪಾನ್ ತನ್ನ ಪಡೆಗಳಿಗೆ ಆಜ್ಞಾಪಿಸಿತು. ಮಂಚೂರಿಯಾ ಸರ್ಕಾರವಾಗಲಿ ಚೀನಾವಾಗಲಿ ಜಪಾನಿನ ಸೇನೆಯ ಮುನ್ನಡೆಯನ್ನು ತಡೆಯಲು ಸಾಧ್ಯವಾಗಲಿಲ್ಲ. ಆಕ್ರಮಣವನ್ನು ಉತ್ತಮವಾಗಿ ಯೋಜಿಸಲಾಗಿದ್ದು ಒಂದು ವರ್ಷದ ಅವಧಿಯಲ್ಲಿ ಜಪಾನ್ ಇಡೀ ಮಂಚೂರಿಯಾ ಕ್ಲೆಡ್ ಮತ್ತು ಬೀರ್ಸ್ ರಾಜ್ಯಗಳನ್ನು ಆಕ್ರಮಿಸಿಕೊಂಡಿತು. ಬಲಪ್ರಯೋಗದ ಮೂಲಕ ಜಪಾನ್ ಸೂಮಾರು ಅರ್ಧ ಮಿಲಿಯನ್ ಚದುರ ಮೈಲಿ ಪ್ರದೇಶದ ಮೇಲೆ ತಮ್ಮ ಹತೋಟಿಯನ್ನು ಸ್ಥಾಪಿಸಿತು.ಇದನ್ನು ಸರ್ಕಾರಗಳ ಅಂತರರಾಷ್ಟ್ರೀಯ ಕಾನೂನಿನ ಅಭಿಪ್ರಾಯಗಳು ಯುದ್ಧವೆಂದು ಪರಿಗಣಿಸಲಿಲ್ಲ ಮತ್ತು ಜಪಾನಿಯರು ಅದನ್ನು ಒಂದು ಪ್ರಕರಣವೆಂದು ಸೌಮ್ಯವಾಗಿ ತಳ್ಳಿಹಾಕಿದರು. ಅದು ಶಾಂತಿಯುತ ಯುದ್ಧವಾಗಿತ್ತು ಅಥವ ಯುದ್ಧವೇ ಆಗಿರಲಿಲ್ಲ. ಈ ರೀತಾಯಲ್ಲಿ ಜಪಾನ್ ಮಂಚೂರಿಯಾವನ್ನು ವಶಪಡಿಸಿಕೊಂಡಿತು ಮತ್ತು ಚೀನಾದ ಚಕ್ರವರ್ತಿಯ ಅಧೀನದಲ್ಲಿ ಒಂದು ಕೈಗೊಂಬೆ ಮಂಚೂರಿಯಾ ಸರ್ಕಾರವನ್ನು ಸ್ಥಾಪಿಸಿತು.

ಜಪಾನ್ ಮುಚ್ಚುಮರೆಯಿಲ್ಲದೆ (ಬಹಿರಂಗವಾಗಿ) ಬಲವನ್ನು ಪ್ರಯೋಗಿಸಿತು, ಆದರೆ ಅದು ಕೇವಲ ಒಂದು ಪೋಲೀಸ್ ಕಾರ್ಯಾಚರಣೆಯೆಂದು ವಿಶ್ವಕ್ಕೆ ಸಮಜಾಯಿಸಿ ನೀಡಿತು. ಅದು ಘರ್ಷಣೆಯ ಅವಕಾಶವನ್ನು ಬೆಳೆಸುವ ಅಥವ ವಿಸ್ತರಿಸುವ ಮನಸ್ಸೂ ತನಗಿಲ್ಲವೆಂದು ಹೇಳಿತು. ಕ್ರಮೇಣ ಜಪಾನೇ ಹೇಳಿದ್ದಕ್ಕೂ ಮಾಡಿದ್ದಕ್ಕೂ ನಡುವೆ ಅಪಾರ ವ್ಯತ್ಯಾಸವಿದೆಯೆಂಬುದು ವಿಶ್ವಕ್ಕೆ ಸ್ಪಷ್ಟವಾಯಿತು. ಫ್ರಾನ್ಸ್ ಸ್ಕೂಮನ್ ಅಭಿಪ್ರಾಯ ಪಡುವಂತೆ 1931ರ ನಂತರ, ಜಪಾನಿಯರು ಮಂಚೂರಿಯಾದ ಕಡೆಗೆ ಕಾಲಿಟ್ಟರು ಮತ್ತು ಕೈಗೊಂಬೆ ಮಂಚೂರಿಯಾ ಸರ್ಕಾರವನ್ನು ಸ್ಥಾಪಿಸಿದರು. ಚೀನಾದ ಮೇಲೆ ಸಂಪೂರ್ಣ ಪ್ರಾಬಲ್ಯ ಸ್ಥಾಪಿಸಲು ಜಪಾನ್‌ಪ್ರಯತ್ನಿಸಿದುದು ಹೆಚ್ಚು ಸ್ಪಷ್ಟವಾಗಿತ್ತು.ರಾಷ್ಟ್ರಗಳ ಒಕ್ಕೂಟ ಸಂಘವನ್ನು ಧಿಕ್ಕರಿಸುವ ಮೂಲಕ ಜಪಾನ್ ಸಾರ್ವಜನಿಕ ಅಭಿಪ್ರಾಯವನ್ನು ಕೆರಳಿಸಿತು.

## 157.7 ರಾಷ್ಟ್ರಗಳ ಒಕ್ಕೂಟ ಸಂಘದಲ್ಲಿ ಚೀನಾ ಮತ್ತು ಜಪಾನ್

ಮಂಚೂರಿಯಾದಲ್ಲಿ ಜಪಾನಿನ ಆಕ್ರಮಣಕಾರಿ ಚಟುವಟಿಕೆಗಳ ಬಗ್ಗೆ ಚೀನಾದ ಸರ್ಕಾರ ರಾಷ್ಟ್ರಗಳ ಒಕ್ಕೂಟ ಸಂಘದ ಗಮನವನ್ನು ಸೆಳೆಯಿತು. ರಾಷ್ಟ್ರಗಳ ಒಕ್ಕೂಟ ಸಂಘದಲ್ಲಿ ಜಪಾನಿನ ಪ್ರತಿನಿಧಿಗಳು ಮಂಚೂರಿಯಾವನ್ನು ಆಕ್ರಮಿಸುವುದು ತನ್ನ ಸರ್ಕಾರದ ಉದ್ದೇಶವಲ್ಲವೆಂದೂ ಮತ್ತು ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಏರ್ಪಟ್ಟ ನಂತರ ಜಪಾನಿನ ಪಡೆಗಳನ್ನು ಹಿಂತೆಗೆದುಕೊಳ್ಳುವುದಾಗಿಯೂ ಹೇಳಿತು. ಅದು ಕೇವಲ ಪೋಲೀಸ್ ಕಾರ್ಯಚರಣೆಯೆಂದೂ ಅದು ಹೇಳಿತು. ಜಪಾನ್ ಆಕ್ರಮಣಕಾರನಾಗಿದ್ದರೂ ರಾಷ್ಟ್ರಗಳ ಒಕ್ಕೂಟ ಸಂಘ ಜಪಾನಿನ ವಿರುದ್ಧ ಕ್ರಮ ಕೈಗೊಳ್ಳದಿರಲು ನಿರ್ಧರಿಸಿತು. ಚೀನಾದ ಮನವಿಗೆ ಪ್ರತಿಕ್ರಿಯಿಸುದ ಒಕ್ಕೂಟ ಸಂಘ ಅಕ್ಟೋಬರ್ 24ರಂದು ಒಂದು ಆದೇಶವನ್ನು ಹೊರಡಿಸಿ ದಕ್ಷಿಣ ಮಂಚೂರಿಯಾ ರೈಲು ವಲಯದಿಂದ ಜಪಾನಿನ ಸೇವೆಯನ್ನು ಹಿಂತೆಗೆದುಕೊಳ್ಳುವಂತೆ ತಿಳಿಸಿತು. ಅದನ್ನು ಜಪಾನ್ ಕಡೆಗಣಿಸಿತು. ಒಕ್ಕೂಟ ಸಂಘದ ಭದ್ರತಾ ಸಮಿತಿಯು ಜಪಾನಿನ ಸೈನ್ಯವನ್ನು ನವೆಂಬರ್ 16ರ ಒಳಗೆ ಹಿಂತೆಗೆದು ಕೊಳ್ಳಲೇಬೇಕೆಂದು ಪುನಃ ಆದೇಶಿಸಿತು. ಆದರೆ ಇದನ್ನೂ ಕಡೆಗಣಿಸಲಾಯಿತು. ಜನವರಿ, 18, 1932ರಂದು ಚೀನಿಯರು ಕೆಲವು ಜಪಾನೀ ಬಿಕ್ಷುಗಳನ್ನು ಅಪಮಾನಗೊಳಿಸಿದ್ದರಿಂದ ಷ್ಹಾಂಗ್‌ಯ್ ಘಟನೆ ನಡೆಯಿತು.ಚೀನಿಯರು ಪರಿಹಾರ ನೀಡುವ ಭರವಸೆ ನೀಡಿದ್ದರು ಆದರೆ ಜಪಾನಿಯರು ಚೀನಿಯರನ್ನು ಕೊಲ್ಲಲು ಪ್ರಾರಂಭಿಸಿದರು. ಷ್ಹಾಂಗ್‌ಯ್‌ನಲ್ಲಿ ಜಪಾನಿನ ವಸ್ತುಗಳ ಭಾಹಿಷ್ಕಾರವು ಚೀನಾದ ನಗರಗಳ ಮೇಲೆ ನೌಕಾ ದಾಳಿಗೆ ಅವಕಾಶ ನೀಡಿತು. ಜಪಾನಿನ ಸೇನೆ ಆಗಮಿಸುವವರೆಗೂ ಚೀನಿಯರು ಷ್ಹಾಂಗಾಮ್‌ನಲ್ಲಿ ಪ್ರಬಲ ವಿರೋಧವನ್ನು ತೋರಿದರು. ಮಾರ್ಚ್12ರಂದು ರಾಷ್ಟ್ರಗಳ ಒಕ್ಕೂಟ ಸಂಘದ ಸಾಮಾನ್ಯ ಸಭೆಯು ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಲಿಟ್ಟನ್ನನ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿತು. ಲಿಟ್ಟನ್ ಆಯೋಗವು ನವೆಂಬರ್, 1932ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ವರದಿಯು ಉಭಯ ಪಕ್ಷಗಳನ್ನು ತೃಪ್ತಿಪಡಿಸುವ ಉದ್ದೇಶವನ್ನು ಹೊಂದಿದ್ದಿತು. ಮಂಚೂರಿಯಾದಲ್ಲಿ ಸ್ವಾಯತ್ತಸರ್ಕಾರವನ್ನು ರಚಿಸುವಂತೆ ಚೀನಾಕ್ಕೆ ತಿಳಿಸಲಾಯಿತು. ವರದಿಯು ಜಪಾನ್ ಆಕ್ರಮಣಕಾರನೆಂದು ಗುರುತಿಸುವುದನ್ನು ಕೈಬಿಟ್ಟಿತು. 1933ರಲ್ಲಿ ಒಕ್ಕೂಟ ಸಂಘವು ಲಿಟ್ಟನ್ ವರದಿಯನ್ನು ಒಪ್ಪಿಕೊಂಡಿತು. ವರದಿಯನ್ನು ನಿರಾಕರಿಸಿ ಜಪಾನ್ ಒಕ್ಕೂಟ ಸಂಘದಿಂದ ಹೊರ ನಡೆಯಿತು. ಹೀಗೆ ಒಕ್ಕೂಟದ ದೌರ್ಬಲ್ಯ ಇಡೀ ಪ್ರಪಂಚಕ್ಕೆ ಬಹಿರಂಗವಾಯಿತು.

## 157.8 ಸಾರಾಂಶ

1931ರವರೆಗಿನ ಚೀನಾ-ಜಪಾನ್ ಸಂಬಂಧಗಳ ಕೆಲವು ವಿಷಯಗಳನ್ನು ನಿಮ್ಮೊಂದಿಗೆ ಚರ್ಚಿಸುವುದು ಈ ಘಟಕದಲ್ಲಿ ನಮ್ಮ ಪ್ರಯತ್ನವಾಗಿದೆ.

19ನೇ ಶತಮಾನದಿಂದ 1931ರ ವರೆಗೆ ಜಪಾನಿನೊಂದಿಗೆ ಚೀನಾದ ಸಂಬಂಧಗಳು ಸೌಹಾರ್ದಯುತವಾಗಿರಲಿಲ್ಲ. ಮುಖ್ಯವಾಗಿ ಪ್ರಾದೇಶಿಕ ವಿಸ್ತರಣೆಯಿಂದ ಸಂಬಂಧಗಳು ಹಾಳಾದವು. ಲಾಟಾರೆಟ್ಟೆ ಅಭಿಪ್ರಾಯದಲ್ಲಿ "ಜಪಾನಿನೊಂದಿಗೆ ಸಂಬಂಧಗಳು ಸಂಶಯಾಸ್ಪದ ಮತ್ತು ತೆಳುವಾದ ಮುಸುಕಿನಿಂದ ಮುಚ್ಚಿದ ಹಗೆತನದ ನಿರಂತರ ರೋಗದ ಲಕ್ಷಣದಿಂದ ಕೂಡಿದ್ದವು. ಆಗೊಮ್ಮೆ ಈಗೊಮ್ಮೆ ನೇರ ಘರ್ಷಣೆಗಳು ನಡೆಯುತ್ತಿದ್ದವು. ಕಾಲದಿಂದ ಕಾಲಕ್ಕೆ ತಿಕ್ಕಾಟದ ಬಲವಾದ ಮೂಲಗಳನ್ನು ತೆಗೆದುಹಾಕಲಾಗುತ್ತಿದ್ದಿತು ಮತ್ತು ತಾತ್ಕಾಲಿಕ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತಿದ್ದಿತು" ಚೀನಾ ಮತ್ತು ಜಪಾನ್‌ಗಳ ನಡುವಿನ ಸಂಬಂಧಗಳ ಮುಖ್ಯ ಹಂತಗಳೆಂದರೆ

1. ಚೀನಾ- ಜಪಾನ್‌ಯುದ್ಧ, 1894- 95
2. ಮೊದಲನೆ ಮಹಾಯುದ್ಧ, 1914-18
3. ಚೀನಾದೊಂದಿಗೆ ಜಪಾನಿನ ಸ್ನೇಹಯುತ ಸಂಬಂಧಗಳು (1920ರಿಂದ 1931)
4. ಮಂಚೂರಿಯಾದ ಮೇಲೆ ಜಪಾನಿನ ಆಕ್ರಮಣ

ಕೊರಿಯಾದ ಸಮಸ್ಯೆ 1894-95ರಲ್ಲಿ ಚೀನಾ ಮತ್ತು ಜಪಾನ್‌ಗಳ ನಡುವೆ ಸಶಸ್ತ್ರ ಹೋರಾಟಕ್ಕೆ ಮುಖ್ಯ ಕಾರಣವಾಗಿತ್ತು. ಈ ಯುದ್ಧದಲ್ಲಿ ಚೀನಾ ಸೋತಿತು ಮತ್ತು ಷಿಮನೋಸಕಿ ಒಪ್ಪಂದ ಏರ್ಪಟ್ಟಿತು. ಚೀನಾ ತನ್ನ ಪ್ರದೇಶಗಳಾದ ಫಾರ್ಮೋಸಾ ದ್ವೀಪಗಳು ಪೆಸ್ಕಡೋರಸ್ ಮತ್ತು ಲಿಯೋಟುಂಗ್ ಪರ್ಯಾಯ ದ್ವೀಪವನ್ನು ಜಪಾನಿಗೆ ಬಿಟ್ಟುಕೊಟ್ಟಿತು.

1904ರಿಂದ 1905ರವರೆಗೆ ರಷ್ಯಾ ಮತ್ತು ಜಪಾನುಗಳು ಮಂಚೂರಿಯಾವನ್ನು ಆಕ್ರಮಿಸಲು ಚೀನಾದ ನೆಲದಲ್ಲಿ ಯುದ್ಧ ಮಾಡಿದವು. ಜಪಾನ್ ರಷ್ಯಾವನ್ನು ಸೋಲಿಸಿತು. ಕೊರಿಯಾ ಮತ್ತು ಮಂಚೂರಿಯಾಗಳಲ್ಲಿ ಜಪಾನಿನ ಹಿತಾಸಕ್ತಿಗಳನ್ನು ಮಾನ್ಯಮಾಡಾಯಿತು ಮತ್ತು 1910ರಲ್ಲಿ ಜಪಾನ್ ಕೊರಿಯಾವನ್ನು ಸ್ವಾಧೀನಪಡಿಸಿಕೊಂಡಿತು.

ಕೊರಿಯಾದ ಸೇರ್ಪಡೆಯನಂತರ ಜಪಾನ್ ವಿಸ್ತರಣಾ ನೀತಿ ಮತ್ತು ಸಾಮ್ರಾಜ್ಯಷಾಹಿ ಶೋಷಣೆಯ ನೀತಿಯನ್ನು ಅನುಸರಿಸಿತು. ಇದರ ಪರಿಣಾಮವಾಗಿ ಜಪಾನ್ ಮಂಚೂರಿಯಾವನ್ನು ವಶಪಡಿಸಿಕೊಂಜಡಿತು ಮತ್ತು ಆ ದೇಶದಲ್ಲಿ ಪರ್ಯಾಯ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿತು. ಆದರೆ ಚೀನಾ ಜಪಾನಿನ ಅಧೀನತೆಯ ಸ್ಥಾನವನ್ನು ಒಪ್ಪಲು ಸಿದ್ಧವಿರಲಿಲ್ಲ. ಪರಿಣಾಮವಾಗಿ ಜಪಾನ್ ಕಠಿಣ ಸಮಯವನ್ನು ಎದುರಿಸಬೇಕಾಯಿತು. ಅಂತಿಮವಾಗಿ ಚೀನಾ ಜಪಾನ್ ಘರ್ಷಣೆಯು ವಿಶ್ವದ ಎಲ್ಲಾ ರಾಷ್ಟ್ರಗಳನ್ನು ಸಂಪೂರ್ಣ ಒಳಗೊಂಡ ಎರಡನೇ ಮಹಾಯುದ್ಧದ ಒಂದು ಭಾಗವಾಯಿತು.

## 157.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

I ಕೆಳಗಿನ ಹೇಳಿಕೆಗಳಿಗೆ ಸರಿ(✓) ಅಥವಾ (X) ತಪ್ಪು ಎಂದು ಗುರುತಿಸಿ

(ಅ) ಕಿಂಗ್ವಾ ಒಪ್ಪಂದವು 1876ರಲ್ಲಿ ಜಪಾನ್ ಮತ್ತು ಕೋರಿಯಾಗಳ ನಡುವೆ ಏರ್ಪಟ್ಟಿತು( )

(ಆ) ಷಿಮನೋಸಕಿ ಒಪ್ಪಂದವು 1885ರಲ್ಲಿ ಕೌಂಟ್ ಇಟೊ ಮತ್ತು ಲೀ- ಹುಂಗ್‌ಚೌಂಗ್ ನಡುವೆ ಏರ್ಪಟ್ಟಿತು ( )

(ಇ) ಜಪಾನ್ 1910ರಲ್ಲಿ ಕೊರಿಯಾವನ್ನು ಸೇರ್ಪಡೆಗೊಳಿಸಿಕೊಂಡಿತು ( )

(ಈ) ಯುವಾನ್ ಕ್ಷಿಕಾಯ್ ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಪ್ರಧಾನಿಯಾಗಿದ್ದದು( )

(ಉ) ಜಪಾನ್ ಪುಮಿಯ ಅಧೀನದಲ್ಲಿ ಮಂಚೂರಿಯಾ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿತು ( )

**II ಈ ಕೆಳಗಿನವುಗಳ ಬಗ್ಗೆ ಐದು ಸಾಲುಗಳನ್ನು ಬರೆಯಿರಿ.**

i) ಕೌಂಟ್ ಈಟೊ

ii) ಟಾಂಗ್ ಹಾಕ್

iii) ಬರೋನ್ ಕೋರ್ಮಾ

iv) ಷಿದೆಪರ ನೀತಿ

III ಇವುಗಳ ಮೇಲೆ ಎರಡು ಪುಟಗಳಷ್ಟು ಉತ್ತರ ಬರೆಯಿರಿ.

1. ಷಿಮನೋಸಕಿ ಒಪ್ಪಂದ (1895)ದ ವರೆಗಿನ ಚೀನಾ-ಜಪಾನ್‌ಸಂಬಂಧಗಳನ್ನು ಸಂಕ್ಷಿಪ್ತವಾಗಿ ವಿಮರ್ಶಿಸಿ.

2. 1905ರಿಂದ 1922ರವರೆಗಿನ ಚೀನಾ-ಜಪಾನ್ ಸಂಬಂಧಗಳನ್ನು ಚರ್ಚಿಸಿ.

3. ಮಂಚೂರಿಯಾ ಬಿಕ್ಕಟ್ಟಿನ ಬಗ್ಗೆ ಒಂದು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ.

## 157.10 ಅಧ್ಯಯನಕ್ಕೆ ಗ್ರಂಥಗಳು


Storney : History of Modern Japan

William Barry : Modern Japan

Milton W. Meyer : History of the Far East.


ಇಂಗ್ಲಿಷ್ ಮೂಲ: ಎಸ್. ಮೀರ್ ಸಮಿವುಲ್ಲ.

ಅನುವಾದ : ಕೆ.ಬಿ.ಚಂದ್ರ.

## ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

Mukthagangotri, Mysore - 570 006

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ❁ **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✛ **M.Ed Study Centres : 06**


Multimedia learning material
STUDENT
INSTRUCTIONAL SYSTEM